వేసమునిములు

ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ,
ಬೆಂಗಳೂರು-೧೮.

V, 2 N20
3328

ಕನ್ನಡ ಸಾಹಿತ್ಯ ಪರಿಷತ್ತು, ಪುಸ್ತಕ ಭಂಡಾರ,
ಬೆಂಗಳೂರು-೧೮.

సాగము సముట

V, 2 N20

KARNATAKA VIDYAVARDHAKA SANGHA
DHARWAR
ಧಾರವಾಡ

# ಬೇಗಮುಸಮುರು

ಬೆಲೆ ೭ ಆಣೆ.

ಸರಸ್ವತೀ ಭಂಡಾರ
ಪರಿಷತ್ತು
ಕಾದಂಬರಿ. ಇ
ಕ್ರ. ಸಂ

3328
44
ಧ 206

# ಬೇಗಮುಸಮುರು.

**ಲೇಖಕ:—ಎಸ್. ಎ. ಕುಲಕರ್ಣಿ,**

ಅ. ಮಾಸ್ತರ ಗಜೇಂದ್ರಗಡ.

ಬೆಳಗಾವಿಯೊಳಗೆ ದೇವೇಂದ್ರ ಘಡೆಪ್ಪಾ ಚೌಗುಲೆ ಇವರು ತಮ್ಮ ಶ್ರೀಮಹಾವೀರ ಮುದ್ರಣಾಲಯದಲ್ಲಿ ಮುದ್ರಿಸಿದರು.

ಮುತ್ತು

ಧಾರವಾಡದೊಳಗೆ ಶ್ರೀ. ನಾರಾಯಣರಾವ ದೇಶಪಾಂಡೆ, ಬಿ. ಎ. ಎಲ್‌ಎಲ್. ಬಿ. ಇವರು ಕರ್ನಾಟಕ ವಿದ್ಯಾವರ್ಧಕ ಸಂಘದ ಆಫಿಸದಲ್ಲಿ ಪ್ರಕಟಸಿದರು.

[ ಸರ್ವಾಧಿಕಾರವು ಗ್ರಂಥಕರ್ತೃವಿನದಾಗಿದೆ. ]

ಜಾನೆವಾರಿ ೧೯೨೦.

**ಬೆಲೆ: ೬ ಆಣೆ.**

# ನಿವೇದನ.

**ವಾಚಕಮಹಾಶಯ,**

ಇದೊಂದು ಚರಿತ್ರೆಯ ಪುಸ್ತಕವು. ನಾನು ಇದನ್ನು ವಂಗೀಯ ಸುಪ್ರಸಿದ್ಧ ಐತಿಹಾಸಿಕ ಲೇಖಕರಾದ ವ್ರಜೇಂದ್ರನಾಥ ವಂದ್ಯೋಪಾಧ್ಯಾಯರ ಇದೇ ಹೆಸರಿನ ಪುಸ್ತಕವನ್ನವಲಂಬಿಸಿ ಬರೆದಿದ್ದೇನೆ. ಇದರಲ್ಲಿ ನನ್ನ ಚಾತುರ್ಯವಾಗಲಿ, ಪರಿಶ್ರಮವಾಗಲಿಇಲ್ಲ. ಆದರೆ ಮೂಲಗ್ರಂಥಕಾರರು ಇದನ್ನು ಬಹು ಪರಿಶ್ರಮಬಟ್ಟು ಬರೆದಿರುವದರಲ್ಲಿ ಸಂದೇಹವಿಲ್ಲ; ಯಾಕಂದರೆ ಅವರು ದುರ್ಲಭವಾದ ಅನೇಕ ಗ್ರಂಥಗಳನ್ನೂ ಲೇಖಗಳನ್ನೂ ಸಂಗ್ರಹಿಸಿ, ಅವನ್ನು ಪ್ರಯಾಸಪೂರ್ವಕವಾಗಿ ಅಭ್ಯಾಸಮಾಡಿ, ಈ ಪುಸ್ತಕವನ್ನು ರಚಿಸಿದ್ದಾರೆ. ಈ ಗ್ರಂಥದಲ್ಲಿರುವ ಪ್ರಮಾಣಗಳನ್ನು ನೋಡಿದ್ದಾದರೆ, ನಿಮಗೆ ಇದರ ಸತ್ಯತೆಯು ಒಡೆದುಕಾಣುವದರಲ್ಲಿ ಸಂದೇಹವಿಲ್ಲ.

ಕನ್ನಡದಲ್ಲಿ ಚರಿತ್ರೆಯ ಪುಸ್ತಕಗಳು ಕಡಿಮೆ. ಅದರಲ್ಲಿಯೂ ಪ್ರಮಾಣಬದ್ಧವಾಗಿ ಬರೆದ ಚರಿತ್ರೆಯ ಗ್ರಂಥಗಳು ವಿರಳ. ಅದಕ್ಕಾಗಿ ನಾನು ಈ ಪುಸ್ತಕವನ್ನು ಮೂಲ ಗ್ರಂಥದಲ್ಲಿರುವಂತೆ ಸಾಧಾರವಾಗಿ ಬರೆಯಲು ಯತ್ನಿಸಿದ್ದೇನೆ. ಇದರಲ್ಲಿರುವ ಉದ್ದುದ್ದವಾದ ಇಂಗ್ಲೀಷ ಟಿಪ್ಪಣೆಗಳು ನಿಮಗೆ ಬೇಸರವನ್ನುಂಟುಮಾಡಬಹುದು. ಆದರೂ ಅವು ಚರಿತ್ರೆಯ ಸತ್ಯಾಸತ್ಯತೆಯನ್ನು ತೋರ್ಪಡಿಸುವದಕ್ಕೆ ಸಹಾಯಕಾರಿಗಳಾದ್ದರಿಂದ ಅವನ್ನು ಇಲ್ಲಿ ಕೊಡಬೇಕಾಯಿತು.

ಕರ್ನಾಟಕ ವಿದ್ಯಾವರ್ಧಕಸಂಘವು, ಇದರಿಂದ ಹೊರಡಿಸಲ್ಪಡುತ್ತಿರುವವಾಗ್ಭೂಷಣವೂ ಬಹು ದಿವಸಗಳಿಂದ ಸ್ವ-ಭಾಷಾ-



ಮಾತೆಯ ಉದ್ಧಾರಕ್ಕಾಗಿ ಪ್ರಯತ್ನ ಮಾಡುತ್ತಿವೆಯಷ್ಟೇ? ನನ್ನ ಪ್ರಥಮ ಪ್ರಯತ್ನವಾದ ಈ ಚರಿತ್ರಲೇಖನವು ಸಫಲವಾಗುವಂತೆ ಮಾಡಿದುದಕ್ಕಾಗಿ, ನಾನು ಸಂಘಕ್ಕೂ, ಸಂಘದ ಚಾಲಕರಿಗೂ ತುಂಬಾ ಕೃತಜ್ಞನಾಗಿರುವೆನು. ಕಾರಣ ನಾನು ಈ ಪುಸ್ತಕವನ್ನು ಕರ್ನಾಟ ವಾಙ್ಮಯದ ಬೆಳವಣಿಗೆಗಾಗಿ ಮುಂದುವರಿದಿರುವ ಸಂಘಕ್ಕೆ ಸಾದರದಿಂದ ಅರ್ಪಿಸಿದ್ದೇನೆ.

**ಗಜೇಂದ್ರಗಡ**
೧೬.೧೨.೧೯೧೯.

ಕನ್ನಡಿಗರ ಸೇವಕ,
**ಎಸ್. ಎ. ಕುಲಕರ್ಣೀ.**

A-3328

# ಬೇಗಮ್‌ಸಮರು.

## ಉಪೋದ್ಘಾತ.

ನಾವು ಮುಂದೆ ಹೇಳುತ್ತಿರುವ ಕಾಲದಲ್ಲಿ ಬ್ರಿಟಿಶರ ಅಧಿಕಾರವು ಹಿಂದುಸ್ತಾನದಲ್ಲಿ ಪೂರ್ಣವಾಗಿ ನೆಲೆಗೊಂಡಿರಲಿಲ್ಲ. ಅದು ಮೊಗಲರ ಅಧಃಪತನ ಹಾಗೂ ಬ್ರಿಟಿಶರ ಅಭ್ಯುದಯ ಇವುಗಳ ಸಂಧಿಕಾಲವು. ಆ ವೇಳೆಯಲ್ಲಿ ನಾಲ್ಕೂ ಕಡೆಯಲ್ಲಿ ವಿದ್ರೋಹ, ಅಶಾಂತಿ, ಪರಸ್ಪರ ವಿರೋಧಸಂಗತಿಗಳು ಯುಗಪರಿವರ್ತನವನ್ನು ಸೂಚಿಸುತ್ತಲಿದ್ದವು. ಆಗ ಭಾರತದ ಬೇರೆ ಬೇರೆ ಭಾಗಗಳಲ್ಲಿ ಉತ್ಥಾನಪತನಗಳ ಅಭಿನಯವು ನಡೆದಿತ್ತು. ಹೆಚ್ಚೇನು. ಆಗ ಹಿಂದುಸ್ತಾನವು ಭಾಗ್ಯವಿಪರ್ಯಾಸದ ಲೀಲಾಕ್ಷೇತ್ರವಾಗಿತ್ತೆಂದು ಹೇಳಬಹುದು; ಇಂತಹ ವಿರೋಧಕಾಲದಲ್ಲಿ ಒಬ್ಬ ಅಪ್ರಸಿದ್ಧಳಾದ ಅರಬಕುಮಾರಿಯು ತನ್ನ ಹೀನ ಅವಸ್ಥೆಯಿಂದ ಹೇಗೆ ಪ್ರಸಿದ್ಧಿಗೆ ಬಂದಳು, ತನ್ನ ಅನನ್ಯ ಸಾಧಾರಣ ಬುದ್ಧಿಕೌಶಲ್ಯದಿಂದಲೂ, ಬಾಹುಬಲದಿಂದಲೂ ತನ್ನ ಮರ್ಯಾದೆಯನ್ನು ಕಾಯ್ದುಕೊಂಡು ರಾಜ್ಯಕಾರಭಾರ ಮಾಡಲಿಕ್ಕೆ ಹೇಗೆ ಸಮರ್ಥಳಾದಳು, ಮತ್ತು ತನ್ನ ಜೀವನಸಂಧ್ಯಾಕಾಲದಲ್ಲಿ ಸಂಚಿತವಾದ ವಿಪುಲ ಧನರಾಶಿಯನ್ನು ಸತ್ಕಾರ್ಯದಲ್ಲಿ ವೆಚ್ಚಮಾಡಿ ಅಕ್ಷಯ ಕೀರ್ತಿಯನ್ನು ಹೇಗೆ ಸಂಪಾದನಮಾಡಿದಳು, ಈ ವಿಸ್ಮಯಜನಕವಾದ ವಿವರಣೆಯು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿದೆ. ಈ ಅಸಾಧಾರಣ ಶಕ್ತಿಶಾಲಿನಿಯು. ಬೇಗಮ್‌ಸಮರು ಎಂಬ ಹೆಸರಿನಿಂದ ಪರಿಚಿತಳಾಗಿದ್ದಾಳೆ. ದಿಲ್ಲೀಶ್ವರನಾದ ಶಹಾಲಮನು ಇವಳನ್ನು ಸಾಮ್ರಾಜನ ಪ್ರಿಯತಮ ಪುತ್ರಿಯೆಂದು ಸನ್ಮಾನಮಾಡಿದನು. ಆಗಿನ ಕಾಲದ ಗವ್ಹರ್ನರಜನರಲ್ಲನಾದ ಲಾರ್ಡ ಬೆಂಟಿಂಕನು ಇವಳನ್ನು ಹೊಗಳಿದ್ದಾನೆ. ಬೇಗಮುಸಮರುವಿನ ಜೀವನ

ಚರಿತ್ರೆಯೂ ಘಟನಾವಿಚಿತ್ರತೆಯೂ ಕಾದಂಬರಿಗಿಂತಲೂ ಚಿತ್ತಾಕರ್ಷಕವಾಗಿವೆ. ಬಹಳವೇಕೆ; ಕಾಲ್ಪನಿಕ ಕಥೆಗಳಿಗಿಂತಲೂ ವಿಚಿತ್ರವಾಗಿವೆ. ಇದಕ್ಕಾಗಿಯೇ ಇತಿಹಾಸಜ್ಞನಾದ ಕೀನನು ( H. G. Keen ) ಹೀಗೆ ಹೇಳಿದ್ದಾನೆ— "Such was the splendid termination of the slave girl 's careeraromance scarcely to be out done by the most inventive fiction "

---

## ೧ನೆಯ ಅಧ್ಯಾಯ.

ಹದಿನೆಂಟನೆಯ ಶತಮಾನದ ಕಡೆಯ ಅರ್ಧಭಾಗದಿಂದ ಹತ್ತೊಂಬತ್ತನೆಯ ಶತಮಾನದ ಪ್ರಾರಂಭದ ವರೆಗಿನ ಕಾಲವು— ಈ ಅಲ್ಪ ಕಾಲವು—ಹಿಂದು ಜನರ ಬಹು ವಿಪತ್ತಿನ ಸಮಯವು. ಬಾಬರನ ಸಾಮರ್ಥ್ಯದಿಂದ ಸ್ಥಾಪಿತವಾದ, ಅಕಬರನ ರಾಜನೀತಿಕೌಶಲದಿಂದ ದೃಢವಾದ ಮೊಗಲಸಾಮ್ರಾಜ್ಯವು ಈ ಅವಧಿಯಲ್ಲಿ ಬಲಹೀನನಾದ— ಕೇವಲ ನಾಮಧಾರಿ ಮೊಗಲಸಾಮ್ರಾಜಶಹಾಲಮನು ಮಹಾರಾಷ್ಟ್ರರು, ಶೀಕರು, ಜಾಟರು ಇವರಿಂದ ಸುತ್ತುಗಟ್ಟಲ್ಪಟ್ಟವನಾಗಿ ಕಾಲಹರಣಮಾಡುತ್ತಿದ್ದನು. ಬಲವಂತರು ಸಾಮ್ರಾಜನ ಅಧೀನತವನ್ನು ಅಲ್ಲಗಳೆದು ಸ್ವತಂತ್ರರಾಗಲಿಕ್ಕೆ ಯತ್ನಿಸುತ್ತಿದ್ದರು. ಅದರಿಂದ ಭಾರತದಲ್ಲಿ ಎಲ್ಲ ಕಡೆಯಲ್ಲಿಯೂ ರಣಕೋಲಾಹಲವು; ಅಂತರ್ವಿದ್ರೋಹವು ಪ್ರಜ್ವಲಿಸಹತ್ತಿದೆ. ಇಂತಹ ವೇಳೆಯಲ್ಲಿ ಯುರೋಪದ ಅನೇಕ ದೇಶಗಳ ನಿವಾಸಿಗಳು ಐಶ್ವರ್ಯ ಅಧಿಕಾರಲಾಭಗಳ ಆಶೆಯಿಂದ ಈ ದೇಶದ ಅರಸರನ್ನಾಶ್ರಯಿಸಿದರು. ಒಬ್ಬ ಇತಿಹಾಸಲೇಖಕನು ಈ ಜನರ ವಿಷಯವಾಗಿ ಈ ಮೇರೆಗೆ ಹೇಳಿರುವನು:— " ಇವರಲ್ಲಿ ಬಹಳ

---

*"The very dross of society men would neither read nor keep themselves so ber ".



ಜನರು ನಿರಕ್ಷರಿಗಳೂ ಹೀನತರಗತಿಯವರೂ ಇದ್ದರು. ಆದರೂ ಇವರಲ್ಲಿ ಸದ್ವಂಶಜಾತರೂ, ಉದಾರಹೃದಯರೂ ಎಷ್ಟುಮಾತ್ರವೂ ಇರಲಿಲ್ಲವೆಂದು ಹೇಳಲಾಗದು. ದೇಬೊಯಾನ್, ಜಾರ್ಜಟೌಮನ್ ದುದ್ರೇನೇಕ ಮೊದಲಾದವರು ಸಮರಕುಶಲರಾಗಿದ್ದರು. ಇವರು ಈ ದೇಶದ ಅರಸರ ಸೈನ್ಯದಲ್ಲಿ ಸೇರಿ ಅವರಿಗೆ ಪಾಶ್ಚಾತ್ಯಯುದ್ಧವಿದ್ಯೆಯನ್ನು ಕಲಿಸುತ್ತಿದ್ದರು. ಆದರೆ ಈ ಜನರ ಸಂಖ್ಯೆಯು ತೀರ ಅಲ್ಪವಿತ್ತು. ಹಿಂದುಸ್ತಾನವು ರತ್ನಮಯವಾಗಿದೆಯೆಂದು ಆ ಕಾಲದ ಯುರೋಪಿಯನರ ಗ್ರಹಿಕೆಯು. ಮತ್ತು ಅತ್ಯಲ್ಪಕಾಲದಲ್ಲಿಯೇ ಬೇಕಾದಷ್ಟು ಧನವನ್ನು ಸಂಗ್ರಹಿಸಿಕೊಂಡು ಹೋಗಬಹುದೆಂದು ಅವರ ದೃಢವಾದ ನಂಬಿಗೆಯಿತ್ತು. ಅವರ ಈ ವಿಶ್ವಾಸವು ಸಟೆಯಾಗಿರಲಿಲ್ಲ. ಬಾಹುಬಲ, ಬುದ್ಧಿಬಲಗಳುಳ್ಳ ಅನೇಕ ಜನರು ಈ ದೇಶಕ್ಕೆ ಬಂದು ಅತ್ಯಲ್ಪಕಾಲದಲ್ಲಿಯೇ ಬೇಕಾದಷ್ಟು ಧನವನ್ನು ಗಳಿಸಿಕೊಂಡು ತಮ್ಮ ದೇಶಕ್ಕೆ ಹೋಗುತ್ತಿದ್ದರು. ಇವರ ಮುಖದಿಂದ ಭಾರತದ ಅತುಲಸಂಪತ್ತಿಯ ಕಥೆಯನ್ನು ಕೇಳಿ ಬೇರೆ ಜನರು ಭಾಗ್ಯಪರೀಕ್ಷೆಗಾಗಿ ಇಲ್ಲಿಗೆ ಬಂದರು; ಅನೇಕರು ಸಫಲಮನೋರಥರಾದರು.

ಈ ಅರ್ಥಲಾಲಸರಲ್ಲಿ ವಾಲ್ಟರ ರೀನಹಾರ್ಡನೊಬ್ಬನು. ಈ ಅಜ್ಞಾತಕುಲಶೀಲನಾದ ಜರ್ಮನ್ ಯುವಕನು ಒಂದು ಫ್ರೆಂಚ ಹಡಗದಲ್ಲಿ ಸಾಮಾನ್ಯ ಚಾಕರನಾಗಿ ಹಿಂದುಸ್ತಾನಕ್ಕೆ ಬಂದನು. ಹಡಗವು ಹಿಂದುಸ್ತಾನದ ದಂಡೆಯನ್ನು ಮುಟ್ಟಿದೊಡನೆಯೇ ಇವನು ಫ್ರೆಂಚಸೈನ್ಯದಲ್ಲಿ ಪ್ರವೇಶಿಸಿದನು. ಕೆಲವು ಕಾಲದವರೆಗೆ ದಕ್ಷಿಣಹಿಂದುಸ್ತಾನದ ಹಲವು ಕಡೆಯಲ್ಲಿ ಕೆಲಸಮಾಡಿ ಬಂಗಾಲಕ್ಕೆ ಹೋದನು. ಅಲ್ಲಿ ಕೆಲವು ಕಾಲ ಈಸ್ಟಇಂಡಿಯಾ ಕಂಪನಿಯ ನವಕರನಾಗಿದ್ದನು. ಮತ್ತೆ ಕೆಲವು ಕಾಲ ಚಂದ್ರನಗರದ ಫ್ರೆಂಚ ಸೈನ್ಯದಲ್ಲಿ ಕೆಲಸಮಾಡಿದನು. ಕಡೆಗೆ ಮೀರಕಾಶೀಮನ ದಂಡಿನಲ್ಲಿ ಆಶ್ರಯಹೊಂದಿದನು. ಬ್ರಿಟಿಶರ ಅನು

ಗ್ರಹದಿಂದ ನಬಾಬನಾದ ಮೀರಕಾಶೀಮನು ಈ ಅವಧಿಯಲ್ಲಿ ಇಂಗ್ಲಿಷರ ಅಧೀನತಾಪಾಶವನ್ನು ಹರಿದುಬಿಡುವದರಲ್ಲಿ ಉದ್ಯುಕ್ತನಾಗಿದ್ದನು. ಅದರಿಂದ, ತನ್ನ ಸೈನ್ಯಕ್ಕೆ ಪಾಶ್ಚಾತ್ಯ ಯುದ್ಧವಿದ್ಯೆಯನ್ನು ಕಲಿಸುವದಕ್ಕಾಗಿ ಸಾಹಸಿಗಳಾದ ಯುರೋಪಿಯನ್ನರಿಗೆ ಆಶ್ರಯಕೊಡುತ್ತಿದ್ದನು. ಅದರಿಂದ ರೀನಹಾರ್ಡನ ಮನೋರಥವು ಸುಲಭವಾಗಿ ಕೈಗೂಡಿತು.

ರೀನಹಾರ್ಡನ ಮುಖದಲ್ಲಿ ಸೌಂದರ್ಯದ ಲೇಶವೂ ಇರಲಿಲ್ಲ. ಅವನ ವಿಷಣ್ಣ ಆಕೃತಿ, ಗಂಭೀರ ಪ್ರಕೃತಿಗಳಿಗಾಗಿ ಅವನ ಗೆಳೆಯರು ಅವನನ್ನು ಸೊಂಬರನೆಂದು ( Sombre ) ಕರೆಯುತ್ತಿದ್ದರು. ಕ್ರಮವಾಗಿ ಅವನ ನಿಜವಾದ ಹೆಸರು ಪರಿವರ್ತಿತವಾಗಿಹೋಯಿತು. ಅವನ ಸೊಂಬರನೆಂಬ ಹೆಸರು ಸಮರುವಾಗಿ ಪರಿಣಮಿಸಿತು. ಕಾಗದಪತ್ರಗಳಲ್ಲಿಯೂ ಕೂಡ ರೀನಹಾರ್ಡನೆಂಬ ಹೆಸರು ಉಳಿಯಲಿಲ್ಲ.

ಸನ್ ೧೭೬೩ನೆಯ ಅಗಸ್ಟ ೨ರಲ್ಲಿ ಮೀರಕಾಶೀಮನಿಗೂ, ಇಂಗ್ಲಿಷರಿಗೂ ಆದ ಗಿರಿಯಾದ ಕಾಳಗದಲ್ಲಿ ಸಮರುವು ವಿಶೇಷ ರಣಚಾತುರ್ಯವನ್ನು ತೋರಿಸಿ ಪ್ರಸಿದ್ಧನಾದನು. ದೈವವು ಅನುಕೂಲವಾದಲ್ಲಿ ಸಾಮಾನ್ಯ ಮನುಷ್ಯನೂ ಕೂಡ ಶ್ರೇಷ್ಠತೆಯನ್ನು ಪಡೆಯುವನು; ಅದರಂತೆ ಸಮರುವೂ ಉನ್ನತಿಯನ್ನು ಹೊಂದಿದನು. ಅವನ ರಣಚಾತುರ್ಯದಿಂದ ಮೀರಕಾಶೀಮನು ಸಂತುಷ್ಟನಾದನು. ಚಿರಕಾಲ ಅವನ ಆಶೆಯು ಮೀರಕಾಶೀಮನ ಕೃಪಾದೃಷ್ಟಿಯಿಂದ ಪೂರ್ಣವಾಯಿತು.

ಸನ್ ೧೭೬೩ನೆಯ ಅಕ್ಟೋಬರ ತಿಂಗಳಲ್ಲಿ ಮೀರಕಾಶೀಮನ ಅಪ್ಪಣೆಯಿಂದ ಪಾಟಣಾದ ಕೊಲೆಯನ್ನು ಮಾಡಿ ಸಮರುವು ಇತಿಹಾಸದ ಪುಟವನ್ನು ಕಲಂಕಿತಮಾಡಿದನು. ಇಂದಿಗೂ ಪಾಟಣಾದ ಸ್ಮೃತಿಸ್ತಂಭವು ಆ ಕಲಂಕದ ಕಥೆಯನ್ನು ಉಜ್ವಲವಾದ ಅಕ್ಷರಗಳಿಂದ ಸಾರಿಹೇಳುತ್ತಿರುವದು.



" Walter Reinhardtalias Sumroo a base renegade. "

ಇದಾದ ತುಸು ದಿವಸಗಳಲ್ಲಿಯೇ ಬಕ್ಸಾರದ ಕಾಳಗದಲ್ಲಿ ಮೀರಕಾಶೀಮನು ಪೂರ್ಣ ಪರಾಜಿತನಾದನು. ಬಳಿಕ ಸಮರುವು ತನ್ನ ಸೈನ್ಯವನ್ನು ತೆಗೆದುಕೊಂಡು ಅಯೋಧ್ಯೆಯ ನಬಾಬನ ಸೈನ್ಯದಲ್ಲಿ ಆಶ್ರಯಹೊಂದಿದನು. ಬ್ರಿಟಿಶರು ಸಮರುವನ್ನು ತಮ್ಮ ಕೈವಶಮಾಡುವದಕ್ಕೆ ಅಯೋಧ್ಯೆಯ ನಬಾಬನಿಗೆ ಆಜ್ಞಾಪಿಸಿದರು. ಇದನ್ನು ಸಮರುವು ಮೊದಲೇ ತಿಳಿದು ತನ್ನ ಸೈನ್ಯವನ್ನು ತೆಗೆದುಕೊಂಡು ರೋಹಿಲಖಂಡದ ರಹಿಮತ್‌ಅಲ್ಲಿಯ ಕೈಕೆಳಗೆ ಕೆಲಸಮಾಡಿದನು. ಅಲ್ಲಿ ಅವನು ಬಹಳ ದಿವಸವಿರಲಿಲ್ಲ. ಯಾಕಂದರೆ ವಿಜಯಿಗಳಾದ ಬ್ರಿಟಿಶರ ಸಮೀಪದಲ್ಲಿರುವದು ನಿರಾಪದವಲ್ಲೆಂದು ಅವನು ಭಾವಿಸಿದನು. ಅದರಿಂದ ಅವನು ತನ್ನ ಸೈನ್ಯದೊಡನೆ ಭರತಪುರಕ್ಕೆ ಹೋಗಿ ಅಲ್ಲಿಯ ಜಾಟರಾಜನಾದ ಜವಾರಸಿಂಗನ ಆಶ್ರಯದಲ್ಲಿ ನಿಂತುಕೊಂಡನು. ಸನ್ ೧೭೬೮ನೆಯ ಜೂನ ತಿಂಗಳಲ್ಲಿ ಜವಾರಸಿಂಗನು ಮೃತನಾದನು. ಅವನ ತರುವಾಯ ರತನಸಿಂಹನು ಅರಸನಾದನು. ಇವನ ಆಶ್ರಯದಲ್ಲಿ ಸಮರುವು ೨-೩ ತಿಂಗಳವರೆಗೆ ಇದ್ದನು. ಮುಂದೆ ಕೆಲವು ದಿವಸ ದಿಲ್ಲಿಯ ಒಬ್ಬ ಸೇನಾನಾಯಕನಲ್ಲಿ ಕೆಲಸಮಾಡಿದನು. ಕಡೆಗೆ ಶಹಾಲಮನ ಬಲಗೈಯಂತಿರುವ ನಜಫಖಾನನ್ನು ಆಶ್ರಯಿಸಿದನು. ಅಲ್ಲಿ ಅವನ ವೇತನವು ೬೫೦೦೦ ರೂಪಾಯಿ ಇದ್ದಿತು. ಬಹುರಾಜರ ಸೇವೆಮಾಡಿದ ಚಂಚಲಚಿತ್ತನಾದ ಸಮರುವು ಈಗ ಸ್ಥಿರನಾದನು. ತನ್ನ ಸೈನ್ಯದ ಪೋಷಣಕ್ಕಾಗಿ ಸಾಮ್ರಾಜನಿಂದ ಸನ್ ೧೭೭೪ ರಲ್ಲಿ ೬ ಲಕ್ಷ ರೂಪಾಯಿ ಉತ್ಪನ್ನಬರುವ ಸರ್ಧಾನಾ ಪರಗಣೆಯನ್ನೂ ಅದರ ಸಮೀಪದ ಭೂಮಿಯನ್ನೂ ಇನಾಮಾಗಿ ಪಡೆದನು. ಮತ್ತು ಇದೇ ಕಾರ್ಯದಲ್ಲಿ ತನ್ನ ಯಾವತ್ತು ಆಯುಷ್ಯವನ್ನು ಕಳೆದನು.

## ೨ನೆಯ ಅಧ್ಯಾಯ.

೧೭೬೭ ರಲ್ಲಿ ಭರತಪುರದ ಜಾಟರಾಜನ ಅಧೀನದಲ್ಲಿರುವ ಸಮರುವು ದಿಲ್ಲಿಯನ್ನು ಮುತ್ತಿದನು. ಆಗ ಸಮರುವಿಗೂ ಒಬ್ಬ ಅರಬಕುಮಾರಿಗೂ ಪರಿಚಯುವಾಯಿತು. ಈ ಪ್ರಾಯಕ್ಕೆ ಬಂದ ಕುಮಾರಿಯು ರೂಪಲಾವಣ್ಯಕ್ಕೆ ಸಮರುವು ಮೋಹಿತನಾದನು; ಅರಬ ಕುಮಾರಿಯಾದರೂ ಸಮರುವನ್ನು ಪ್ರೀತಿಸಿದಳು. ಈ ಪವಿತ್ರ ಪ್ರೇಮವನ್ನು ಸ್ಥಿರಮಾಡುವದಕ್ಕಾಗಿ ಸಮರುವು ಅವಳನ್ನು ಮುಸಲ್ಮಾನರ ಪದ್ಧತಿಯಂತೆ ವಿವಾಹಮಾಡಿಕೊಂಡನು. ಈ ಅರಬಕುಮಾರಿಯೇ ಬೇಗಮ್‌ಸಮರು.

ಬೇಗಮುಸಮ್‌ರುವಿನ ವಂಶದ ವಿಷಯವಾಗಿ ಮತಭೇದವುಂಟು. ಬೇರೆ ಬೇರೆ ಲೇಖಕರ ಸಂಗತಿಗಳನ್ನು ಆಲೋಚಿಸಲಾಗಿ ತಿಳಿಯುವದೇನಂದರೆ—ಮಿರತದ ವಾಯುವ್ಯಕ್ಕೆ ೩೦ ಮೈಲು ದೂರದಲ್ಲಿರುವ ಕೋಟನಾಗ್ರಾಮದಲ್ಲಿ ಲತಿಫ್‌ಅಲ್ಲಿಖಾ ಎಂಬ ಪ್ರಸಿದ್ಧ ಅರಬ ಗೃಹಸ್ಥನಿದ್ದನು. ಅವನಿಗೆ ಇಬ್ಬರು ಹೆಂಡಿರು. ಎರಡನೆಯ ಹೆಂಡತಿಯು ಹೊಟ್ಟೆಯಲ್ಲಿ ಸುಮಾರು ೧೭೫೦ ನೆಯ ಇಸವಿಯಲ್ಲಿ ಅತ್ಯಂತ ರೂಪಲಾವಣ್ಯಮಯಳಾದ ಕನ್ಯೆಯೋರ್ವಳು ಜನಿಸಿದಳು. ಈ ಹುಡುಗೆಯು ೬ ವರ್ಷದವಳಾದಾಗ ತಂದೆಯು ತೀರಿದನು. ಅವನ ಮೊದಲಿನ ಹೆಂಡತಿಯು ಒಬ್ಬ ಮಗನಿದ್ದನು. ಅವನೇ ತಂದೆಯ ಯಾವತ್ತು ಸಂಪತ್ತಿಗೆ ಒಡೆಯನಾದನು. ತಂದೆಯು ತೀರಿದೊಡನೆ ಆ ದುರ್ವೃತ್ತನಾದ ಮಗನು ಮಲತಾಯಿಯನ್ನೂ ತಂಗಿಯನ್ನೂ ಗೋಳಾಡಿಸತೊಡಗಿದನು. ತಾಯಿಯೂ ಮಗಳೂ ನಿರ್ವಾಹವಿಲ್ಲದೆ ಕೆಲವು ದಿವಸ ಅಲ್ಲಿಯೇ ಇರಬೇಕಾಯಿತು. ಬರಬರುತ್ತ ಮಲಮಗನ ಪೀಡೆಯು ಬಹಳವಾದದರಿಂದ ತಾಯಿಯು ಮಗಳೊಡನೆ ದಿಲ್ಲಿಯಲ್ಲಿ ವಾಸಮಾಡತೊಡಗಿದಳು. ಮಗಳ ವಿವಾಹವು ಸಮರುವಿನೊಡನೆ ಆದ ಸಂಗತಿಯನ್ನು ಹಿಂದೆ ಹೇಳಿದ್ದೇವೆ.



ವಿವಾಹವಾದ ನಂತರ ಅರಬಕುಮಾರಿಗೆ ಬೇಗಮುಸಮರು ಎಂಬ ಹೆಸರುಂಟಾಯಿತು.

ಈ ದೇಶಕ್ಕೆ ಬಂದಾಗ ಸಮರುವು ಜನ್ಮಭಾಷೆಯಿಂದ ಮಾತಾಡುತ್ತಿದ್ದನು. ಮತು ಯುರೋಪಿಯನ್ನರಂತೆ ಬಟ್ಟೆಗಳನ್ನು ಧರಿಸುತ್ತಿದ್ದನು. ಚಂದ್ರನಗರವನ್ನು ಬಿಟ್ಟ ಬಳಿಕ ಸ್ವಜಾತಿಯ ವಸ್ತ್ರಗಳನ್ನೂ, ಆಚಾರವ್ಯವಹಾರಗಳನ್ನೂ ಬಿಟ್ಟು ಮೊಗಲರಂತೆ ವರ್ತಿಸತೊಡಗಿದನು. ಬೇಗಮ್‌ಸಮರುವಿನ ವಿವಾಹ ಕಾಲದಲ್ಲಿ ಸಮರುವಿಗೆ ಉನ್ಮಾದರೋಗಗ್ರಸ್ತಳಾದ ಬೇರೊಬ್ಬ ಹೆಂಡತಿಯಿದ್ದಳು.

ಬೇಗಮ್‌ಸಮರುವು ಅಸಾಧಾರಣ ಬುದ್ಧಿಮತಿಯಾದ ಹೆಂಗಸು. ಅವಳು ಅತ್ಯಲ್ಪ ಕಾಲದಲ್ಲಿಯೇ ಸಮರುವನ್ನು ತನ್ನ ವಶದಲ್ಲಿಟ್ಟುಕೊಂಡಳು. ಸಮರವಿಜಯಿಯಾದ ಶೂರ ಸಮರುವು ಹೆಂಡತಿಯ ರೂಪಕ್ಕೆ ಮೋಹಿತನಾದನು. ಗುಣಗಳಿಗೆ ಮನಸೋತನು; ಅದರಿಂದ ಜೀವನದ ಇಷ್ಟಾಭಿಲಾಷೆಗಳಿಗೆ ಜಲಾಂಜಲಿಯನ್ನು ಕೊಟ್ಟು, ಶಾಂತವೃತ್ತಿಯಿಂದ ಜೀವನಯಾತ್ರೆಯನ್ನು ಸಾಗಿಸತೊಡಗಿದನು. ಮದುವೆಯಾದ ತರುವಾಯ ಸಮರುವು ಯಾವ ಯುದ್ಧಕಾರ್ಯದಲ್ಲಿಯೂ ಮನಸ್ಸು ಹಾಕಲಿಲ್ಲ. ಜೀವನದ ಅವಶಿಷ್ಟಕಾಲವನ್ನು ಸುಖದಿಂದ ಸರ್ಧಾನಾದಲ್ಲಿ ಕಳೆಯುವದನ್ನು ನಿಶ್ಚಯಿಸಿದ್ದನು. ಅವನ ಈ ಮನಃಪ್ರವೃತ್ತಿಗೆ ಬೇಗಮಳೇ ಮೂಲಕಾರಣಳೆಂದು ಹೇಳುವ ಕಾರಣವಿಲ್ಲ. ಸಮರುವು ಪೂರ್ಣವಾಗಿ ತನ್ನ ಕೈವಶವಾದದ್ದನ್ನು ತಿಳಿದು, ಬೇಗಮಳು ಒಂದೊಂದೇ ಕಾರ್ಯವನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳಹತ್ತಿದಳು. ಗುಣಕ್ಕೆ ಮರುಳಾದ ಸಮರುವು ಪ್ರತಿಬಂಧಮಾಡಲಿಲ್ಲ. ವೀರನ ಈ ಪರಾಜಯಕ್ಕೆ ಚಿತ್ತದುರ್ಬಲತೆಯು ಹೊರತು ಬೇರೆ ಕಾರಣವಿಲ್ಲ.

ಸಮರುವು ತನ್ನ ಜೀವಿತದ ಕಡೆಯ ಭಾಗದಲ್ಲಿ ಆಗ್ರಾದ ಶಾಸನಭಾರವನ್ನು ವಹಿಸಿದ್ದನು. ಇವನು ೧೭೭೮ ನೆಯ ಮೇ ೪ ನೆಯ ತಾರೀಖಿನ ದಿವಸ ಆಗ್ರಾದಲ್ಲಿ ತೀರಿಕೊಂಡನು. ಮೊದಲು

ಸ್ವಂತ ಉದ್ಯಾನದಲ್ಲಿ ಅವನ ಸಮಾಧಿಯಾಯಿತು. ಮುಂದೆ ಬೇಗಮಳು ಶವವನ್ನು ಅಗ್ರಾದ ಪುರಾತನ ಕ್ಯಾಥೊಲಿಕ್ ಸಮಾಧಿಸ್ಥಳಕ್ಕೆ ಒಯ್ದಳು. ಬೇಗಮಳ ಗರ್ಭದಲ್ಲಿ ಸಮರುವಿಗೆ ಮಕ್ಕಳಾಗಲಿಲ್ಲ. ಆದರೆ ಅವನ ಮೊದಲಿನ ಮುಸಲ್ಮಾನ ಹೆಂಡತಿಯ ಹೊಟ್ಟೆಯ ಒಬ್ಬ ಮಗನಿದ್ದನು. ಅವನು ಇತಿಹಾಸದಲ್ಲಿ ಜಾಫರ ಇಯಾಬ ಎಂಬ ಹೆಸರಿನಿಂದ ಪರಿಚಿತನಾಗಿದ್ದಾನೆ.

ಸಮರುವು ತೀರಿಕೊಂಡಾಗ ಅವನ ಮಗನು ಚಿಕ್ಕವನಿದ್ದನು. ಅದರಿಂದ ಯಾವತ್ತು ಸೈನಿಕರು ಬೇಗಮಳೇ ತಮ್ಮ ಒಡೆಯಳಾಗಬೇಕೆಂದು ಇಚಿಸಿದರು. ಮತ್ತು ಅದರಂತೆ ಸಾಮ್ರಾಜನಿಗೆ ವಿನಂತಿಮಾಡಿಕೊಂಡರು. ಸಾಮ್ರಾಜನ ಅಪ್ಪಣೆಯಿಂದ ಬೇಗಮಳ ಪಟ್ಟಾಭಿಷೇಕ ಕಾರ್ಯವು ನಡೆದು ಹೋಯಿತು. ಬೇಗಮಳು ಸಮರುವಿನ ಯಾವತ್ತು ಸಂಪತ್ತಿಗೆ ಅಧಿಕಾರಿಣಿಯಾದಳು. ಮತ್ತು ಸೈನ್ಯದ ಯಾವತ್ತು ಸೂತ್ರಗಳನ್ನು ತನ್ನ ಕೈಯಲ್ಲಿಟ್ಟುಕೊಂಡಳು.

ಪತಿಯು ತೀರಿಕೊಂಡ ೩ ವರ್ಷಗಳ ತರುವಾಯ ಅಂದರೆ, ೧೭೮೧ ನೆಯ ಮೇ ೧ ನೆಯ ತಾರೀಖಿನ ದಿವಸ ಬೇಗಮಳೂ ಅವಳ ಮಗನೂ ಅಗ್ರಾದಲ್ಲಿ ಕ್ಯಾಥೊಲಿಕ್ ಧರ್ಮವನ್ನು ಸ್ವೀಕರಿಸಿದರು. ಈ ಸಮಯದಲ್ಲಿ ಬೇಗಮಳು 'ಜೋಯಾನಾ ನೋಬಿಲಿಯಸ್' ಎಂಬ ಹೆಸರನ್ನೂ, ಅವಳ ಮಲಮಗನು 'ವಾಲ್ಟರ ವ್ಯಾಲಖಾಜರ ರೀನ್ ಹಾರ್ಡ' ಎಂಬ ಹೆಸರನ್ನೂ ಧರಿಸಿದರು.

ಇದಾದ ಅತ್ಯಲ್ಪ ದಿವಸಗಳಲ್ಲಿಯೇ ಜಾರ್ಜ ಟಾಮಸನೆಂಬೊಬ್ಬ ಅಯರಿಶ್ ಮನುಷ್ಯನು ನಾನಾಸ್ಥಾನಗಳಲ್ಲಿ ತಿರುಗಾಡಿ ಬೇಗಮಳ ಆಶ್ರಯದಲ್ಲಿ ಬಂದು ನಿಂತನು. ಯಾವ ರೀತಿಯಿಂದ ಇವನು ಹಿಂದುಸ್ಥಾನಕ್ಕೆ ಬಂದನೆಂಬದು ಸ್ಪಷ್ಟವಾಗಿ ತಿಳಿಯುವಂತಿಲ್ಲ. ಇವನು ಬ್ರಿಟಿಶ್ ಹಡಗದ ನಾವಿಕನಾಗಿ ಈ ದೇಶಕ್ಕೆ ಬಂದನೆಂದು ಕೆಲವರು ಹೇಳುವರು. ಹಡಗದ ಕೆಲಸವನ್ನು ಬಿಟ್ಟು ಕೆಲವು ದಿವಸ ಮದ್ರಾಸಿನಲ್ಲಿ ಕೆಲಸ ಮಾಡಿದನು. ಮುಂದೆ ೧೭೮೧ ರಲ್ಲಿ



ದಿಲ್ಲಿಗೆ ಬಂದು ಬೇಗಮಸಮರುವಿನ ಸೇನೆಯ ಪ್ರವೇಶಿಸಿದನು.

ಬೇಗಮ್‌ಸಮರುವು ಜನರ ಸ್ವಭಾವವನ್ನು ತೀವ್ರವೇ ತಿಳಿದುಕೊಳ್ಳುತ್ತಿದ್ದಳು. ಅದರಿಂದ ಪ್ರತಿಭಾಶಾಲಿಯಾದ ಟಾಮಸನನ್ನು ಅಲ್ಪ ದಿವಸಗಳಲ್ಲಿಯೇ ಅಧಿನಾಯಕನನ್ನು ಮಾಡಿದಳು. ಟಾಮಸನು ಬೇರೆ ಬೇರೆ ಪ್ರಸಂಗಗಳಲ್ಲಿ ತನ್ನ ಚಾತುರ್ಯವನ್ನು ತೋರಿಸಿ, ಬೇಗಮಳ ಪ್ರೀತಿಯನ್ನು ಸಂಪೂರ್ಣವಾಗಿ ಪಡೆದನು. ಅದರಿಂದ ಟಾಮಸನು ಸರ್ವ ಸೇನಾನಾಯಕರಲ್ಲಿ ಮೇಲಾದನು. ಟಾಮಸನ ಅಧೀನದಲ್ಲಿರುವ ಬೇಗಮಳ ಸೈನ್ಯವು ಸುಶಿಕ್ಷಿತವಾಗಿ ಪ್ರಬಲವಾಯಿತು. ಸೈನ್ಯದ ವೀರತ್ವವನ್ನೂ, ರಣನೈಪುಣ್ಯವನ್ನೂ ನೋಡಿ, ಎಲ್ಲರೂ ಬೇಗಮಳನ್ನು ಭೀತಿದೃಷ್ಟಿಯಿಂದ ನೋಡತೊಡಗಿದರು.

## ೩ನೆಯ ಅಧ್ಯಾಯ.

ಈ ಅವಧಿಯಲ್ಲಿ ಹಿಂದುಸ್ಥಾನದ ಎಲ್ಲ ಕಡೆಯಲ್ಲಿ ವಿದ್ರೋಹ, ಅಶಾಂತಿ; ಮಹಾರಾಷ್ಟ್ರ ವೀರನಾದ ಮಹದಾಜಿ ಸಿಂದೆಯು ದಿಲ್ಲೀಶ್ವರನ ಪ್ರತಿನಿಧಿಯು—ಆರ್ಯಾವರ್ತದ ಭಾಗ್ಯವಿಧಾತನು. ಜಯನಗರದ ಅರಸನಾದ ಪ್ರತಾಪಸಿಂಹನು ಬಂಡು ಮಾಡಿದನು. ಮಹದಾಜಿಯು ಎಷ್ಟೋ ಸೈನ್ಯವನ್ನು ತೆಗೆದುಕೊಂಡು ಅವನನ್ನು ಶಿಕ್ಷಿಸುವದಕ್ಕೆ ಹೊರಟನು. ಆದರೆ ಸಿಂದೆಯ ಪಕ್ಷದ ಅನೇಕ ಮೊಗಲ ಸೈನಿಕರು ಪ್ರತಾಪಸಿಂಹನಿಗೆ ವಶರಾಗಿ ಸಹಾಯಮಾಡಿದರು. ಅದರಿಂದ ಸಿಂದೆಯು ಪರಾಜಿತನಾದನು. ವಿದ್ರೋಹಿ ಜನರನ್ನು ಶಿಕ್ಷಿಸುವದಕ್ಕಾಗಿ ಹೊಸ ಸೈನ್ಯ ಕೂಡಿಸುವದು ಸಿಂದೆಗೆ ಅವಶ್ಯವಾಗಿತ್ತು. ಅದರಿಂದ ಸಿಂದೆಯು ಗ್ವಾಲ್ಹೇರದಲ್ಲಿರಹತ್ತಿದನು.

ರಾಜಧಾನಿಯಾದ ದಿಲ್ಲಿಯಲ್ಲಿ ಶಹಾನಿಜಾಮುದ್ದೀನನು ಸಿಂದೆಯ ಪ್ರತಿನಿಧಿಯಾಗಿದ್ದನು. ಅವನು ಒಡೆಯನ ಪರಾಜಯದ ವರ್ತಮಾನವನ್ನ ಕೇಳಿ ರಾಜಧಾನಿಯನ್ನು ಸುರಕ್ಷಿತ ಮಾಡುವದಕ್ಕೆ

ಯತ್ನಿಸತೊಡಗಿದನು. ಅವನ ಈ ಕೃತ್ಯವು ಅವಶ್ಯಕವಾದದ್ದೆಂದು ಮುಂದಿನ ಸಂಗತಿಗಳಿಂದ ತಿಳಿಯುವದು.

೧೭೮೭ ರಲ್ಲಿ ಗುಲಾಮಖಾದಿರಖಾನು ಸಹರಾವಪುರದ ಅರಸನಾಗಿದ್ದನು. ಅವನು ಸ್ವತಂತ್ರನಾಗುವದಕ್ಕೆ ಇದೊಳ್ಳೆಯ ಸಮಯವೆಂದು ತಿಳಿದು ಶಹಾಲಮನ ವಿದ್ರೋಹಿಯಾದನು. ಸಾಮ್ರಾಜನ ನಾಜಿರನಾದ ಅಕೃತಜ್ಞ ಮನಸುರ ಅಲ್ಲಿಖಾನು, ಶತ್ರುವಾದ ಗುಲಾಮಖಾದಿರನ ಪಕ್ಷವನ್ನು ಹಿಡಿದನು. ಅವನು ಸುಯೋಗವನ್ನು ತಿಳಿದುಕೊಂಡು ಗುಲಾಮಖಾದಿರನಿಗೆ ದಂಡೆತ್ತಿ ಬರುವದಕ್ಕೆ ಆಮಂತ್ರಣ ಕೊಟ್ಟನು. ಗುಲಾಮಖಾದಿರನು ಎಷ್ಟೋ ಸೈನ್ಯ ತೆಗೆದುಕೊಂಡು ಯಮುನೆಯ ಪೂರ್ವ ತೀರದಲ್ಲಿ ಬಂದಿಳಿದನು. ಈ ಸುದ್ದಿಯು ಸಿಂದೆಯ ಪ್ರತಿನಿಧಿಗೆ ತಿಳಿದು, ಶತ್ರುಸೈನ್ಯವನ್ನು ಶಿಕ್ಷಿಸುವದಕ್ಕೆ ಪ್ರಬಲ ಸೈನ್ಯವನ್ನು ಕಳಿಸಿದನು. ಈ ಸೈನ್ಯವು ನದಿಯನ್ನು ದಾಟುತ್ತಿರುವಷ್ಟರಲ್ಲಿಯೇ ಗುಲಾಮಖಾದಿರನ ಸೈನ್ಯವು ಒಮ್ಮಿಂದೊಮ್ಮೆ ಆಕ್ರಮಣಮಾಡಿತು. ಅದರಿಂದ ದಿಲ್ಲಿಯ ಸೈನ್ಯವು ನಾಶವಾಗಿ ಹೋಯಿತು. ಸಿಂದೆಯ ಪ್ರತಿನಿಧಿಯು ಈ ಪರಾಜಯದ ವರ್ತಮಾನವನ್ನು ಕೇಳಿ ಭೀತನಾದನು. ಮುಂದೇನು ಮಾಡಬೇಕೆಂಬದು ಅವನಿಗೆ ತಿಳಿಯಲಿಲ್ಲ. ಅವನು ತನ್ನ ಪ್ರಾಣ ರಕ್ಷಣೆಗಾಗಿ ದಿಲ್ಲಿಯಿಂದ ದಕ್ಷಿಣಕ್ಕೆ ೨೦ ಮೈಲಿನ ಮೇಲಿರುವ ಬಲ್ಲಮಗಡದಲ್ಲಿ ವಾಸಮಾಡತೊಡಗಿದನು.

ಇದರಿಂದ ಗುಲಾಮಖಾದಿರನ ಬಯಕೆಯು ಪೂರ್ಣವಾಯಿತು. ಅವನು ಯಾವ ತೊಂದರೆಯೂ ಇಲ್ಲದೆ ದಿಲ್ಲಿಯನ್ನು ಪ್ರವೇಶಿಸಿದನು. ಸಾಮ್ರಾಜನು ನಿರುಪಾಯನಾದನು—ಕೇವಲ ಅರಕ್ಷಿತನಾದನು. ಗುಲಾಮಖಾದಿರನು ಸಾಮ್ರಾಜನಿಗೆ ಅನೇಕ ರೀತಿಯಿಂದ ಪೀಡೆಯನ್ನುಂಟುಮಾಡತೊಡಗಿದನು. ತನಗೆ ಅಮಿರಉಲ್ ಉಮರನೆಂಬ ಪದವಿಯನ್ನು ಕೊಡಬೇಕೆಂದು ಒತ್ತಾಯದಿಂದ ಹೇಳಿದನು. ಸಾಮ್ರಾಜನ ಇಚ್ಛೆಯಿರದಿದ್ದರೂ ಇದಕ್ಕೆ ಒಪ್ಪಬೇಕಾಯಿತು.



ಗುಲಾಮಖಾದಿರನ ಇಚ್ಛೆಯು ಪೂರ್ಣವಾದರೂ, ಅವನು ದಿಲ್ಲಿಯನ್ನು ಪೂರ್ಣವಾಗಿ ಕೈವಶ ಮಾಡಿಕೊಂಡಂತಾಗಿರಲಿಲ್ಲ. ಯಾಕಂದರೆ ಮಹಾರಾಷ್ಟ್ರರ, ಮತ್ತು ಸಾಮ್ರಾಜನ ಪಕ್ಷದ ಎಷ್ಟೋ ಜನರು ದಿಲ್ಲಿಯಲ್ಲಿದ್ದರು. ಅವರು ಸಾಮ್ರಾಜನ ಈ ಶೋಚನೀಯ ಸ್ಥಿತಿಯನ್ನು ನೋಡಿ, ಗುಲಾಮಖಾದಿರನ ಅನ್ಯಾಯವನ್ನು ತಿಳಿದು ಇದರ ಪ್ರತೀಕಾರಕ್ಕಾಗಿ ದೃಢಸಂಕಲ್ಪ ಮಾಡಿದರು. ಇವರಲ್ಲಿ ಬೇಗಮುಸಮರುವು ಅಗ್ರಣಿಯಾಗಿದ್ದಳು.

ಸಿಂದೆಯು ದಿಲ್ಲಿಯನ್ನು ಬಿಟ್ಟುಹೋದಾಗ ಸಾಮ್ರಾಜ್ಯದ ರಕ್ಷಣೆಯ ಯಾವತ್ತು ಭಾರವನ್ನು ಬೇಗಮಳಿಗೆ ವಹಿಸಿದ್ದನು. ಈ ಗುರುತರ ಕಾರ್ಯವನ್ನು ಒಬ್ಬ ಅಬಲೆಯ ಮೇಲೆ ಒಪ್ಪಿಸುವದಕ್ಕೆ ಬೇಗಮಳ ವಿಷಯವಾಗಿ ಸಿಂದೆಯಲ್ಲಿ ಪೂರ್ಣ ವಿಶ್ವಾಸವಿರುವದೇ ಮುಖ್ಯಕಾರಣವು. ಬೇಗಮಳು ಸಾಮ್ರಾಜನ ಉದ್ಧಾರಕ್ಕೆ ಸಿದ್ಧಳಾದದ್ದನ್ನು ತಿಳಿದು ಎಲ್ಲರೂ ಸಂತುಷ್ಟರಾದರು.

ನಾಮಧಾರಿಯಾದ ಸಾಮ್ರಾಜನ ಈ ದುರವಸ್ಥೆಯನ್ನು ತಿಳಿದು ಬೇಗಮಳು ಶತ್ರುನಾಶಕ್ಕಾಗಿ ಮುಂದುವರಿದಳು. ಗುಲಾಮಖಾದಿರನು ಬೇಗಮಳ ಶಕ್ತಿಯನ್ನು ಮೊದಲೇ ತಿಳಿದಿದ್ದನು. ಬೇಗಮಳು ತನಗೆ ವಿರೋಧವಾಗಿರುವದು ಸರಿಯಲ್ಲವೆಂದು ಅವನು ಭಾವಿಸಿದನು. ಅದರಿಂದ ಅವನು ಬೇಗಮಳು ತನಗೆ ಸಹಾಯಕಳಾದರೆ ದಿಲ್ಲಿಯ ರಾಜ್ಯಶಾಸನವನ್ನು ಸಮಭಾಗದಿಂದ ಸಾಗಿಸಬಹುದೆಂದು ವಿನಯದಿಂದ ಹೇಳಿಕಳಿಸಿದನು. ಗುಲಾಮಖಾದಿರನ ಈ ಪ್ರಸ್ತಾವಕ್ಕೆ ಬೇಗಮಳು ಒಪ್ಪಿಕೊಂಡಿದ್ದರೆ ಅವಳ ಐಶ್ವರ್ಯಕ್ಕೆ ಕೊರತೆಯಿರಲಿಲ್ಲ. ಅವಳು ಅರ್ಧ ದಿಲ್ಲಿಯ ಅಧಿಕಾರಿಣಿಯಾಗುತ್ತಿದ್ದಳು. ಆದರೆ ಬೇಗಮಳು ಇದಕ್ಕೆ ಒಪ್ಪಲಿಲ್ಲ. ಅವಳು ಸಾಮ್ರಾಜನ ವಿಷಯವಾಗಿರುವ ತನ್ನ ಕರ್ತವ್ಯವನ್ನು ಸ್ಮರಿಸಿದಳು. ಅದರಿಂದ ಕೃತಘ್ನ ರೋಹಿಲಸರದಾರನ ವಿನಂತಿಯನ್ನು ತಿರಸ್ಕಾರದಿಂದ ಅಸಮ್ಮತಿಸಿದಳು. ಮತ್ತು ಸೈನ್ಯಸಹಿತವಾಗಿ ಅರಮನೆಗೆ ಬಂದಳು. ಸಮ್ರಾ

ಜನ ರಕ್ಷಣೆಗಾಗಿ ಜೀವದಾಶೆಯನ್ನು ಬಿಟ್ಟು ಯುದ್ಧಕ್ಕೆ ಸಿದ್ಧಳಾಗಿರುವದನ್ನು ಶತ್ರುವಿಗೆ ತಿಳಿಸಿದಳು. ಬೇಗಮಳ ಈ ಸಾಹಸಕಾರ್ಯದಿಂದ ದಿಲ್ಲೀಶ್ವರನು ಪುನಃ ಆಶಾನ್ವಿತನಾದನು.

ಬೇಗಮಳ ಈ ವರ್ತನದಿಂದ ಗುಲಾಮಖಾದಿರನು ಕ್ರುದ್ಧನಾದನು. ಬೇಗಮಳನ್ನು ತೀವ್ರವೇ ಅರಮನೆಯಿಂದ ಹೊರಗೆ ಹಾಕದಿದ್ದಲ್ಲಿ ಪ್ರಾಸಾದದ ಮೇಲೆ ಸಾಗಿಬರುವೆನೆಂದು ಬಾದಶಹನಿಗೆ ಹೇಳಿ ಕಳಿಸಿದನು. ಗುಲಾಮಖಾದಿರನ ಈ ಅಪ್ಪಣೆಯನ್ನು ಬಾದಶಹನು ತಿರಸ್ಕರಿಸಿದನು. ಕ್ರುದ್ಧ ಗುಲಾಮಖಾದಿರನು ಅರಮನೆಯ ಮೇಲೆ ಅಗ್ನಿವೃಷ್ಟಿಯನ್ನು ಸುರಿಸಿದನು. ಬೇಗಮಳು ಸುಮ್ಮನೆ ಕೂಡಲಿಲ್ಲ. ಸಾಹಸದಿಂದ ಪ್ರತೀಕಾರಕ್ಕೆ ಮುಂದುವರಿದಳು. ನಿರ್ಭೀತಳಾದ ನಾರಿಯ ದೃಢಪ್ರತಿಜ್ಞೆ, ಅಪೂರ್ವ ವೀರತ್ವ, ಅವಳ ಸೈನಿಕರ ಅಪರಿಮಿತ ಸಾಹಸಗಳನ್ನು ನೋಡಿ ಗುಲಾಮಖಾದಿರನಿಗೆ ಜಯದಾಶೆಯು ಇಲ್ಲದಂತಾಯಿತು. ಅವನ ಅಗ್ನಿವೃಷ್ಟಿಯು ನಿರುಪಯೋಗವಾಯಿತು. ಪರಾಜಿತನಾಗಿ ಉಪಾಯವಿಲ್ಲದೆ ಪಲಾಯನ ಮಾಡಬೇಕಾಯಿತು. ಇದರಿಂದ ಬಾದಶನ ಸಂಕಟವು ದೂರವಾಯಿತು. ಆದರೂ ಬಾದಶಹನಿಗೆ ಸ್ಥಿರವಾದ ಶಾಂತಿಯು ದೊರೆಯಲಿಲ್ಲ.

ರಾಜಧಾನಿಯಲ್ಲಿ ನಡೆದಿರುವ ಅವ್ಯವಸ್ಥೆಯನ್ನು ನೋಡಿ ಎಷ್ಟೋ ಜಮೀನದಾರರು ಸ್ವತಂತ್ರರಾಗಲಿಚ್ಛಿಸಿದರು; ಎಷ್ಟೋ ನಬಾಬರು ಬಾದಶಹನ ಅಧೀನತ್ವವನ್ನು ತೆಗೆದುಹಾಕುವದಕ್ಕೆ ಪ್ರಯತ್ನಿಸಿದರು. ಇವರಲ್ಲಿ ನಾಜಫಕುಲಿಯು ಒಬ್ಬನು. ೧೭೬೮ರಲ್ಲಿ ಸಮ್ರಾಜನು ನಾಜಫಕುಲಿಯನ್ನು ಶಿಕ್ಷಿಸುವದಕ್ಕೆ ಹೊರಟನು. ಬಾದಶಹನೊಡನೆ ಬೇಗಮಳೂ ಇದ್ದಳು. ನಾಜಫಕುಲಿಯು ಗೋಕುಲಗಡದ ನಬಾಬನಾಗಿದ್ದನು. ಶಹಾಲಮನು ಗೋಕುಲಗಡವನ್ನು ಮುತ್ತಿದನು. ಅವರು ಬಾದಶಹನ ಸೈನಿಕರು! ಅವರಲ್ಲನೇ



ಕರು ಸುಲಿಗೆ, ಮದ್ಯಪಾನ ಮೊದಲಾದ ಅತ್ಯಾಚಾರಗಳಲ್ಲಿ ಮಗ್ನರಾದರು; ಸೈನಿಕರ ಕರ್ತವ್ಯಗಳನ್ನು ಮರೆತುಬಿಟ್ಟರು. ಸೈನಿಕರ ಈ ಅವ್ಯವಸ್ಥೆಯು ನಾಜಫಕುಲಿಗೆ ಗುಪ್ತಚಾರರಿಂದ ತಿಳಿಯಿತು. ಅವನು ಇದು ಸುಸಮಯವೆಂದು ಭಾವಿಸಿದನು. ಸಾಮ್ರಾಜನ ಸೈನಿಕರು ಬಹು ರಾತ್ರಿಯವರೆಗೆ ಗಾಯನ, ನಾಚು, ಮದ್ಯಪಾನ ಮೊದಲಾದ ಅತ್ಯಾಚಾರಗಳಲ್ಲಿ ಮಗ್ನರಾಗಿ ಸುಖನಿದ್ರೆಯನ್ನು ಮಾಡುತ್ತಿರುವಾಗ ನಾಜಫಕುಲಿಯು ಒಮ್ಮೆಲೆ ಅವರ ಮೇಲೆ ಬಿದ್ದನು. ಅನೇಕ ಮೊಗಲ ಸೈನಿಕರು ಹತರಾದರು. ಉಳಿದವರು ಕಂಗೆಟ್ಟು ಪಲಾಯನ ಮಾಡಿದರು. ಇದರಿಂದ ಜೀವನಮರಣಗಳ ಸಂಧಿಸ್ಥಲದಲ್ಲಿರುವ ಸಾಮ್ರಾಜನು ಏನು ಮಾಡಬೇಕೆಂಬದು ತಿಳಿಯದೆ ಪಾಳೆಯವನ್ನು ಬಿಟ್ಟು ಓಡಿಹೋಗುವ ಆಲೋಚನೆಯಲ್ಲಿದ್ದನು. ಆದರೆ ಅವನ ಈ ಆಲೋಚನೆಯು ಸಫಲವಾಗಲಿಲ್ಲ. ಒಬ್ಬ ಮಹಾಶಕ್ತಿಶಾಲಿನಿಯಾದ ರಮಣಿಯು ಬಾದಶಹನನ್ನು ಈ ಆಲೋಚನೆಯಿಂದ ತಿರುಗಿಸಿದಳು. ಆ ರಮಣಿಯು ಬೇಗಮುಸಮರು!

ಸಾಮ್ರಾಜನು ಭಯಂಕರ ಸಂಕಟಕ್ಕೆ ಗುರಿಯಾದನು. ಪಲಾಯನದ ಹೊರತು ಅವನಿಗೆ ಬೇರೆ ಉಪಾಯವೇ ಇಲ್ಲ. ಶತ್ರುಸೈನ್ಯವು ಅವನನ್ನು ಸೆರೆಹಿಡಿಯುವದಕ್ಕೆ ಮುಂದುವರಿದಿದೆ. ಈ ಸಮಯದಲ್ಲಿ ಬೇಗಮಳು ತನ್ನ ಸೈನ್ಯಸಹಿತ ದಕ್ಷಿಣಕ್ಕೆ ತುಸು ಅಂತರದ ಮೇಲಿರುವ ತನ್ನ ಪಾಳೆಯದಲ್ಲಿದ್ದಳು. ಅವಳ ಸೈನಿಕರು ಶಾಂತತೆಯ ಕಾಲದಲ್ಲಿಯೇ ಆಗಲಿ, ಯುದ್ಧದ ಸಮಯದಲ್ಲಿಯೇ ಆಗಲಿ ಯಾವಾಗಲೂ ಸಿದ್ಧರಾಗಿರುತ್ತಿದ್ದರು. ಅವಳ ಉತ್ತಮವಾದ ನಿಯಮಗಳಿಂದ ಅವಳ ಸೈನಿಕರು ಯಾವಾಗಲೂ ಎಚ್ಚರದಿಂದಿರುತ್ತಿದ್ದರು. ಯಾವ ಕಾರಣದಿಂದಲೂ ಯುದ್ಧನಿಯಮಗಳನ್ನು ಮರೆತು ವಿಲಾಸಗಳಲ್ಲಿ ಮೈಮರೆತು ಇರುತ್ತಿರಲಿಲ್ಲ.

ಬೇಗುಮಳು ಸಾಮ್ರಾಜನ ಈ ದುರವಸ್ಥೆಯನ್ನು ತಿಳಿದು ಭೀತಳಾಗಲಿಲ್ಲ. ಗಂಡನಾದ ಸಾಮ್ರಾಜನು ಓಡಿಹೋಗುವ ಆಲೋಚ

ನೆಯನ್ನು ಮಾಡುತ್ತಿರುವಾಗ, ವೀರಾಂಗನೆಯಾದ ಬೇಗಮಳು ಶತ್ರುಗಳ ಮೇಲೆ ಸಾಗಿಹೋಗುವದಕ್ಕೆ ತನ್ನ ಸೈನಿಕರಿಗೆ ಆಜ್ಞಾಪಿಸಿದಳು. ಸಾಮ್ರಾಜನ ಜೀವರಕ್ಷಣೆಯಾಗಬೇಕು; ಅವನ ಮಾನಮರ್ಯಾದೆಗೆ ಭಂಗಬರಬಾರದು; ಇದಕ್ಕಾಗಿ ಬೇಕಾದ ಕಾರ್ಯಗಳನ್ನು ಮಾಡುವದಕ್ಕೆ ಬೇಗಮಳು ಹಿಂದುಮುಂದು ನೋಡುತ್ತಿರಲಿಲ್ಲ.

ಬೇಗಮಳು ಯುದ್ಧಕ್ಕೆ ಸಿದ್ಧಳಾದಳು. ಬಾದಶಹನಿಗೆ ಈ ಮೇರೆಗೆ ಹೇಳಿಕಳುಹಿಸಿದಳು:— "ನೀವು ಪರಿವಾರದೊಡನೆ ನನ್ನ ಪಾಳೆಯಕ್ಕೆ ಬರಬೇಕು. ನಾನು ಶತ್ರುವನ್ನು ಶಿಕ್ಷಿಸುವ ಭಾರವನ್ನು ವಹಿಸಿರುವೆನು. ಯುದ್ಧದಲ್ಲಿ ಜಯಶಾಲಿನಿಯಾಗುವೆನು; ಇಲ್ಲವೆ ಪ್ರಾಣಬಿಡುವೆನು. ಸಾಮ್ರಾಜನ ಉದ್ಧಾರಕ್ಕಾಗಿ ನಾನು ಜೀವದಾಶೆಯಿಲ್ಲದೆ ಕಾದುವೆನು."

ನಾಜಫಕುಲಿಗೂ ಒಂದು ಪತ್ರ ಕಳಿಸಿದಳು. ಅದರಲ್ಲಿ ನಾಜಫಕುಲಿಯ ಈ ತರದ ವರ್ತನದ ತಿರಸ್ಕಾರವನ್ನೂ ಅದರ ಪ್ರತಿಕಾರಕ್ಕಾಗಿ ತನ್ನ ಸಿದ್ಧತೆಯನ್ನೂ ಬರೆದಿದ್ದಳು.

ಬೇಗಮಳು ತನ್ನ ಆಲೋಚನೆಯಂತೆ ಕಾರ್ಯಮಾಡುವದಕ್ಕೆ ವಿಲಂಬಮಾಡಲಿಲ್ಲ. ಸೈನ್ಯವೆಲ್ಲವೂ ಯುದ್ಧಕ್ಕೆ ಸಿದ್ಧವಾಗಿತ್ತು. ಸೈನಿಕರೆಲ್ಲರಿಗೂ ಮುಂದೆ ಸಾಗುವದಕ್ಕೆ ಅಪ್ಪಣೆ ಕೊಟ್ಟಳು. ಸೈನಿಕರ ಸಂಖ್ಯೆಯು ಬಹಳವಾಗಿರಲಿಲ್ಲ. ಆದರೂ ಅವಳು ಹೆದರಲಿಲ್ಲ. ಅವಳು ಮೇಣೆಯನ್ನೇರಿ ಸೈನಿಕರೊಡನೆ ಹೊರಟಳು.

ಯುದ್ಧಭೂಮಿಯಲ್ಲಿ ಬೇಗಮಳು ಮೇಣೆಯಿಂದಿಳಿದು ಹುರಿದುಂಬಿಸುವ ಮಾತುಗಳಿಂದ ವೀರರಲ್ಲಿ ಉತ್ಸಾಹವನ್ನುಂಟುಮಾಡಿದಳು. ಅದರಿಂದ ಇಮ್ಮಡಿ ಬಲಹೊಂದಿದ ಬೇಗಮಳ ಸೈನಿಕರು ಹೆಚ್ಚು ಆವೇಶದಿಂದ ಕಾದತೊಡಗಿದರು. ಬೇಗಮಳು ತನ್ನ ಅಲ್ಪಸಂಖ್ಯಾಕರಾದ ಸೈನಿಕರ ಪರಾಕ್ರಮವನ್ನು ನೋಡತೊಡಗಿದಳು.



ನಾಜಫಕುಲಿಯ ಸೈನ್ಯವು ಬೇಗಮಳ ಸೈನ್ಯವನ್ನು ಎದುರಿಸಲಿಕ್ಕೆ ಸಮರ್ಥವಾಗಲಿಲ್ಲ. ತಮಗೆ ಜಯವಾಗುವ ಯಾವ ಚಿಹ್ನವೂ ತೋರದ್ದರಿಂದ ಶತ್ರುಸೈನ್ಯವು ಪಲಾಯನಮಾಡತೊಡಗಿತು. ಗೋಕುಲಗಡವು ಬೇಗಮಳ ವಶವಾಯಿತು. ಜಯೋಲ್ಲಾಸಿತವಾದ ಬೇಗಮಳ ಸೈನ್ಯವು ಸಾಮ್ರಾಜನ ಮತ್ತು ಬೇಗಮಳ ಜಯಘೋಷಮಾಡುತ್ತ ಪಾಳೆಯಕ್ಕೆ ತಿರುಗಿ ಹೋಯಿತು.

ಸಾಮ್ರಾಜನು ಅದೇ ದಿವಸ ಸಾಯಂಕಾಲದಲ್ಲಿ ಬೇಗಮಳನ್ನು ದರಬಾರದಲ್ಲಿ ಕರೆಸಿದನು. ವಿಪತ್ತುಗಳಿಂದ ಉದ್ಧಾರಮಾಡಿದ ಬಗ್ಗೆ ಬೇಗಮಳ ಉಪಕಾರವನ್ನು ಮನ್ನಿಸಿದನು. ಬೇಗಮಳ ವೀರತ್ವವನ್ನು ಕೊಂಡಾಡಿದನು. ಇದಕ್ಕೆ ಮೊದಲು ದಿಲ್ಲೀಶ್ವರನು ಬೇಗಮಳಿಗೆ ಜೇಬಉನ್ನೀಸಾ (ರಮಣೀರತ್ನ) ಎಂಬ ಬಿರುದನ್ನು ಕೊಟ್ಟಿದ್ದನು. ಈಗ ಸಾಮ್ರಾಜನ ಪ್ರಿಯತಮ ಪುತ್ರಿಯೆಂದು ಸನ್ಮಾನಿಸಿದನು. ಮತ್ತು ಬಹುಮಾನಸೂಚಕವಾದ ವಸ್ತ್ರಗಳನ್ನೂ, ಬಾದಶಹಪುರವೆಂಬ ಪರಗಣೆಯನ್ನೂ ಕೊಟ್ಟನು. ಬೇಗಮಳ ಮಹತ್ಕಾರ್ಯವನ್ನು ನೋಡಿದರೆ ಬಾದಶಹನ ಈ ಕೃತ್ಯವು ಸರ್ವಸಮ್ಮತವಲ್ಲದೆ ಬೇರೆ ಇಲ್ಲ. ಅವಳ ಸಮಯೋಚಿತವಾದ ಸಹಾಯದಿಂದ ಕೇವಲ ಸೈನಿಕರ ಪ್ರಾಣರಕ್ಷಣೆಯಾಯಿತೆಂಬದಿಷ್ಟೇ ಅಲ್ಲ; ಸಾಮ್ರಾಜನು ಘೋರವಿಪತ್ತಿನಿಂದ ಪಾರಾದನು; ಮತ್ತು ಅವನ ಮರ್ಯಾದೆಯು ರಕ್ಷಣೆಯಾಯಿತು.

ನಾಜಫಕುಲಿಯು ಈ ಪರಾಜಯದಿಂದ ಎದೆಗುಂದಿದನು. ಅದರಿಂದ ಅವನು ಬೇಗಮಳ ಸಹಾಯವನ್ನು ಪಡೆದುಕೊಂಡು ಬಾದಶಹನ ಕ್ಷಮೆಯನ್ನು ಬೇಡಿದನು. ಉದಾರನಾದ ಸಾಮ್ರಾಜನು ಶತ್ರುವಿನ ಈ ಅಪರಾಧವನ್ನು ಕ್ಷಮಿಸಿದನು.

ಈ ಸಂಗತಿಗಳಾದ ತರುವಾಯದ ನಾಲ್ಕು ವರುಷಗಳ ಬೇಗಮಳ ಕೃತ್ಯಗಳ ವಿಷಯವಾಗಿ ತಿಳಿಯುವದಕ್ಕೆ ಮಾರ್ಗವಿಲ್ಲ.

## ೪ನೆಯ ಅಧ್ಯಾಯ.

ಬೇಗಮಳ ಮುಖ್ಯ ಜಹಾಗೀರು ಮಿರತದ ಹತ್ತರಿರುವ ಸರ್ಧಾನಾ (Sirdhana). ಇದು ದಿಲ್ಲಿಯಿಂದ ಸುಮಾರು ೪೦ ಮೈಲು ದೂರದಲ್ಲಿರುವದು. ಮಿರತದ ಹತ್ತರಿರುವ ಅನೇಕ ಪರಗಣೆಗಳು ಈ ಜಹಾಗೀರಿಗೆ ಸೇರಿದ್ದವು. ಬೇಗಮಳ ವಾರ್ಷಿಕ ಉತ್ಪನ್ನವು ಸುಮಾರು ೭ ಲಕ್ಷ ರೂಪಾಯಿಯಾಗಬಹುದು. ಪ್ಲಾವುಡನ್ (T. C. Plowden) ಸಾಹೇಬರು ೧೮೪೦ನೆಯ ಇಸವಿಯಲ್ಲಿಯ ಸೆಟಲ್‌ಮೆಂಟ ರಿಪೋರ್ಟಿನಲ್ಲಿ ಬೇಗಮಳ ಆಳಿಕೆಯನ್ನು ಬಹಳವಾಗಿ ಹೊಗಳಿದ್ದಾನೆ.

ಬೇಗಮಳ ಹತ್ತರ ೫ ದಲ ಸೈನ್ಯವು, ೨೪ ತೋಫುಗಳು, ೧೫೦ ಜನ ಅಶ್ವಾರೋಹಿಗಳು ಇದ್ದರೆಂದು ಟಾಮಸನು ಬರೆದಿದ್ದಾನೆ. ಪ್ರತಿಯೊಂದು ದಲದಲ್ಲಿ ೫೦೦ ಜನ ಸೈನಿಕರಿರುತ್ತಿದ್ದರು. ಬೇಗಮಳ ಆಳಿಕೆಯ ಕಡೆಯಭಾಗದಲ್ಲಿ ಅವಳ ಸೈನಿಕರ ಸಂಖ್ಯೆಯು ಇದಕ್ಕಿಂತಲೂ ಹೆಚ್ಚಿತ್ತು. ಈ ಸೈನಿಕರಲ್ಲಿ ಎಷ್ಟೋ ಜನರು ಬಾದಶಹನ ರಕ್ಷಣೆಗಾಗಿ ಯಾವಾಗಲೂ ದಿಲ್ಲಿಯಲ್ಲಿರುತ್ತಿದ್ದರು. ಬೇಗಮಳ ಅರಮನೆಯ ಹತ್ತರಿರುವ ಒಂದು ದುರ್ಗದಲ್ಲಿ ಶಸ್ತ್ರ, ತೋಫು, ಗುಂಡು ಮೊದಲಾದವುಗಳನ್ನು ಮಾಡುವ ಕಾರಖಾನೆಯಿತ್ತು. ಬೇಗಮಳ ವರ್ಷದ ವೆಚ್ಚವು ಸುಮಾರು ೬ ಲಕ್ಷ ರೂಪಾಯಿ ಇತ್ತು. ಸರ್ಧಾನಾದ ಉತ್ಪನ್ನದಿಂದ ಇದೆಲ್ಲವೂ ನಡೆಯುತ್ತಿತ್ತು.

ಬೇಗಮಳ ಸೈನ್ಯದಲ್ಲಿರುವ ಯುರೋಪಿಯನ್ ನವಕರರಲ್ಲಿ 'ಜಾರ್ಜ ಟಾಮಸ್' ಪಾಲಿ, ಬಾವರಸ್ 'ಇವ್ಹಾನಸ್' ದುದ್ರೇನೇಕ, ಲಿಗೋಯಿಸ್, ಲೆವ್ಹಾಸುಲ್ತ, ಸಾಲುರ, ರಾಬರ್ಟ ಸ್ಕಿನರ, ಜಾನ ಟಾಮನ್ ಮೊದಲಾದವರು ಮುಖ್ಯರಾಗಿದ್ದರು.

ಸರ್ಧಾನಾದಲ್ಲಿ ಬೇಗಮಳ ಅರಮನೆಯಿತ್ತು. ಅವಳ ವಾಸಸ್ಥಾನವು ದೇಶೀಯ ಮತ್ತು ಯುರೋಪೀಯ ಅನೇಕ ವಸ್ತುಗ



ಳಿಂದ ಶೃಂಗರಿಸಲ್ಪಟ್ಟಿತ್ತು. ಬೇಗಮಳು ಬಹಳವಾಗಿ ಸರ್ಧಾನಾದಲ್ಲಿರುತ್ತಿದ್ದಳು. ಕೆಲವು ದಿವಸ ಜಲಾಲಪುರ, ಮಿರತ, ದಿಲ್ಲಿ ಮೊದಲಾದ ಪಟ್ಟಣಗಳಲ್ಲಿ ವಾಸಿಸುತ್ತಿದ್ದಳು. ಈ ಎಲ್ಲ ಪಟ್ಟಣಗಳಲ್ಲಿಯೂ ಬೇಗಮಳ ಅರಮನೆಗಳಿವೆ.

ಮೊದಲು ಬೇಗಮಳು ಸ್ವತಃ ಯುದ್ಧಕ್ಕೆ ಹೋದಾಗ ಮೇಣೆಯಲ್ಲಿ ಕುಳಿತು, ಸೈನ್ಯಕ್ಕೆ ಅಪ್ಪಣೆಯನ್ನು ಕೊಡುತ್ತಿದ್ದಳು. ಮತ್ತು ಸೈನಿಕರಲ್ಲಿ ಉತ್ಸಾಹವನ್ನುಂಟುಮಾಡುತ್ತಿದ್ದಳು. ವಿಲ್‌ಸಾಹೇಬನು ಈ ವಿಷಯವಾಗಿ ಬೇಗಮಳನ್ನು ವರ್ಣನೆ ಮಾಡಿದ್ದಾನೆ.* ಅವಗುಂಠನವಿಲ್ಲದೆ ಬೇಗಮಳು ಹೊರಗೆ ಬರುತ್ತಿರಲಿಲ್ಲ. ಅವಳು ಕ್ರಿಸ್ತಿಧರ್ಮದವಳಾಗಿದ್ದರೂ ಸ್ವಜಾತಿಯ ಸಂಸ್ಕಾರಗಳನ್ನೂ, ವಸ್ತ್ರಪ್ರಾವರಣಗಳನ್ನೂ, ಆಚಾರವ್ಯವಹಾರಗಳನ್ನೂ ಮರೆತಿರಲಿಲ್ಲ.

ಬೇಗಮಳು ಪರಮಸುಂದರಿಯಾಗಿದ್ದಳು. ಅವಳು ಬಹುಮೂಲ್ಯ ಹಿಂದುಸ್ತಾನೀ ವಸ್ತ್ರಗಳನ್ನು ಧರಿಸುತ್ತಿದ್ದಳು. ಪಾರ್ಶಿ ಮತ್ತು ಹಿಂದುಸ್ತಾನಿ ಭಾಷೆಗಳು ಅವಳಿಗೆ ಚನ್ನಾಗಿ ಬರುತ್ತಿದ್ದವು. ತನ್ನ ಅರಮನೆಯಲ್ಲಿ ಅವಳು ಗೋಷೆಯ ಹೆಂಗಸರಂತೆ, ತೆರೆಯ ಹಿಂದೆ ಕುಳಿತು ಯಾವತ್ತು ರಾಜ್ಯಕಾರಭಾರವನ್ನು ಸಾಗಿಸುತ್ತಿದ್ದಳು. ಸೇವಕರ ಮತ್ತು ಪ್ರಜಾಜನರ ವಿಜ್ಞಾಪನೆಗಳನ್ನು ಕೇಳಿಕೊಳ್ಳುತ್ತಿದ್ದಳು. ಆದರೆ ಉಚ್ಚ ಪದವಿಯುಳ್ಳ ಯುರೋಪಿಯನ್ ಜನರೊಡನೆ ಅನವಗುಂಠಿತಳಾಗಿ ವ್ಯವಹಾರ ಸಾಗಿಸುತ್ತಿದ್ದಳು. ಮತ್ತು ಅವರೊಡನೆ ಆಹಾರ ತೆಗೆದುಕೊಳ್ಳುತ್ತಿದ್ದಳು. ಅಡಿಗೆ ಮೊದಲಾದವುಗಳನ್ನು

---

* Colonel Skinner had often, during his service with Maharatta, seen her, then a beautiful young woman, leading on her troops to the attrck in person, and displaying in the midst of carnage, the greatest interpidity and presence of mind.

ಮಾಡುವದಕ್ಕೆ ಬೇಗಮಳ ಹತ್ತರ ೩೦-೩೫ ಜನ ದಾಸಿಯರಿದ್ದರು. ಇವರಲ್ಲಿ ಬಹಳ ಜನರು ಕ್ರಿಸ್ತೀ ಹೆಂಗಸರಿದ್ದರು.

ವೃದ್ಧವಯಸ್ಸಿನಲ್ಲಿಯ ಬೇಗಮಳ ವ್ಯವಹಾರದಲ್ಲಿ ತುಸು ಹೆಚ್ಚು ಕಡಿಮೆಯಾಯಿತು. ಸನ್ ೧೮೦೪ ರಲ್ಲಾದ ಬ್ರಿಟಿಶರ ಸಖ್ಯತ್ವದ ತರುವಾಯ ಅವಳು ಎಷ್ಟೋ ಯುರೋಪಿಯ ಆಚಾರವ್ಯವಹಾರಗಳನ್ನವಲಂಬಿಸಿದಳು. ಕುದುರೆಹತ್ತುವದು, ಆನೆಹತ್ತುವದು, ತಲೆಯ ಮೇಲೆ ಕಿರೀಟ ಹಾಕಿಕೊಳ್ಳುವದು ಮುಂತಾದವುಗಳನ್ನು ಮಾಡತೊಡಗಿದಳು; ಸಾಧಾರಣ ತರದ ಜನರೊಡನೆಯೂ ಅವಗುಂಠನವಿಲ್ಲದೆ ವರ್ತಿಸತೊಡಗಿದಳು. ಉಚ್ಚಪದವಿಯುಳ್ಳ ಯುರೋಪಿಯನ್ನರಿಗೆ ಆಮಂತ್ರಣ ಕೊಟ್ಟು ಅವರೊಡನೆ ಭೋಜನ ಮಾಡುತ್ತಿದ್ದಳು. ಅವರ ಆಮಂತ್ರಣಕ್ಕೆ ತಾನು ಹೋಗುತ್ತಿದ್ದಳು. ತನ್ನ ದೇಶದಲ್ಲಿ ಬಂದ ಯಾವತ್ತೂ ಶ್ರೇಷ್ಠ ಇಂಗ್ಲಿಷರಿಗೆ ಬೇಗಮಳು ತಪ್ಪದೆ ಆಮಂತ್ರಣ ಕೊಡುತ್ತಿದ್ದಳು.

ಸಮ್ರಾಜ್ಞಿಯಂತೆ ಬೇಗಮಳು ತನ್ನ ಎಲ್ಲ ನಿತ್ಯದ ಕಾರ್ಯಕ್ರಮವನ್ನಿಟ್ಟಿದ್ದಳು. ಪ್ರತಿದಿನ ಸಾಯಂಕಾಲದ ಊಟಕ್ಕೆ ಬೇಗಮಳೊಡನೆ ಸ್ವಕೀಯ ಜನವೆಲ್ಲವೂ ಇರುತ್ತಿತ್ತು. ಊಟವಾದ ಬಳಿಕ ಗೀತವಾದ್ಯಗಳಾಗುತ್ತಿದ್ದವು. ಆಗ ರಸನಾತೃಪ್ತಿಕರ ಮದ್ಯಪ್ರಾಶನವೂ ಆಗುತ್ತಿತ್ತು.

---

## ೫ನೆಯ ಅಧ್ಯಾಯ.

ಬೇಗಮಳ ವಶದಲ್ಲಿರುವ ಸೇನಾಪತಿಗಳಲ್ಲಿ ಜಾರ್ಜಟಾಮಸ್, ಲೆಹ್ವಾಸುಲ್ತ ಇವರು ಪ್ರಮುಖರು. ಇವರಲ್ಲಿ ಜಾರ್ಜಟಾಮಸನ ಪರಿಚಯವನ್ನು ಹಿಂದೆ ಮಾಡಿಕೊಟ್ಟಿದ್ದೇವೆ. ಲೆಹ್ವಾಸುಲ್ತನು ಸುಶಿಕ್ಷಿತನಾದ ಫ್ರೆಂಚನು. ಇವರಿಬ್ಬರೂ ಪ್ರತಿಭಾಶಾಲಿಗಳು. ಆದದರಿಂದ ಅಲ್ಪಕಾಲದಲ್ಲಿಯೇ ಇವರೀರ್ವರೂ ಬೇಗಮಳ ಅತಿಶಯ ಪ್ರೀತಿಗೆ



ಪಾತ್ರರಾದರು. ಅದರಿಂದ ಇಬ್ಬರಲ್ಲಿಯೂ ಮತ್ಸರವು ನೆಲೆಗೊಂಡಿತು. ಟಾಮಸನ ಕಾರ್ಯಗಳು ಲೆಹ್ವಾಸುಲ್ತನಿಗೆ ಸೇರಲಿಲ್ಲ. ಟಾಮಸನನ್ನು ಕೆಲಸದಿಂದ ತೆಗೆದು ಹಾಕಿಸುವದಕ್ಕಾಗಿ ಲೆಹ್ವಾಸುಲ್ತನು ಆತನ ತಪ್ಪುಗಳನ್ನು ಹುಡುಕತೊಡಗಿದನು. ಟಾಮಸನೂ ಲೆಹ್ವಾಸುಲ್ತನ ತಪ್ಪು ತೆಗೆಯತೊಡಗಿದನು. ಟಾಮಸನು ಲೆಹ್ವಾಸುಲ್ತನ ವಿಷಯವಾಗಿ ಬೇಗಮಳ ಹತ್ತರ ಹಲವು ದೂರುಗಳನ್ನು ಹೇಳಿದನು. ಆದರೆ ಬೇಗಮಳು ಅವಕ್ಕೆ ಕಿವಿಗೊಡದೆ ದಿನದಿನಕ್ಕೆ ಲೆಹ್ವಾಸುಲ್ತನನ್ನು ಹೆಚ್ಚಿಗೆ ಪ್ರೀತಿಸತೊಡಗಿದುದರಿಂದ ಕ್ರಮವಾಗಿ ಇವರೀರ್ವರಲ್ಲಿ ದ್ವೇಷವು ಬೆಳೆಯತೊಡಗಿತು. ಕಡೆಯಲ್ಲಿ ಟಾಮಸನು ನಿರುಪಾಯನಾಗಿ ಸನ್ ೧೭೯೨ರಲ್ಲಿ ಬೇಗಮಳ ನವಕರಿಯನ್ನು ಬಿಟ್ಟು ಹೋದನು. ಬೇಗಮಳು ಇದಕ್ಕೆ ಅಡ್ಡಿಯ ಮಾಡಲಿಲ್ಲ. ಕೀನಸಾಹೇಬನು ಹೇಳುವದೇನಂದರೆ—"ಟಾಮಸನು ಬೇಗಮಳ ಪ್ರಣಯ ಪ್ರಾರ್ಥಿಯಾಗಿದ್ದನು. ಆದರೆ ಬಯಕೆಯು ಕೈಗೂಡದ್ದರಿಂದ ಕೆಲಸ ಬಿಟ್ಟು ಹೋದನು."

ಬೇಗಮಳು ತನ್ನ ಪ್ರಣಯ ಪ್ರಾರ್ಥಿನಿಯಾಗಿರುವದನ್ನು ಲೆಹ್ವಾಸುಲ್ತನು ತೀವ್ರವೇ ತಿಳಿದನು. ಆತನೂ ಬೇಗಮಳನ್ನು ಬಹಳ ಪ್ರೀತಿಸುತ್ತಿದ್ದನು. ಆದರೆ ಸ್ವಾಮಿಭೃತ್ಯ ಸಂಬಂಧವಿದ್ದದರಿಂದ ತನ್ನ ಮನೋಗತವನ್ನು ತಿಳಿಸಲಾರದವನಾಗಿದ್ದನು. ಈಗ ಬೇಗಮಳ ಹೃದ್ಗತವನ್ನರಿತವನಾದ ಅವನು ಯೋಗ್ಯವೇಳೆಯನ್ನರಿತು ಅವಳ ಬಳಿಯಲ್ಲಿ ಈ ಮಾತನ್ನೆತ್ತಿದನು. ತನ್ನ ಮನಸ್ಸಿನಲ್ಲಿರುವ ಉತ್ಕಟವಾದ ಇಚ್ಛೆಯು ಅನಾಯಾಸವಾಗಿ ಪೂರ್ಣವಾದದ್ದನ್ನು ನೋಡಿ ಬೇಗಮಳಿಗೆ ಬಹಳ ಆನಂದವಾಯಿತು. ಈ ಆನಂದದ ಭರದಲ್ಲಿ ಸ್ವಾಮಿಸೇವಕಸಂಬಂಧವನ್ನು ಮರೆತುಬಿಟ್ಟಳು. ಕೇವಲ ಪ್ರಣಯದಿಂದ ಮುಗ್ಧಳಾಗಿ ಹೋದಳು. ಪ್ರೇಮಾಶ್ರುವನ್ನು ಸುರಿಸುತ್ತ ಪ್ರಣಯದ ಪ್ರಥಮಚುಂಬನವನ್ನು ಲೇಹ್ವಾಸುಲ್ತನ ಕಪೋಲದಲ್ಲಿ ಮುದ್ರಿತಮಾಡಿದಳು. ಹೃದಯವಿನಿಮಯವೇ ವಿವಾಹದ

ಲಕ್ಷಣವೆಂದು ಹೇಳಿದರೆ ಅವರಿಬ್ಬರ ವಿವಾಹವಾಯಿತೆಂದು ಹೇಳಬಹುದು. ಹತ್ತರ ಯಾರೂ ಸಾಕ್ಷಿಗಳಿರಲಿಲ್ಲ. ಕೇವಲ ಆಕಾಶವೂ, ವಾಯುವೂ ಸಾಕ್ಷಿಗಳು. ಮುಂದೆ ೧೭೯೩ ರಲ್ಲಿ ರೋಮನ್ ಕ್ಯಾಥೊಲಿಕ್ ಮತದಂತೆ ಗೌಪ್ಯವಾಗಿ ಬೇಗಮ್ ಲೆಹ್ವಾಸುಲ್ತರ ವಿವಾಹವಾಯಿತು. ಸಾಧಾರಣವಾಗಿ ಈ ವಿವಾಹದ ವರ್ತಮಾನವು ಯಾರಿಗೂ ಗೊತ್ತಿರಲಿಲ್ಲೆಂದು ಹೇಳಬಹುದು. ಈ ವಿವಾಹಕ್ಕೆ ಕೇವಲ ಬಿಶಪ್ಪನೂ ಇಬ್ಬರು ಫ್ರೆಂಚಶಿಪಾಯಿಗಳೂ ಸಾಕ್ಷಿಗಳಾಗಿದ್ದರು. ಈ ಗುಪ್ತವಿವಾಹವು ಬೇಗಮಳಿಗೆ ಸುಖವನ್ನುಂಟುಮಾಡಲಿಲ್ಲ. ಇದೊಂದು ಬೇಗಮಳ ಅವಿಚಾರದ ಕೃತ್ಯವಾಯಿತೆಂದು ಸಂದೇಹವಿಲ್ಲದೆ ಹೇಳಬಹುದಾಗಿದೆ. ಬೇಗಮಳ ಈ ಅವಿಚಾರದ ಕೆಲಸದಿಂದ ಎಂಥ ಸಂಕಟವೊದಗಿತೆಂಬದು ಮುಂದಿನ ಸಂಗತಿಗಳಿಂದ ತಿಳಿಯುವದು.

ಲೆವ್ಹಾಸುಲ್ತನಲ್ಲಿ ಅನೇಕ ಸದ್ಗುಣಗಳಿದ್ದರೂ, ಆತನು ಉದ್ಧತ ಸ್ವಭಾವದವನಾಗಿದ್ದನು. ಉಳಿದ ಸೈನಿಕರು ಅವನಂತೆ ಶಿಕ್ಷಿತರಿರಲಿಲ್ಲ. ಗರ್ವಿತನಾದ ಲೆವ್ಹಾಸುಲ್ತನು ಬೇಗಮಳು ಪೂರ್ವದಂತೆ ಇತರ ಸೇನಾಪತಿಗಳೊಡನೆ ಊಟಮಾಡುವದಿಲ್ಲೆಂದು ಅಪ್ಪಣೆ ಮಾಡಿದನು. ಬೇಗಮಳಿಗೆ ಇದು ಸರಿಬರಲಿಲ್ಲ. ಅವಳು ಹೀಗೆ ಮಾಡಬೇಡವೆಂದು ಲೆವ್ಹಾಸುಲ್ತನಿಗೆ ಹೇಳಿದಳು. ಲೆಹ್ವಾಸುಲ್ತನು ತನ್ನ ಆಗ್ರಹವನ್ನು ಬಿಡಲಿಲ್ಲ. ಬೇಗಮಳು ಮತ್ತೂ ಹೇಳಿದ್ದೇನಂದರೆ—“ ಹೀಗೆ ಮಾಡುವದರಿಂದ ಸೈನಿಕರಲ್ಲಿ ಅಸಂತೋಷವುಂಟಾಗುವದು. ರಾಜ್ಯದ ಶುಭಾಶುಭವು ಸೈನಿಕರ ಬಾಹುಬಲವನ್ನವಲಂಬಿಸಿದೆ. ಆದರಿಂದ ಸೈನಿಕರನ್ನು ಆದಷ್ಟು ಸಂತೋಷಪಡಿಸುವದು ನಮ್ಮ ಕರ್ತವ್ಯವು. ಆ ಜನರೊಡನೆ ಮೊದಲಿನಂತೆ ಪಾನಭೋಜನಗಳನ್ನು ಮಾಡಿದರೆ ಅವರು ಸಂತುಷ್ಟರಿರುವರು. ಅದರಿಂದ ನನ್ನಲ್ಲಿ ಅವರ ಭಕ್ತಿಯು ಬೆಳೆಯುವದು. ಇದರಿಂದ ರಾಜ್ಯಕ್ಕೆ ಮಂಗಲವುಂಟಾಗುವದು. ಇಲ್ಲವಾದರೆ ಸೈನಿಕರ ಅಸಂತೋಷ



ದಿಂದ ನಮಗೆ ಅನೇಕ ವಿಪತ್ತುಗಳೊದಗುವವು. ” ಲೆವ್ಹಾಸುಲ್ತನು ಬೇಗಮಳ ಈ ಯುಕ್ತಿವಾದಕ್ಕೆ ಒಪ್ಪಲಿಲ್ಲ. ಕಡೆಗೆ ಅವನು ತನ್ನ ಮಾತನ್ನೇ ಸಾಧಿಸಿದನು.

ಬೇಗಮಳು ತರ್ಕಿಸಿದಂತೆ ಈ ಕೃತ್ಯದಿಂದ ಸೈನಿಕರಲ್ಲಿ ಅಸಂತೋಷವು ಬಳೆಯಿತು. ಹೀಗೆ ಮಾಡುವದರಿಂದ ತಮ್ಮ ಅವಮಾನ ಮಾಡಿದಂತಾಯಿತೆಂದು ಅವರು ಭಾವಿಸಿದರು. ಲೆವ್ಹಾಸುಲ್ತನೊಡನೆ ಆದ ಬೇಗಮಳ ವಿವಾಹವು ಅವರಿಗೆ ಗೊತ್ತಿರಲಿಲ್ಲ. ಅದರಿಂದ ಅವರು ಲೆವ್ಹಾಸುಲ್ತನು ಬೇಗಮಳ ಜಾರನೆಂದು ಭಾವಿಸಿದರು. ಇದರಿಂದ ಮತ್ತಿಷ್ಟು ಅಸಂತುಷ್ಟರಾದರು. ಈ ಅಪಮಾನದ ಸೇಡು ತೀರಿಸಿಕೊಳ್ಳುವದಕ್ಕೆ ಸುಯೋಗವನ್ನು ಹುಡುಕತೊಡಗಿದರು. ಸೇನಾಪತಿಗಳೊಡನೆ ಸೈನಿಕರೂ ಉದ್ಧತರಾದರು. ನಾಲ್ಕೂ ಕಡೆಯಲ್ಲಿ ಗುಪ್ತಕಾರಸ್ಥಾನಗಳು ನಡೆದದ್ದು ಬೇಗಮಳಿಗೆ ತಿಳಿಯಿತು. ಲೆವ್ಹಾಸುಲ್ತನ ಕಾರ್ಯದಿಂದ ತಾನು ದೊಡ್ಡ ವಿಪತ್ತಿನಲ್ಲಿ ಬೀಳಲೇ ಬೇಕಾಗುವದೆಂಬದನ್ನು ಅವಳು ಮೊದಲೇ ತರ್ಕಿಸಿದ್ದಳು. ಅದಕ್ಕಾಗಿ ಅವಳು ಭವಿಷ್ಯತ್ತಿನ ತೆರೆಯನ್ನು ತೆರೆದು ನೋಡಿದಳು. ವಿಪತ್ತು ಅವಳನ್ನು ಎದುರಿಸಲಿಕ್ಕೆ ಮುಂದುವರಿದು ಬರುತ್ತಿತ್ತು.

ಬರಬರುತ್ತ ಸೈನಿಕರು ಬೇಗಮಳ ಅಜ್ಞೆಯನ್ನು ಮೀರತೊಡಗಿದರು. ಸೈನಿಕರ ಈ ಉದ್ಧಟತನವು ಅವಳಿಗೆ ಸೇರಲಿಲ್ಲ. ಅವಳು ತನ್ನ ಧನ, ಮಾನ, ಪ್ರಾಣಗಳಿಗೆ ವಿಪತ್ತೊದಗಿತೆಂದು ತಿಳಿದಳು. ಈ ರೀತಿ ಶತ್ರುಮಧ್ಯದಲ್ಲಿರುವದು ಅಪಾಯಕರವೆಂದು ಆಲೋಚಿಸಿದಳು. ಈಗ ಅವಳಲ್ಲಿ ಮೊದಲಿನ ತೇಜವಿರಲಿಲ್ಲ. ವಿಶೇಷತಃ ಯಾರ ಭುಜಬಲವನ್ನು ಅವಲಂಬಿಸಿದ್ದಳೋ ಅವರೇ ಶತ್ರುಗಳಾಗಿರುವದನ್ನು ನೋಡಿ, ಸರ್ಧಾನಾದ ಒಡೆತನವನ್ನು ಬಿಟ್ಟ ಹೊರತು ಅವಳಿಗೆ ಬೇರೆ ಉಪಾಯವಿರಲಿಲ್ಲ. ಉದ್ಧಟರಾದ ಸೈನಿಕರು ಅವಳ ಅರಮನೆಯನ್ನು ಮುತ್ತಿ, ಸಂಪತ್ತಿಯನ್ನು ಸುಲಿಗೆ ಮಾಡುವದಕ್ಕೆ ಹೇಸುವವರಾಗಿರಲಿಲ್ಲ; ಅವಳ ಅಪಮಾನ ಮಾಡುವ

ದಕ್ಕೆ ಹಿಂದುಮುಂದು ನೋಡುವವರಾಗಿರಲಿಲ್ಲ; ಇಷ್ಟೇ ಅಲ್ಲ; ಅವಳ ಪ್ರಾಣಹರಣಕ್ಕೂ ಯತ್ನಮಾಡುತ್ತಿದ್ದರು. ಅಸಹಾಯಸ್ಥಿತಿಯಲ್ಲಿ ಇಂತಹ ಘೋರವಿಪತ್ತುಗಳ ಮಧ್ಯದಲ್ಲಿ ಅವಳು ಇರುವದು ಹೇಗೆ? ಲೆವ್ಹಾಸುಲ್ತನು ಪಲಾಯನದ ಆಲೋಚನೆಯನ್ನು ಬೇಗಮಳಿಗೆ ತಿಳಿಸಿದನು. ಈರ್ವರೂ ತಮ್ಮ ಧನರಾಶಿಯನ್ನು ಕಟ್ಟಿಕೊಂಡು ಬ್ರಿಟಿಶರ ಆಶ್ರಯ ಹೊಂದುವ ಆಲೋಚನೆಮಾಡಿದರು.

ಲೆವ್ಹಾಸುಲ್ತನು ಬ್ರಿಟಿಶರ ಕರ್ನಲ್ ಮ್ಯಾಕ್‌ಗಾವ್ರನನ ಸಹಾಯ ಬೇಡಿದನು. ಈ ಸಮಯದಲ್ಲಿ (೧೭೯೫) ಮ್ಯಾಕ್‌ಗಾವ್ರನನು ಗಂಗಾತೀರದಲ್ಲಿರುವ ಅನುಪಶಹರದ ಸೇನಾಪತಿಯಾಗಿದ್ದನು. ಲೆವ್ಹಾಸುಲ್ತನು—"ಮೊದಲು ಅನುಪಶಹರಕ್ಕೆ ಬರುವೆವು; ಮುಂದೆ ಫರುಕ್ಕಬಾದಕ್ಕೆ ಹೋಗಿ ಅಲ್ಲಿ ನಿಶ್ಚಿಂತರಾಗಿರುವೆವು; ಇದಕ್ಕೆ ತಾವು ಸಹಾಯಮಾಡಬೇಕೆ"ಂದು ವಿಜ್ಞಾಪಿಸಿಕೊಂಡಿದ್ದನು. ಇದಕ್ಕೆ ಮ್ಯಾಕ್‌ಗಾವ್ರನನು ಒಪ್ಪಲಿಲ್ಲ. ಯಾಕಂದರೆ ಸಾಮ್ರಾಜನ ನವಕರನು ಓಡಿಹೋಗುತ್ತಿರುವಾಗ, ಅವನಿಗೆ ಸಹಾಯಮಾಡಿದರೆ ಸಾಮ್ರಾಜನು ಸಿಟ್ಟಾಗುವನೆಂದು ಕರ್ನಲನಿಗೆ ಎನಿಸಿತು. ಅದರಿಂದ ಲೆವ್ಹಾಸುಲ್ತನ ಬಯಕೆಯೀಡೇರದೆ ಆಗಿನ ಕಾಲದ ಗವ್ಹರ್ನರ ಜನರಲ್ ಸರಜಾನ ಶೋರನಿಗೆ ವಿಜ್ಞಾಪನಮಾಡಿಕೊಂಡನು (೧೭೯೫). ಶೋರನು ಸಹಾಯಮಾಡುವದಕ್ಕೆ ಮೇಜರ ಪಾಮರನಿಗೆ ಅಪ್ಪಣೆಮಾಡಿದನು.

ಸಿಂದೆಯು ಆ ಕಾಲದಲ್ಲಿ ದಿಲ್ಲೀಶ್ವರನ ಪ್ರತಿನಿಧಿಯಾಗಿದ್ದನೆಂದು ಹಿಂದೆ ಹೇಳಿದ್ದೇವೆ. ದಿಲ್ಲಿಯ ಯಾವತ್ತು ವ್ಯವಸ್ಥೆ ಮಾಡತಕ್ಕವನು ಅವನೇ. ಬೇಗಮಳು ದಿಲ್ಲೀಶ್ವರನು ಕೊಟ್ಟ ಇನಾಮುಗಳನ್ನು ಉಪಭೋಗಿಸುತ್ತಿದ್ದಳು. ಅದರಿಂದ ಸ್ಥಾನಾಂತರಕ್ಕಾಗಿ ಅವಳು ಸಿಂದೆಯ ಅಪ್ಪಣೆಯನ್ನು ಪಡೆಯುವದು ಅವಶ್ಯವಾಗಿತ್ತು.

ಸಿಂದೆಯ ಅಪ್ಪಣೆಯಂತೆ ಅವಳು ತನ್ನ ಸೈನ್ಯದ ಭಾರವನ್ನು ಸಿಂದೆಯ ಒಬ್ಬ ಸೇನಾಪತಿಗೆ ಒಪ್ಪಿಸಿ ಗೌಪ್ಯವಾಗಿ ಪಲಾಯನ



ಮಾಡುವದನ್ನು ನಿಶ್ಚಯಿಸಿದಳು. ಸಿಂದೆಯ ನವಕರನು ಬೇಗಮಳ ಸವತಿಯ ಮಗನಿಗೆ ತಿಂಗಳಿಗೆ ೨೦೦೦ ರೂಪಾಯಿ ವೇತನವನ್ನು ಕೊಡುವದಕ್ಕೆ ಒಪ್ಪಿಕೊಂಡನು.

ಬೇಗಮಳ ಶತ್ರುಗಳಿಗೆ ಈ ಸುದ್ದಿಯು ತಿಳಿಯಿತು. ಅವರು ಸಮರುವಿನ ಮಗನಾದ ಜಾಫರ ಇಯಾಬನನ್ನು ಸಿಂಹಾಸನದ ಮೇಲೆ ಕುಳ್ಳಿರಿಸುವದನ್ನು ನಿಶ್ಚಯಿಸಿ ಬೇಗಮಳನ್ನೂ, ಲೆವ್ಹಾಸುಲ್ತನನ್ನೂ ಹಿಡಿಯುವದಕ್ಕೆ ದಿಲ್ಲಿಯಿಂದ ಸರ್ಧಾನಾಕ್ಕೆ ಹೊರಟರು.

ಶತ್ರುಗಳ ಈ ಕೃತ್ಯವು ಲೆವ್ಹಾಸುಲ್ತನಿಗೆ ಮೊದಲೇ ತಿಳಿಯಿತು. ಅವನು ತಡಮಾಡದೆ ಒಂದುದಿನ ಮಧ್ಯರಾತ್ರಿಯಲ್ಲಿ—ಘೋರ ಅಂಧಕಾರದಲ್ಲಿ ಹೆಂಡತಿಯೊಡನೆ ಅನುಪಶಹರಕ್ಕೆ ಹೊರಟನು. ಕುದುರೆಯನ್ನೇರಿದ ಲೆವ್ಹಾಸುಲ್ತನ ಬಳಿಯಲ್ಲಿ ಪಿಸ್ತುಲೂ ಟೊಂಕದಲ್ಲಿ ಕತ್ತಿಯೂ ಇದ್ದವು. ಬೇಗಮಳ ಕೈಯಲ್ಲಿ ಪದನವಾದ ಚೂರಿಯಿತ್ತು. ಶತ್ರುಗಳ ಕೈಯಲ್ಲಿ ಸಿಗುವದಕ್ಕಿಂತ ಆತ್ಮಹತ್ಯ ಮಾಡಿಕೊಳ್ಳುವದು ಸರಿಯೆಂದು ಈರ್ವರೂ ಹಾದಿಯಲ್ಲಿ ನಿಶ್ಚಯಿಸಿಕೊಂಡರು. ಶತ್ರುಗಳು ತನ್ನನ್ನು ಬಹಳವಾಗಿ ಪೀಡಿಸಿ ಅಪಮಾನ ಮಾಡುವರೆಂಬದು ಲೆವ್ಹಾಸುಲ್ತನಿಗೆ ಗೊತ್ತಿತ್ತು. ಬೇಗಮಳಾದರೂ ಹೀಗೆಯೇ ತಿಳಿದುಕೊಂಡಿದ್ದಳು. ಮಾನಕಳೆದುಕೊಂಡು ಜೀವಿಸುವದು ಬೇಗಮಳಿಗೆ ಬೇಕಾಗಿರಲಿಲ್ಲ; ಪ್ರಾಣಕ್ಕಿಂತ ಮಾನದ ಬೆಲೆಯು ಹೆಚ್ಚೆಂಬದು ಅವಳಿಗೆ ತಿಳಿದಿತ್ತು. ಇಲ್ಲವಾದರೆ ರಾಜ್ಯವನ್ನೂ ವಿಪುಲ ಸಂಪತ್ತಿಯನ್ನೂ ಬಿಟ್ಟು ಈ ರೀತಿಯಿಂದ ಓಡಿಬರುತ್ತಿರಲಿಲ್ಲ. ಮಾನರಕ್ಷಣೆಗಾಗಿ ಬೇರೆ ಉಪಾಯಗಳಿದ್ದರೆ ಅವನ್ನು ಅವಲಂಬಿಸುತ್ತಿದ್ದಳು. ಆದರೆ ಬೇರೆ ಉಪಾಯಗಳಿರಲಿಲ್ಲ. ಅದರಿಂದ ಮಾನರಕ್ಷಣೆಗಾಗಿ ಪ್ರಾಣರಕ್ಷಣೆಗಲ್ಲ—ಓಡಿ ಹೋಗುತ್ತಿದ್ದಳು. ಆ ಮಾನರಕ್ಷಣೆಯು ಅಶಕ್ಯವಾದಲ್ಲಿ ಆತ್ಮಹತ್ಯವನ್ನು ನಿಶ್ಚಯಿಸಿಕೊಂಡಿದ್ದಳು.

ಲೆವ್ಹಾಸುಲ್ತನು ಕುದುರೆಯನ್ನೇರಿ ಬೇಗಮಳ ಮೇಣೆಯ ಬದಿಯಲ್ಲಿ ನಡೆದಿದ್ದನು. ಹತ್ತರ ನಂಬಿಗೆಯ ಎಷ್ಟೋ ದಾಸಿಯರೂ

ಸಂಪತ್ತೂ ಇದ್ದವು. ಸರ್ಧಾನಾದಿಂದ ೩ ಮೈಲು ಬರುವಷ್ಟರಲ್ಲಿಯೇ ಶತ್ರುಗಳ ಕುದುರೆಗಳ ಖುರಗಳ ಸಪ್ಪಳವು ಕೇಳಬಂದಿತು. ಲೆವ್ಹಾಸುಲ್ತನು ಪೂರ್ವಸಂಕಲ್ಪವು ಸ್ಥಿರವಿರುವದೇ? ಎಂದು ಬೇಗಮಳನ್ನು ಕೇಳಿದನು. ಬೇಗಮಳು ತನ್ನ ಚೂರಿಯನ್ನು ತೋರಿಸಿ ಮರಣಕ್ಕೆ ಸಿದ್ಧಳಿರುವೆನು ಎಂದು ಹೇಳಿದಳು. ಲೆವ್ಹಾಸುಲ್ತನು ತಿರುಗಿ ಮಾತಾಡದೆ ಪಿಸ್ತುಲನ್ನು ಹೊರಗೆ ತೆಗೆದನು. ತೀವ್ರ ಮುಂದೆ ಸಾಗುವಂತೆ ಬೋವಿಗಳಿಗೆ ಆಜ್ಞಾಪಿಸಿದನು. ಈ ಸಮಯದಲ್ಲಿ ಲೆವ್ಹಾಸುಲ್ತನಿಗೆ ಒಬ್ಬನೇ ಪಾರಾಗಲಿಕ್ಕೆ ಬರುವಂತಿತ್ತು. ಆದರೆ ಹೆಂಡತಿಯನ್ನು ಬಿಟ್ಟು ಹೋಗಲಿಕ್ಕೆ ಅವನು ಮನಸ್ಸು ಮಾಡಲಿಲ್ಲ.

ಶತ್ರುಗಳು ತೀರ ಸಮೀಪಕ್ಕೆ ಬಂದರು. ಈ ಸಮಯದಲ್ಲಿ ಬೇಗಮಳ ಪರಿಚಾರಿಕೆಯರು ದೊಡ್ಡ ಧ್ವನಿಯಿಂದ ಅಳತೊಡಗಿದರು. ಲೆವ್ಹಾಸುಲ್ತನು ಬೇಗಮಳು ಆತ್ಮಹತ್ಯ ಮಾಡಿಕೊಂಡಿರುವಳೆಂದು ತಿಳಿದನು. ಅವಳ ಎದೆಯ ಮೇಲಿನ ವಸ್ತ್ರಗಳು ರಕ್ತಮಯವಾಗಿದ್ದವು. ಬೇಗಮಳು ಎಚ್ಚರದಪ್ಪಿದ್ದಳು. ಅವಳು ಆತ್ಮಹತ್ಯೆಗಾಗಿ ಪ್ರಯತ್ನಿಸಿದ್ದಳು. ಆದರೆ ಚೂರಿಯು ಚನ್ನಾಗಿ ಒಳಸೇರಿರಲಿಲ್ಲ. ಪತ್ನಿಯ ಆತ್ಮಹತ್ಯೆಯನ್ನು ನೋಡಿದ ಲೆವ್ಹಾಸುಲ್ತನು ಗುರಿಯಿಟ್ಟು ಪಿಸ್ತುಲನ್ನು ಹಾರಿಸಿಗೊಂಡನು. ಗುಂಡು ಬ್ರಹ್ಮರಂಧ್ರವನ್ನು ಪ್ರವೇಶಿಸಿ ಹೋಯಿತು. ಅವನ ದೇಹವು ನೆಲಕ್ಕುರುಳಿತು.

ಪ್ರಣಯಿಗಳ ಈ ದುರವಸ್ಥೆಯನ್ನು ನೋಡಿ ಯಾರಿಗಾದರೂ ದುಃಖವೆನಿಸುವದರಲ್ಲಿ ಸಂದೇಹವಿಲ್ಲ. ಲೆವ್ಹಾಸುಲ್ತನ ಅವಿಚಾರದಿಂದ ಈ ತರದ ಶೋಚನೀಯ ಸ್ಥಿತಿಯು ಒದಗಿದ್ದು ಸತ್ಯವು. ಆದರೂ ಬೇಗಮಳ ವಿಷಯದಲ್ಲಿರುವ ಅವನ ಅತ್ಯಂತ ಪ್ರೇಮದ ವಿಷಯವಾಗಿ ಯಾರೂ ಸಂದೇಹಪಡರು. ಪ್ರಣಯಕ್ಕಾಗಿಯೇ ಅವನು ಪ್ರಣಯದೇವತೆಯ ಚರಣದಲ್ಲಿ ತನ್ನ ಬಹು ಮೂಲ್ಯ ಜೀವನವನ್ನು ವಿಸರ್ಜನಮಾಡಿದನು. ಬೇಗಮಳೊಡನೆ ಅವನು ಕೇವಲ ದೇಹದ ಸಂಬಂಧ ಮಾಡಿರಲಿಲ್ಲ. ರೂಪಲಾಲಸೆಗಾಗಿ—



ಧನದಾಶೆಗಾಗಿ ಅವನು ಬೇಗಮಳನ್ನು ಪ್ರೀತಿಸಿರಲಿಲ್ಲ. ಅವನು ಕೇವಲ ಪವಿತ್ರಪ್ರೇಮಿಯಾಗಿದ್ದನೆಂದು ಹೇಳಬಹುದು.

---

## ೬ನೆಯ ಅಧ್ಯಾಯ.

ಟಾಮಸನು ಈಮೇರೆಗೆ ಬರೆದಿದ್ದಾನೆ:—“ ಶತ್ರುಗಳು ಲೆವ್ಹಾಸುಲ್ತನ ಮೃತಶರೀರಕ್ಕೆ ಬಹಳ ಅಪಮಾನಮಾಡಿದರು. ಲೆವ್ಹಾಸುಲ್ತನ ಶರೀರವು ಪಶುಪಕ್ಷಿಗಳ ಆಹಾರವಾಯಿತು. ಶವದ ಕೆಲವು ಭಾಗವು ನೀರಿನಲ್ಲಿ ಒಗೆಯಲ್ಪಟ್ಟಿತು.” ಶವಕ್ಕೆ ಏನುಮಾಡಿದರೇನು?

ಬೇಗಮಳು ೭ ದಿವಸಗಳ ವರೆಗೆ ನಿರಾಹಾರ ಉಪವಾಸಗಳಿಂದ ಇದ್ದಳು. ಶತ್ರುಗಳು ಅವಳನ್ನು ಪ್ರತಿಬಂಧದಲ್ಲಿಟ್ಟಿದ್ದರು. ಅವಳ ಪೀಡೆಗೂ ಅಪಮಾನಕ್ಕೂ ಮೇರೆ ಇರಲಿಲ್ಲ. ಕೇಳಲಾರದ ಮಾತುಗಳನ್ನು ಅವಳು ಕೇಳಬೇಕಾಯಿತು. ಅವಳ ವಿಶ್ವಾಸುಕರಾದ ಪರಿಚಾರಿಕೆಯರು ಗೌಪ್ಯವಾಗಿ ಸ್ವಲ್ಪ ಸ್ವಲ್ಪ ಆಹಾರವನ್ನು ತಂದು ಕೊಡುತ್ತಿದ್ದರು. ಅಷ್ಟರಿಂದಲೇ ಬೇಗಮಳು ತನ್ನ ಜೀವಧಾರಣೆಯನ್ನು ಮಾಡಿಕೊಳ್ಳಬೇಕಾಯಿತು. ದಾಸಿಯರು ಆಹಾರ ತಂದು ಕೊಡದಿದ್ದಲ್ಲಿ ಅವಳು ನಿರಾಹಾರದಿಂದ ಸಾಯಬೇಕಾಗುತ್ತಿತ್ತು. ಈ ತರದ ಕಷ್ಟಕಾಲದಲ್ಲಿಯೂ ಅವಳ ಪ್ರಾಣವು ಹೋಗಲಿಲ್ಲ. ಈ ಭಯಂಕರ ಅಪಮಾನಕ್ಕಾಗಿಯೇ ಅವಳು ಆತ್ಮಹತ್ಯೆಗೆ ಯತ್ನಿಸಿದಳು—ತನ್ನ ಕೈಯಿಂದಲೇ ಚೂರಿಯಿಂದ ಇರಿದುಕೊಂಡಳು; ಆದರೆ ಸಾಯಲಿಲ್ಲ. ಇದರ ಕಾರಣವು ಏನಿರಬಹುದು? ಬೇಗಮಳ ಭವಿಷ್ಯತ್ಕಾಲದ ಜೀವನವು ಇದರ ಉತ್ತರವನ್ನು ಹೇಳುವದು.

ಮಹಾತ್ಮನಾದ ಭಗವಂತನು ದರಿದ್ರರ ದುಃಖವಿಮೋಚನಕ್ಕಾಗಿ—ಅನಾಥರ ಆಶ್ರಯಕ್ಕಾಗಿ—ಭಾರತದಲ್ಲಿ ಸ್ಥಿರಕೀರ್ತಿ ಸಂಪಾದನೆಗಾಗಿ ಅವಳನ್ನು ನಿರ್ಮಿಸಿದ್ದನು. ಈ ಮಹಾಕಾರ್ಯಗಳನ್ನು ಕೊನೆಗಾಣಿಸದೆ ಹೋಗುವದು ಅವಳಿಂದಾಗಲಿಲ್ಲ. ಅದರಿಂದ ಸಾಹಸಿಯಾದ ರಮಣಿಯು—ಧನಜನಐಶ್ವರ್ಯಸಂಪನ್ನಳಾದ ರಮ

ಣಿಯು ಈ ತರದ ವಿಪತ್ತನ್ನು ಸಹಿಸಿದಳು. ಪ್ರತಿದಿನ ಹೊಟ್ಟೆಗಿಲ್ಲದ ನೂರಾರು ಜನರನ್ನು ತೃಪ್ತಿಬಡಿಸುತ್ತಿದ್ದ ಆ ಮಹಿಳೆಯು ಒಂದು ವಾರದವರೆಗೆ ನಿರಾಹಾರ ಉಪವಾಸಗಳಿಂದ ಜೀವಿಸಬೇಕಾಯಿತು. ದೈವದ ಎಂಥ ಭೀಷಣಚೇಷ್ಟೆಯಿದು! ಧನಜನಸಂಪತ್ತುಗಳ ಅಸ್ಥಿರತ್ವದ ಎಂಥ ಉತ್ಕೃಷ್ಟಪ್ರಮಾಣವಿದು!!

ಶತ್ರುಗಳು ಬೇಗಮಳ ಸವತಿಯ ಮಗನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದರು. ಈ ದುರ್ದೆಶೆಯಲ್ಲಿ ಕೆಲವು ದಿವಸವಿದ್ದ ಬಳಿಕ ಗುಪ್ತವಾಗಿ ಟಾಮಸನಿಗೆ ಪತ್ರ ಕಳಿಸುವ ಸುಸಂಧಿಯು ಬೇಗಮಳಿಗೆ ದೊರೆಯಿತು. ಅದರಲ್ಲಿ ಬೇಗಮಳು ಬರೆದದ್ದೇನಂದರೆ—"ಶತ್ರುಗಳು ವಿಷಪ್ರಯೋಗದಿಂದಾಗಲಿ, ಬೇರೆ ರೀತಿಯಿಂದಾಗಲಿ ನನ್ನನ್ನು ಕೊಲ್ಲುವರು. ಈ ಅಸಹಾಯಸ್ಥಿತಿಯಲ್ಲಿ ನಿನ್ನ ಹೊರತು ನನ್ನನ್ನು ಉದ್ಧಾರಮಾಡತಕ್ಕವರಿಲ್ಲ."

ಜಾರ್ಜ ಟಾಮಸನು ಬೇಗಮಳ ಮೇಲೆ ಸಿಟ್ಟಾಗಿ ಹೋದದ್ದನ್ನು ಹಿಂದೆ ಹೇಳಿದ್ದೇವೆ. ಅದರಿಂದ ಅವನು ಬೇಗಮಳ ಶತ್ರುವಾಗಿದ್ದನು. ಅವನೇ ಬೇಗಮಳ ವಿರುದ್ಧ ಶಸ್ತ್ರವೆತ್ತುವದಕ್ಕೆ ದಿಲ್ಲಿಯ ಸೈನಿಕರಿಗೆ ಉತ್ತೇಜನ ಕೊಟ್ಟಿದ್ದನು. ಆದರೆ ಬೇಗಮಳ ವಿಷಯವಾಗಿ ಸೈನಿಕರು ಆಚರಿಸಿದ ಈ ಅಮಾನುಷ ಅತ್ಯಾಚಾರವು ಅವನಿಗೆ ಗೊತ್ತಿರಲಿಲ್ಲ. ಬೇಗಮಳ ಈ ದುರ್ದೆಶೆಗೆ ತಾನು ತುಸು ಮಟ್ಟಿಗಾದರೂ ಕಾರಣವಾದದ್ದನ್ನು ತಿಳಿದು ಅವನಿಗೆ ಅಸಮಾಧಾನವಾಯಿತು. ಅವನು ಎಷ್ಟೋ ದಿವಸ ಬೇಗಮಳ ಉಪ್ಪು ಉಂಡಿದ್ದನು. ಅದರಿಂದ ಉದಾರಹೃದಯನಾದ ಟಾಮಸನು ಬೇಗಮಳ ಶತ್ರುತ್ವವನ್ನು ಮರೆತುಬಿಟ್ಟನು. ಬೇಗಮಳ ಬಿಡುಗಡೆಗೆ ಯತ್ನಮಾಡುವದನ್ನು ನಿಶ್ಚಯಿಸಿದನು. ಅದಕ್ಕಾಗಿ ಸೈನ್ಯದೊಡನೆ ಸರ್ಧಾನಾಕ್ಕೆ ಹೊರಟನು.

ಟಾಮಸನು ಶತ್ರುಗಳಿಗೆ ತಿಳಿಸಿದ್ದೇನಂದರೆ—"ನೀವು ಬೇಗಮಳ ಕೈಲಾಗದ ಮಗನನ್ನು ಬಿಟ್ಟು ಬೇಗಮಳನ್ನು ಸಿಂಹಾಸನದ



ಮೇಲೆ ಕುಳ್ಳಿರಿಸದಿದ್ದರೆ ಸರ್ಧಾನಾದ ರಕ್ಷಣೆಯಾಗುವಂತಿಲ್ಲ. ನೀವು ಕೊಡುತ್ತಿರುವ ಯಾತನೆಗಳಿಂದ ಬೇಗಮಳು ಪ್ರಾಣಬಿಟ್ಟರೆ ಸಾಮ್ರಾಜನ ಮಂತ್ರಿಯು ಸರ್ಧಾನಾ ಜಾಗೀರನ್ನು ಜಪ್ತಮಾಡುವನು. ನಿಮ್ಮನ್ನು ಕೆಲಸದಿಂದ ಬಿಡುಗಡೆ ಮಾಡುವನು. ನಿಮಗೆ ಭಯಂಕರವಾದ ಶಿಕ್ಷೆಯನ್ನು ವಿಧಿಸುವನು."

ಬೇಗಮಳ ಗುಪ್ತವಿವಾಹಕ್ಕೆ ಇಬ್ಬರು ಸಾಕ್ಷಿಗಳಿದ್ದರೆಂದು ಹಿಂದೆ ಹೇಳಿದ್ದೇವೆ. ಇವರಲ್ಲಿ ಸಾಲುರನೊಬ್ಬನಾಗಿದ್ದನು. ಇವನು ಶತ್ರುಗಳನ್ನು ಕೂಡಿರಲಿಲ್ಲ. ಈ ಸಮಯದಲ್ಲಿ ಇವನು ಟಾಮಸನಂತೆ ಶತ್ರುಗಳನ್ನು ಹಾದಿಗೆತರುವ ಪ್ರಯತ್ನಮಾಡಿದನು. ಈರ್ವರ ಪ್ರಯತ್ನದಿಂದ ಶತ್ರುಗಳಿಗೆ ಬುದ್ಧಿಯು ಬಂತು. ಅವರಿಗೆ ತಮ್ಮ ತಪ್ಪು ತಿಳಿಯಿತು. ಇದರಿಂದ ಬೇಗಮಳ ಸಂಕಟವು ದೂರವಾಯಿತು; ಅವಳ ಕಷ್ಟದ ದಿವಸಗಳು ಕಳೆದುಹೋದವು. ಪುನಃ ಸಿಂಹಾಸನದ ಮೇಲೆ ಬಂದಳು. ಅದರಿಂದ ಮೊದಲಿನ ಅವಳ ಪುತ್ರರೂ ಮಿತ್ರರೂ ಸಭಾಸದರೂ ಕೂಡಿದರು; ಶತ್ರುಗಳು ಅವಳ ಅಧಿಕಾರವನ್ನು ಒಪ್ಪಿಕೊಂಡರು. ದೈವವು ಸ್ಥಿತ್ಯಂತರವ ಹೊಂದಿತು. ಜೀವನನಾಟ್ಯದ ಒಂದು ದುಃಖಮಯ ಅಂಕದ ಅಭಿನಯವಾಗಿ ಹೋಯಿತು; ಗೌರವೋಜ್ವಲವಾದ ಹೊಸ ಅಂಕವು ಪ್ರಾರಂಭವಾಯಿತು.

ಸುಮಾರು ೩೦ ಜನ ಯುರೋಪಿಯನ್ ಸೈನಿಕರು ಬೇಗಮಳ ಪ್ರಭುತ್ವವನ್ನೊಪ್ಪಿಕೊಂಡು ಶಪಥಮಾಡಿದರು. ಬೇಗಮಳ ಅಜ್ಞೆಯನ್ನು ಪಾಲಿಸುವಂತೆಯೂ, ಬೇರೆಯವರ ಅಧೀನತ್ವವನ್ನೆಂದಿಗೂ ಸ್ವೀಕರಿಸಲಿಕ್ಕಿಲ್ಲೆಂತಲೂ ಬರೆದುಕೊಟ್ಟರು. ಇವರಲ್ಲಿ ಸಾಲೂರನೊಬ್ಬನು ಬರೆಯಬಲ್ಲವನಾಗಿದ್ದನು. ಉಳಿದವರೆಲ್ಲರೂ ನಿರಕ್ಷರರು. ಅದರಿಂದ ಅವರು ಮೇಲಿನ ಅಭಿಪ್ರಾಯದ ಕಾಗದಕ್ಕೆ ತಮ್ಮ ನಿಶಾನೆಮಾಡಿದರು. ಸಿಂದೆಯ ಸೇನಾನಾಯಕನು ೧‖ ಲಕ್ಷ ರೂಪಾಯಿ ಪಾರಿತೋಷಿಕವನ್ನು ಹೊಂದಿ ತಿರುಗಿ ತನ್ನ ಸ್ಥಳಕ್ಕೆ ಹೋದನು.

ಬೇಗಮಳಿಗೆ ಟಾಮಸನು ಬಹು ದೊಡ್ಡ ಉಪಕಾರ ಮಾಡಿದಂತಾಯಿತು. ಅದಕ್ಕಾಗಿ ಬೇಗಮಳು ತನ್ನ ಗೆಳತಿಯಾದ ಮೇರಿಯೆಂಬ ಫ್ರೆಂಚಯುವತಿಯನ್ನು ಟಾಮಸನಿಗೆ ಅರ್ಪಿಸಿದಳು. ಟಾಮಸನು ಅವಳ ಪಾಣಿಗ್ರಹಣಕ್ಕೆ ಒಪ್ಪಿಕೊಂಡನು. ಬೇಗಮಳು ಅವರೀರ್ವರ ವಿವಾಹಮಾಡಿ ಬಹು ಮೂಲ್ಯವಾದ ಬಳುವಳಿಗಳನ್ನು ಕೊಟ್ಟಳು.

ಸಾಲುರನು ಬೇಗಮಳ ಸೇನಾಪತಿಯಾದನು. ಅವನ ಅಧೀನದಲ್ಲಿರುವ ಸೈನ್ಯವು ದಿನಾಲು ಬೆಳೆಯತೊಡಗಿತು. ೫ ದಲವು ೬ ದಲವಾಯಿತು. ಅದರೊಡನೆ ಅಶ್ವಾರೋಹಿಗಳೂ, ತೋಪುಗಾರರೂ ಹೆಚ್ಚಾದರು. ಇದರಿಂದ ಬೇಗಮಳ ಶಕ್ತಿಯು ಮೊದಲಿಗಿಂತಲೂ ಹೆಚ್ಚಾಯಿತು.

ಸಮರುವಿನ ಮಗನಾದ ಜಾಫರ ಇಯಾಬನು ಬೇಗಮಳ ನಜರಬಂದಿಯಲ್ಲಿದ್ದನು. ಅವನು ಸನ್ ೧೮೦೩ ರಲ್ಲಿ ವಿಷಮುಜ್ವರದಿಂದ ತೀರಿಕೊಂಡನು.

---

## ೭ನೆಯ ಅಧ್ಯಾಯ.

ಬೇಗಮಳ ಸೈನಿಕರ ಬಂಡಾಯದ ವಿಷಯವಾಗಿಯೂ, ಲೆವ್ಹಾಸುಲ್ತನ ಮರಣದ ವಿಷಯವಾಗಿಯೂ ಹಲವರು ಬೇರೆ ಬೇರೆ ಕಾರಣಗಳನ್ನು ಹೇಳಿದ್ದಾರೆ. ಈ ಮೊದಲು ಹೇಳಿದ ಸಂಗತಿಯು ಸ್ಲೀಮನ್ (Sleeman) ಸಾಹೇಬರ ಗ್ರಂಥವನ್ನವಲಂಬಿಸಿ ಬರೆದುದಾಗಿದೆ. ಸ್ಲೀಮನ್ನನು ಬೇಗಮಳ ಕಾಲದ ಲೇಖಕನು. ಅವನು ಬೇಗಮಳ ದರ್ಶನಾಪೇಕ್ಷೆಯಿಂದ ಮಿರತಕ್ಕೆ ಹೋಗಿದ್ದನು. ಅದರೆ ಬೇಗಮಳು ಸತ್ತದ್ದರಿಂದ ಅವನ ಆಶೆಯು ಪೂರ್ಣವಾಗಲಿಲ್ಲ. ಸ್ಲೀಮನ್ನನು ಬೇಗಮಳ ಚರಿತ್ರೆಯನ್ನು ಬಹು ಶ್ರಮಬಟ್ಟು ಬರೆದಿದ್ದಾನೆ. ಅದರಿಂದ ಅವನ ಗ್ರಂಥವು ಬಹುಮಟ್ಟಿಗೆ ವಿಶ್ವಾಸಯೋಗ್ಯವಾಗಿದೆಯೆಂದು ಹೇಳಬಹುದು.



ಬೇಗಮಳ ವಿಷಯವಾಗಿ ಜಾರ್ಜ ಟಾಮಸನೂ ಬರೆದಿಟ್ಟಿದ್ದಾನೆ. ಆದರೆ ಅದು ಕೆಲಮಟ್ಟಿಗೆ ಶತ್ರುಪಕ್ಷದ ವಿವರಣೆಯಾಗಿದೆಯೆಂದು ಹೇಳಬಹುದು. ಟಾಮಸನು ಸೈನಿಕರ ಬಂಡಾಯದ ವಿಷಯವಾಗಿ ಬರೆದ ಸಂಗತಿಗಳು, ಬಹುಮಟ್ಟಿಗೆ ಸ್ಲೀಮನ್ನನ ವಿವರಣೆಯನ್ನು ಹೋಲುತ್ತಿರುವವು. ಅವುಗಳ ಸಾರಾಂಶವನ್ನು ಸಂಕ್ಷೇಪವಾಗಿ ಕೆಳಗೆ ಹೇಳುವೆವು.

" ಟಾಮಸನು ಬೇಗಮಳ ಕೆಲಸನ್ನು ಬಿಟ್ಟ ಬಳಕ ಒಬ್ಬ ಮಹಾರಾಷ್ಟ್ರ ಸರದಾರನಲ್ಲಿ ನೌಕರಿಗೆ ನಿಂತನು. ತುಸು ದಿವಸಗಳಲ್ಲಿ ಸ್ವತಂತ್ರ ಸೇನಾದಲವನ್ನು ಮಾಡಿಕೊಂಡು, ಆ ಸರದಾರನಿಂದ ಕೆಲವು ಊರುಗಳನ್ನು ಇನಾಮಾಗಿ ಪಡೆದು ಆ ಜಹಾಗೀರುಗಳನ್ನು ಉಪಭೋಗಿಸುತ್ತಿದ್ದನು. ಅವನು ಅಪಮಾನದ ಮುಯ್ಯ ತೀರಿಸುವದಕ್ಕಾಗಿ ಬೇಗಮಳ ಶತ್ರುವಾದನು. ಅದರಿಂದ ಅವನು ಯಾವರೀತಿಯಿಂದಾದರೂ ಬೇಗಮಳ ನಾಶಮಾಡುವದಕ್ಕೆ ಯತ್ನಿಸತೊಡಗಿದನು. ಅದಕ್ಕಾಗಿ ಅವನು ಹೊತ್ತುಸಾಧಿಸಿ ಬೇಗಮಳ ಸೀಮೆಯನ್ನು ಸುಲಿಗೆ ಮಾಡುತ್ತಿದ್ದನು. ಬರಬರುತ್ತ ಟಾಮಸನ ಸೈನಿಕರ ಸಂಖ್ಯೆಯು ಹೆಚ್ಚಾಗತೊಡಗಿತು. ಅದರಿಂದ ಅವನ ಬಲವು ಬೆಳೆಯುತ್ತನಡೆಯಿತು.

" ಟಾಮಸನ ಈ ಏಳಿಗೆಯಿಂದ ಬೇಗಮಳಿಗೆ ಚಿಂತೆಯುಂಟಾಯಿತು. ಟಾಮಸನು ಶತ್ರುವಾಗಿರುವದನ್ನು ಅವಳು ಮರೆತಿರಲಿಲ್ಲ. ಅದರಿಂದ ಈ ತರದ ಪ್ರಬಲ ವೈರಿಯು ಸಮೀಪದಲ್ಲಿರುವದು ಅವಳಿಗೆ ಇಷ್ಟವಾಗಿರಲಿಲ್ಲ. ಅದರಿಂದವಳು ಯಾವ ರೀತಿಯಿಂದಾದರೂ ಟಾಮಸನ ಬಲವನ್ನು ಕಡಿಮೆಮಾಡುವ ಯೋಚನೆ ಮಾಡತೊಡಗಿದಳು. ಇಲ್ಲವಾದರೆ ತಾನು ಆಪತ್ತಿಲ್ಲದೆ ಇರಲಾರೆನೆಂದು ಅವಳು ಭಾವಿಸಿದಳು. ಅದಕ್ಕಾಗಿ ಅವಳು ಟಾಮಸನ ನಾಶಕ್ಕಾಗಿ ಅನೇಕ ಉಪಾಯಗಳನ್ನು ಮಾಡಿದಳು. ಟಾಮಸನನ್ನು ಕೆಲಸದಿಂದ ತೆಗೆದುಹಾಕುವದಕ್ಕಾಗಿ ಮಹಾರಾಷ್ಟ್ರ ಸರದಾರನಿಗೆ ಹೇಳಿ

ಕಳಿಸಿದಳು. ಇದಕ್ಕಾಗಿ ಅವಳು ಲಂಚ ಕೊಡುವದಕ್ಕೂ ಹಿಂದು ಮುಂದು ನೋಡಲಿಲ್ಲ. ಆದರೆ ಅದು ಸಾಧ್ಯವಾಗಲಿಲ್ಲ. ಕಡೆಯಲ್ಲಿ ಬೇಗಮಳು ಸೈನ್ಯದೊಡನೆ ಸರ್ಧಾನಾವನ್ನು ಬಿಟ್ಟು, ಟಾಮಸನಿಂದ ೧೨ ಮೈಲು ಅಂತರದ ಮೇಲೆ ಪಾಳೆಯ ಮಾಡಿಕೊಂಡಿದ್ದಳು. ಟಾಮಸನ ದ್ವೇಷದ ಮೂಲಕಾರಣನಾದ ಲೆವ್ಹಾಸುಲ್ತನು ಬೇಗಮಳ ಸೇನಾಪತಿಯು; ಮತ್ತು ಅವಳ ಪತಿಯು. ಇದು ಟಾಮಸನಿಗೆ ಅತ್ಯಂತ ವಿಷಾದವನ್ನುಂಟುಮಾಡಿತು. ”

“ ಬೇಗಮಳ ಸಂಕಲ್ಪವು ಈಡೇರಲಿಲ್ಲ. ಅವಳ ಸೈನಿಕರಲ್ಲಿ ಮತಭೇದವಾಯಿತು. ಬಹುಜನರು ಬೇಗಮಳ ಶತ್ರುಗಳಾದರು. ಆದರಿಂದ ಬೇಗಮಳು ಸಿಂಹಾಸನಭ್ರಷ್ಟಳಾಗಿ ಸೆರೆಯಾಳಾಗಬೇಕಾಯಿತು. ”

“ ಬೇಗಮಳ ಸೈನ್ಯದಲ್ಲಿ ಲಿಗೊಯಸ್‌ನೆಂಬೊಬ್ಬ ಜರ್ಮನ ನವಕರನಿದ್ದನು. ಇವನೊಡನೆ ಟಾಮಸನ ಸ್ನೇಹವಿತ್ತು. ಬೇಗಮಳ ಸೇನಾಪತಿಯು ಲಿಗೊಯಿಸನನ್ನು ದ್ವೇಷಿಸುತ್ತಿದ್ದನು. ಟಾಮಸನನ್ನು ಆಕ್ರಮಿಸಲಿಕ್ಕೆ ಲಿಗೊಯಿಸನು ಅನುಕೂಲನಾಗಿರಲಿಲ್ಲ. ಈ ಕಾರ್ಯವನ್ನು ಮಾಡಬೇಡೆಂದು ಅವನು ಬೇಗಮಳಿಗೆ ಮೇಲಿಂದಮೇಲೆ ಹೇಳಿದನು. ಇದರಿಂದ ಲೆವ್ಹಾಸುಲ್ತನು ಸಿಟ್ಟಾಗಿ ಲಿಗೊಯಿಸನನ್ನು ಕೆಲಸದಿಂದ ತೆಗೆದು ಬೇರೊಬ್ಬನನ್ನು ಆ ಕೆಲಸಕ್ಕೆ ನಿಯಮಿಸಿದನು. ”

“ ಈ ಕೆಲಸದಿಂದ ಬೇಗಮಳ ಸೈನಿಕರು ಸಿಟ್ಟಾದರು. ತಮ್ಮಲ್ಲಿ ಒಬ್ಬನಿಗಾದ ಅಪಮಾನವು ಯಾವತ್ತು ಸೈನಿಕರ ಅಪಮಾನವೆಂದು ತಿಳಿದರು. ಈ ವಿಷಯವಾಗಿ ಅವರು ಬೇಗಮಳಿಗೆ ಹೇಳಿಕೊಂಡರು. ಆದರೆ ಆದರಿಂದ ಯಾವ ಫಲವೂ ಆಗಲಿಲ್ಲ. ಅದರಿಂದ ಸೈನಿಕರೆಲ್ಲರೂ ಬಂಡಾಯಮಾಡಿದರು. ಬಂಡುಗಾರರು ಜಾಫರ ಇಯಾಬನನ್ನು ಅರಸನನ್ನಾಗಿ ಮಾಡುವದನ್ನು ನಿಶ್ಚಯಿಸಿದರು. ಅದರಂತೆ



ಒಂದು ದಲ ಸೈನ್ಯವು ಹೋಗಿ ಜಾಫರ ಇಯಾಬನನ್ನು ಪಟ್ಟದ ಮೇಲೆ ಕುಳ್ಳಿರಿಸಿತು. ”

“ ಈ ಬಂಡಾಯದ ವರ್ತಮಾನವ ತಿಳಿದು ಬೇಗಮ-ಲೆವ್ಹಾಸುಲ್ತರು ಕೆಲ ಜನ ಪರಿಚಾರಿಕೆಯರೊಡನೆ ಓಡಿಹೋಗುವ ಯತ್ನ ಮಾಡಿದರು. ಗಂಗಾತೀರಾಭಿಮುಖವಾಗಿ ಹೋಗಿ ವಜೀರಜಾಫರ ಉದ್ದೌಲನ ರಾಜ್ಯದಲ್ಲಿ ಆಶ್ರಯ ಹೊಂದುವ ಆಲೋಚನೆಮಾಡಿದರು. ಆದರೆ ರಾಜಧಾನಿಯಿಂದ ನಾಲ್ಕು ಮೈಲು ಹೋಗುವಷ್ಟರಲ್ಲಿಯೇ ಬಂಡುಗಾರರ ಕೈಗೆ ಸಿಕ್ಕರು. ಮುಂದೆ ಲೆವ್ಹಾಸುಲ್ತನು ಹೇಗೆ ಸತ್ತನೆಂಬದನ್ನು ಮೇಲೆ ಹೇಳಿದ್ದೇವೆ. ”

“ ಬಂಡುಗಾರರು ಬೇಗಮಳನ್ನು ಸೆರೆಹಿಡಿದು ಸರ್ಧಾನಾಕ್ಕೆ ತಂದರು. ಈ ಅವಸ್ಥೆಯಲ್ಲಿ ಕೆಲವು ದಿವಸ ಹೋದ ತರುವಾಯ ಬೇಗಮಳು ಸಹಾಯಕ್ಕಾಗಿ ಟಾಮಸನಿಗೆ ವಿನಯದಿಂದ ಪತ್ರ ಬರೆದಳು. ಮತ್ತು ಮಹಾರಾಷ್ಟ್ರರು ಈ ಕೆಲಸದಲ್ಲಿ ತನಗೆ ಸಹಾಯ ಮಾಡಿದರೆ, ಅದಕ್ಕಾಗಿ ಬೇಕಾದಷ್ಟು ಧನವನ್ನು ಕೊಡುವಂತೆಯೂ ತಿಳಿಸಿದಳು. ”

“ ಈ ಪತ್ರವನ್ನು ನೋಡಿದೊಡನೆ ಟಾಮಸನು ಬೇಗಮಳ ಪೂರ್ವದ ಶತ್ರುತ್ವವನ್ನು ಮರೆತುಬಿಟ್ಟನು. ಬಾಪು ಸಿಂದೆಗೆ ಸೈನ್ಯಸಹಿತ ಸರ್ಧಾನಾಕ್ಕೆ ಹೋಗುವದಕ್ಕೆ ಹೇಳಿದನು. ಅದಕ್ಕಾಗಿ ಟಾಮಸನು ಸಿಂದೆಗೆ ೧೨೦೦೦೦ ರೂಪಾಯಿ ಕೊಡುವದಕ್ಕೆ ಒಡಂಬಟ್ಟನು. ಟಾಮಸನು ದೂರದರ್ಶಿಯಾಗಿದ್ದನು. ಅದರಿಂದ ಅವನು ಜಾಫರ ಇಯಾಬನ ಸೈನಿಕರಲ್ಲಿ ಕೆಲವರನ್ನು ತನ್ನ ಕಡೆಗೆ ಮಾಡಿಕೊಳ್ಳುವದು ಅವಶ್ಯವೆಂದು ಭಾವಿಸಿದನು. ಇಲ್ಲದಿದ್ದರೆ ತನ್ನ ಯತ್ನಗಳಿಗೆ ಫಲವಿಲ್ಲದಂತಾಗುವದೆಂದೂ, ಬೇಗಮಳು ಹೆಚ್ಚು ವಿಪತ್ತುಗಳಿಗೆ ಗುರಿಯಾಗುವಳೆಂದೂ ಚಿಂತಿಸಿದನು. ಈ ಉದ್ದೇಶದಿಂದ ಟಾಮಸನು ತನ್ನ ಯಾವತ್ತು ಸೈನ್ಯದೊಡನೆ ಹೊರಟು ಸರ್ಧಾನಾದಿಂದ ಆ ಹರದಾರಿಯ ಮೇಲೆ ಇಳಿದುಕೊಂಡನು; ಮತ್ತು ಮಹಾ-

ರಾಷ್ಟ್ರರ ಅಪ್ಪಣೆಯಿಂದ ತಾನು ಬೇಗಮಳ ಸಹಾಕನಾಗಿರುವೆನೆಂದೂ, ಸೈನಿಕರು ಬೇಗಮಳನ್ನು ಪುನಃ ಸಿಂಹಾಸನದ ಮೇಲೆ ಕುಳ್ಳಿರಿಸದಿದ್ದರೆ ಕಠಿಣಶಿಕ್ಷೆಯನ್ನು ಹೊಂದುವರೆಂದೂ ಸಾರಿದನು."

"ಟಾಮಸನ ಈ ಯುಕ್ತಿಯು ಫಲದ್ರೂಪವಾಯಿತು. ದುರ್ಗದಲ್ಲಿರುವ ಎಷ್ಟೋ ಸೈನಿಕರು ಬೇಗಮಳ ಪಕ್ಷವನ್ನವಲಂಬಿಸಿದರು; ಜಾಫರ ಇಯಾಬನನ್ನು ಸೆರೆಯಲ್ಲಿಟ್ಟರು."

"ಟಾಮಸನಿಗೆ ಸೈನಿಕರ ಸ್ವಭಾವವು ಚನ್ನಾಗಿ ಗೊತ್ತಿತ್ತು. ಸೈನಿಕರಲ್ಲಿ ಬಹು ಜನರು ಚಂಚಲರು; ಯಾವಾಗಲೂ ಮತವನ್ನು ಬದಲಿಸುವವರು; ಬಂಡಾಯಮಾಡುವದು ಅವರ ನಿತ್ಯದ ಕೆಲಸವಾಗಿತ್ತು. ಈ ಕಾರಣದಿಂದ ಟಾಮಸನು ಅವರಲ್ಲಿ ವಿಶ್ವಾಸವಿಡಲಿಲ್ಲ. ಅದರಿಂದ ತನ್ನೊಡನೆ ೫೦ ಜನ ಅಶ್ವಾರೋಹಿಗಳನ್ನು ತೆಗೆದುಕೊಂಡು ಸರ್ಧಾನಾಕ್ಕೆ ಹೊರಟನು. ಉಳಿದ ಸೈನಿಕರಿಗೆ ಹಿಂದೆ ಬರುವಂತೆ ಅಪ್ಪಣೆಮಾಡಿದನು."

"ಟಾಮಸನು ಸರ್ಧಾನಾಕ್ಕೆ ಬರುವಷ್ಟರಲ್ಲಿಯೇ ಬೇರೊಂದು ಸೈನ್ಯದಲವು ಬಂಡಾಯಮಾಡಿ, ಜಾಫರ ಇಯಾಬನನ್ನು ಪುನಃ ಸಿಂಹಾಸನದ ಮೇಲೆ ಕೂಡಿಸಿತ್ತು. ಟಾಮಸನ ಆಗಮನದಿಂದ ಜಾಫರನಿಗೆ ಸಿಟ್ಟುಬಂದಿತು. ಅವನು ಟಾಮಸನನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳುವ ಯತ್ನಮಾಡಿದನು. ಆದರೆ ಅದು ಸಾಧ್ಯವಾಗಲಿಲ್ಲ. ಕಡೆಗೆ ಟಾಮಸನ ಹತ್ತರ ಹೆಚ್ಚು ಸೈನ್ಯವಿಲ್ಲದಿರುವದನ್ನು ನೋಡಿ ಕೊಲ್ಲುವ ಹೆದರಿಕೆ ಹಾಕಿದನು. ಅಲ್ಪ ಸಮಯದಲ್ಲಿಯೇ ಟಾಮಸನ ಸೈನ್ಯವು ಅಲ್ಲಿಗೆ ಬಂದಿತು. ನಾಲ್ಕೂ ಕಡೆಯಲ್ಲಿ ಗೊಂದಲವೆದ್ದಿತು. ಸೈನಿಕರು ಮಹಾರಾಷ್ಟ್ರರು ತಮ್ಮನ್ನು ಶಿಕ್ಷಿಸುವದಕ್ಕಾಗಿ ಬಂದಿರುವರೆಂದು ಭಾವಿಸಿದರು. ಅದರಿಂದವರು ತಮ್ಮ ಯಾವತ್ತು ಸಂಕಲ್ಪಗಳನ್ನು ಬಿಟ್ಟು ಬೇಗಮಳ ಆಧೀನತ್ವವನ್ನೊಪ್ಪಿಕೊಂಡರು. ಅದರಿಂದ ಬೇಗಮಳು ಪುನಃ ಸಿಂಹಾಸನವನ್ನೇರಿದಳು."



ಮುಂಡಿ ( Mundy ), ಬೇಕನ್ ( Bacon ) ಮೊದಲಾದವರು ಬೇಗಮಳ ಆತ್ಮಹತ್ಯೆಯು ಕೇವಲ ನಟನೆ, ಸೈನಿಕರೊಡನೆ ನಡೆದ ತನ್ನ ಪತಿಯು ನಡತೆಗಳಿಂದ ಬಂಡಾಯವು ನಿಶ್ಚಯವಾಗಿ ಏಳುವದೆಂದು ಅವಳು ತರ್ಕಿಸಿದಳು; ಅದರಿಂದ ಪತಿಯ ಕೈಯಿಂದ ಪಾರಾಗುವದಕ್ಕಾಗಿ ಈ ಆತ್ಮಹತ್ಯೆಯ ನಟನೆಮಾಡಿದಳು; ಯಾಕಂದರೆ ಮೊದಲೇ ಮಾತಾಡಿದಂತೆ ತನ್ನ ಆತ್ಮಹತ್ಯೆಯ ನಟನೆಯಿಂದ ಪತಿಯು ಮಾತ್ರ ನಿಶ್ಚಯವಾಗಿ ಆತ್ಮಹತ್ಯೆಮಾಡಿಕೊಳ್ಳುವನೆಂದು ಅವಳ ದೃಢವಿಶ್ವಾಸವಿತ್ತು; ಎಂದು ಹೇಳುವರು.

ಮೇಲಿನ ಈ ವಿವರಣೆಯನ್ನು ಎಷ್ಟುಮಾತ್ರವೂ ನಂಬುವಂತಿಲ್ಲ ಯಾಕಂದರೆ ಇದು ನಿಜವಿದ್ದರೆ ಮುಖ್ಯ ಶತ್ರುವಾದ ಟಾಮಸನು ಇದನ್ನು ಬರೆಯದೆ ಬಿಡುತ್ತಿರಲಿಲ್ಲ. ಕಾಂಪಟನ್ನ ( compton )ನು ಬೇಗಮಳು ಮನಸ್ಸಿಲ್ಲದೆ ಆತ್ಮಹತ್ಯೆಗೆ ಪ್ರಯತ್ನಿಸಿದಳೆಂದು ಹೇಳಿದ್ದರೂ, ಬೇಗಮಳು ಲೆವ್ಹಾಸುಲ್ತನ ಮರಣಕ್ಕಾಗಿ ಈ ಕೃತ್ಯ ಮಾಡಿದಳೆಂದು ಹೇಳುವದಿಲ್ಲ, ಬೇಗಮಳು ತನ್ನ ಸೈನಿಕರೊಡನೆ ಸಂಚುಮಾಡಿ ಲೆವ್ಹಾಸುಲ್ತನ ಮರಣಕ್ಕಾಗಿ ಯತ್ನಿಸಿದಳೆಂದು ಹೇಳುವವರ ಮತವು ತಪ್ಪಾದದ್ದೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಯಾಕಂದರೆ ಲೆವ್ಹಾಸುಲ್ತನ ಮರಣಕ್ಕಾಗಿಇಷ್ಟು ಕಾರಸ್ಥಾನ, ಪಲಾಯನಗಳನ್ನು ಯೋಚಿಸುವ ಅವಶ್ಯಕತೆಯಿದ್ದಿಲ್ಲ. ಕೇವಲ ಬೇಗಮಳ ಸನ್ನೆಯಿಂದ ಸೈನಿಕರು ಈ ಕೆಲಸ ಮಾಡುತ್ತಿದ್ದರು. ಸೈನಿಕರೊಡನೆ ಬೇಗಮಳು ಸಂಚುಮಾಡಿದ್ದು ನಿಶ್ಚಯವಿದ್ದರೆ, ಲೆವ್ಹಾಸುಲ್ತನ ಮರಣದ ತರುವಾಯ ಇಷ್ಟು ಕಷ್ಟಗಳನ್ನು ಅನುಭವಿಸುವ ಪ್ರಸಂಗ ಬರುತ್ತಿದ್ದಿಲ್ಲ. ಆದ್ದರಿಂದ ಈ ಗುಪ್ತಕಾರಸ್ಥಾನದ ಸಂಗತಿಯು ಸಟೆಯೆಂದು ನಾವು ನಿಶ್ಚಯವಾಗಿ ಹೇಳಬಲ್ಲೆವು.

---

## ೮ನೆಯ ಅಧ್ಯಾಯ.

ಬೇಗಮಳು ಪುನಃ ಪ್ರಣಯಪಾಶದಲ್ಲಿ ಸಿಕ್ಕುಬಿದ್ದದ್ದು ಅಂದರೆ ಲೆವ್ಹಾಸುಲ್ತನ ಪಾಣಿಗ್ರಹಣಮಾಡಿದ್ದು ಸರಿಯಾದ ಕೆಲಸವಾಗಲಿಲ್ಲ. ಇದು ಬೇಗಮಳ ಚಿತ್ತಚಂಚಲತೆಯ ಪರಿಣಾಮವಲ್ಲದೆ ಬೇರೆಯಿಲ್ಲ. ಈ ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ಬೇಗಮಳು ಅನುಭವಿಸಿದಳೆಂದು ಹೇಳಬಹುದು. ಜೀವನದಲ್ಲಿಯ ಒಂದು ಭ್ರಮೆಗಾಗಿ ಅವಳು ಅತಿಶಯ ಅಪಮಾನವನ್ನೂ ನಾಚಿಕೆಯನ್ನೂ ಹೊಂದಬೇಕಾಯಿತು. ಇದರಿಂದ ಬೇಗಮಳು ಬುದ್ಧಿಗಲಿತಳು. ಅದರಿಂದ ಅವಳು ಮುಂದೆ ತನ್ನಿಂದ ಈ ತರದ ಕಾರ್ಯಗಳಾಗದಂತೆ ಯತ್ನಿಸಿದಳು. ಚಿತ್ತಸ್ಥಿರತೆಯನ್ನು ಹೊಂದಿದಳು. ಬಂದ ಕಲಂಕವನ್ನು ಕಳೆದುಕೊಳ್ಳಲಿಕ್ಕೆ ಪ್ರಯತ್ನಿಸಿದಳು. ಅದಕ್ಕಾಗಿ ಅವಳು ತನ್ನ ದ್ವಿತೀಯ ವಿವಾಹದ ಸಂಗತಿಯನ್ನು ಪೂರ್ಣವಾಗಿ ಮರೆತುಬಿಟ್ಟಳು; ತನ್ನ ಮರಣಪರ್ಯಂತರ ಸಮರುವಿನ ಹೆಸರಿನಿಂದಲೇ ಜೀವಿಸಿದಳು. ಲೆವ್ಹಾಸುಲ್ತನ ಮರಣದ ತರುವಾಯ ದ್ವಿತೀಯ ವಿವಾಹದ ಸಂಗತಿಯನ್ನೆಂದೂ ಅವಳು ಉಲ್ಲೇಖಿಸದಿರುವದು ಇದಕ್ಕೆ ದೃಷ್ಟಾಂತವಾಗಿದೆ.

ಬೇಗಮಳ ಎರಡನೆಯ ವಿವಾಹದ ಸಂಗತಿಯು ಸೈನಿಕರಿಗೆ ಗೊತ್ತಿರದ್ದರಿಂದ ಈ ಅನರ್ಥವೊದಗಿತೆಂದು ಹೇಳಬಹುದು. ಒಂದುವೇಳೆ ಮೊದಲೇ ಗೊತ್ತಾಗಿದ್ದರೂ, ಸೈನಿಕರು ಇದಕ್ಕೆ ಸಮ್ಮತಿಸುತ್ತಿರಲಿಲ್ಲ. ಇದನ್ನು ಬೇಗಮಳು ಅರಿತಿದ್ದಳು. ಅದಕ್ಕಾಗಿಯೇ ಅವಳು ಈ ಸಂಗತಿಯನ್ನು ಆದಷ್ಟು ಗುಪ್ತವಾಗಿಡಲಿಕ್ಕೆ ಯತ್ನಿಸಿದಳು. ಆದರೆ ಅವಳ ಪ್ರಯತ್ನವು ಸಫಲವಾಗಲಿಲ್ಲ, ನಿತ್ಯದ ವ್ಯವಹಾರದಿಂದ ಸೈನಿಕರು ಬೇಗಮಳನ್ನು ಲೆವ್ಹಾಸುಲ್ತನ ಉಪಪತ್ನಿಯಾಗಿ ಭಾವಿಸಿದರು. ಅದರಿಂದಲೇ ಕ್ರುದ್ಧರಾದರು; ಬೇಗಮಳ ಒಡೆತನವನ್ನು ಒಪ್ಪಲಿಲ್ಲ; ರಾಜ್ಯದಲ್ಲಿ ಯುದ್ಧಾಗ್ನಿಯನ್ನು ಹೊತ್ತಿಸಿದರು. ಬೇಗಮಳನ್ನು ನಾನಾ ವಿಪತ್ತುಗಳಿಗೆ ಗುರಿಮಾಡಿದರು.



ಸಮರುವಿನ ಮೇಲೆ ಸೈನಿಕರ ಪ್ರೀತಿಯು ಬಹಳವಾಗಿತ್ತು. ಬೇಗಮಳು ದ್ವಿತೀಯ ವಿವಾಹಮಾಡಿಕೊಂಡರೆ ಸಮರುವಿನ ಹೆಸರು ಇಲ್ಲದಂತಾಗಿ ಹೋಗುತ್ತಿತ್ತು. ಆ ಸ್ಥಳವನ್ನು ಲೆವ್ಹಾಸುಲ್ತನ ಹೆಸರು ಆಕ್ರಮಿಸುತ್ತಿತ್ತು. ಇದು ಸೈನಿಕರಿಗೆ ಸಮ್ಮತವಿರಲಿಲ್ಲ. ಅದರಿಂದ ಅವರು ಅವ್ಯವಸ್ಥಚಿತ್ತನಾದ ಲೆವ್ಹಾಸುಲ್ತನನ್ನು ಪೂರ್ಣವಾಗಿ ವಿರೋಧಿಸಿದರು. ಅದರಿಂದ ಲೆವ್ಹಾಸುಲ್ತನು ಆತ್ಮಹತ್ಯ ಮಾಡಿಕೊಳ್ಳಬೇಕಾಯಿತು.

ಬೇಗಮಳ ಚರಿತ್ರೆಯಲ್ಲಿ ಕಲಂಕಾರೋಪವಾಯಿತು. ಎಲ್ಲರೂ ಅವಳನ್ನು ನಿಂದಿಸತೊಡಗಿದರು. ಜನರೆಲ್ಲರೂ ಬೇಗಮಳು ಲೆವ್ಹಾಸುಲ್ತನ ಉಪಪತ್ನಿಯೆಂದು ತಿಳಿದರು. ಈ ಕಲಂಕವನ್ನು ಬೇಗಮಳು ಸುಮ್ಮನೆ ಸಹಿಸಿದಳು. ಗುಪ್ತವಿವಾಹದ ಸಂಗತಿಯನ್ನು ಸಾರಿ ಹೇಳಿ ಈ ಅಪವಾದವನ್ನು ಕಳೆದುಕೊಳ್ಳಲಿಕ್ಕೆ ಬರುವಂತಿತ್ತು. ಆದರೆ ಅದು ಬೇಗಮಳ ಮನಸ್ಸಿಗೆ ಬರಲಿಲ್ಲ.

ಬೇಗಮಳ ದ್ವಿತೀಯ ವಿವಾಹದ ಸಂಗತಿಯು ಸರ ಜಾನ್ ಶೋರ, ಬರ್ನಿಯರ, ಸಾಲುರ ಮತ್ತು ಲೆವ್ಹಾಸುಲ್ತನ ಒಬ್ಬಿಬ್ಬರು ಮಿತ್ರರು ಇವರಿಗೆ ಮಾತ್ರ ಗೊತ್ತಿತ್ತು. ಬಹಳ ದಿವಸ ಬೇಗಮಳ ನೌಕರಿಯಲ್ಲಿದ್ದ ವೃದ್ಧ ದೇಶೀಯ ಜನರಿಂದ ಸ್ಲೀಮನ್ನನು ಹೀಗೆ ಅಭಿಪ್ರಾಯಪಟ್ಟಿದ್ದಾನೆ*—“ ಬೇಗಮಳು ಲೆವ್ಹಾಸುಲ್ತನನ್ನು ಪ್ರೀತಿಸಿದ್ದೇ ಬಂಡಾಯದ ಕಾರಣವು. ಬಹುಕಾಲ ಅವಳ ಅನ್ನದಿಂದ ಜೀವಿಸಿದ ನಾವು ಹೀಗೆ ಹೇಳುವದನ್ನು ದೇವರು ಕ್ಷಮಿಸಲಿ. ”

---

* There realy was too much of truth in the story which excitedthe troops to mutiny on that accasion, her too great intimacy with the gallant young Frenchman. God forgive them for saying so of a lady whose solt they had eaten for so many years.

ಲೆವ್ಹಾಸುಲ್ತನು ಕರ್ನಲ್ ಮ್ಯಾಕ್‌ಗಾವುನನಿಗೆ ತನ್ನ ವಿವಾಹದ ಸುದ್ದಿಯನ್ನು ಹೇಳಿರಲಿಲ್ಲ. ಸಿಂದೆಗೂ ಈ ಸಂಗತಿಯು ಗೊತ್ತಿರಲಿಲ್ಲ. ಪ್ರಣಯಮೋಹದಿಂದ ಮುಗ್ಧಳಾದ ಬೇಗಮಳು ಲೆವ್ಹಾಸುಲ್ತನ ಅಂಕಶಾಯಿನಿಯಾಗಿ, ತೋರ್ಪಡಿಸಿದ ಮನಸ್ಸಿನ ದುರ್ಬಲತೆಯನ್ನು ವಿಸ್ಮೃತಿಯಲ್ಲಿ ಮುಳುಗಿಸಿಬಿಡುವದಕ್ಕಾಗಿ, ಇಲ್ಲವೆ ಸಮರುವನ್ನು ಹೆಚ್ಚು ಉಜ್ವಲಮಾಡುವದಕ್ಕಾಗಿ ಬೇಗಮಳು ತನ್ನ ಮೃತ್ಯುಪತ್ರದಲ್ಲಿ ತನ್ನ ಉತ್ತರಾಧಿಕಾರಿಯಾದ ಡಾಯಿಸನು ಸೊಂಬರನೆಂಬ ನಾಮವನ್ನು ಧರಿಸಬೇಕೆಂದು ಬರೆದಿಟ್ಟಿರುವಳು.

ತನ್ನ ಶಕ್ತಿಯನ್ನು ಕಾಯ್ದಿಟ್ಟುಕೊಂಡು ಶಾಂತತೆಯಿಂದ ಪ್ರಜಾಶಾಸನಮಾಡುವದು ಬೇಗಮಳ ಪ್ರಥಮ ಕರ್ತವ್ಯವಾಗಿತ್ತು. ಈ ಕರ್ತವ್ಯವನ್ನು ಈಡೇರಿಸುವದಕ್ಕೆ ಅವಳು ಎಲ್ಲ ವಿಧದಿಂದಲೂ ಯತ್ನಿಸತೊಡಗಿದಳು.

ಸನ್ ೧೮೦೩ ರಲ್ಲಿ ಇಂಗ್ಲೀಷರು ಮಹಾರಾಷ್ಟ್ರರೊಡನೆ ಯುದ್ಧವನ್ನು ಸಾರಿದರು. ಬೇಗಮಳು ತನ್ನ ೬ ದಲ ಸೈನ್ಯದಲ್ಲಿ ೫ ದಲಗಳನ್ನು ಸಾಲುರನ ಕೈಯಲ್ಲಿ ಕೊಟ್ಟು ಸಿಂದೆಯುನ ಸಹಾಯಕ್ಕಾಗಿ ದಕ್ಷಿಣಕ್ಕೆ ಕಳಿಸಿದಳು. ಈ ಯುದ್ಧವು ಇತಿಹಾಸದಲ್ಲಿ ಆಸಾಯಿಕಾಳಗವೆಂದು ಹೆಸರಾಗಿದೆ. ಆರ್ಥರ ವೆಲ್ಲಸ್ಲಿಯು ಈ ಯುದ್ಧದಲ್ಲಿ ದಕ್ಷಿಣದ ಮಹಾರಾಷ್ಟ್ರರ ಶಕ್ತಿಯನ್ನು ನಾಶಮಾಡಿದನು. ಈ ಯುದ್ಧದಲ್ಲಿ ಸಿಂದೆಯ ಸೈನ್ಯವೆಲ್ಲವೂ ನಾಶವಾಗಿಹೋಯಿತು. ಬೇಗಮಳ ೫ ದಲ ಸೈನ್ಯದಲ್ಲಿ ೪ ದಲಗಳು ಯಾವ ಹಾನಿಯನ್ನೂ ಹೊಂದದೆ ತಿರುಗಿ ಬಂದವು. ಇದೊಂದು ಆಶ್ಚರ್ಯದ ಸಂಗತಿಯು. ಇದು ಬೇಗಮಳ ಸೈನಿಕರ ಮತ್ತು ಬೇಗಮಳ ಕಾರ್ಯಕುಶಲತೆಯ ಉತ್ತಮ ಉದಾಹರಣೆಯಾಗಿದೆ.

ಲಾರ್ಡ ಲೇಕನು ಉತ್ತರಹಿಂದುಸ್ತಾನದಲ್ಲಿಯು, ವೆಲ್ಲಸ್ಲಿಯು ದಕ್ಷಿಣ ಹಿಂದುಸ್ತಾನದಲ್ಲಿಯು ಮಹಾರಾಷ್ಟ್ರರನ್ನು ನಾಶಮಾಡಿದರು. ಈ ಕಾಲದಿಂದ ಭಾರತವು ಇಂಗ್ಲಿಷರ



ಅಧೀನವಾಯಿತೆಂದು ಹೇಳಬಹುದು. ಹಿಂದುಸ್ತಾನದಲ್ಲಿ ಇದೊಂದು ಚಿರಸ್ಮರಣೀಯವಾದ ದಿವಸವು!

ಈ ಯುದ್ಧಕ್ಕಿಂತ ಸ್ವಲ್ಪ ದಿವಸ ಪೂರ್ವದಲ್ಲಿ ಜೇಮ್ಸ ಸ್ಕಿನ್ನರನ ತಮ್ಮನಾದ ರಾಬರ್ಟ ಸ್ಕಿನ್ನರನು ಬೇಗಮಳ ದಂಡಿನಲ್ಲಿ ಪ್ರವೇಶಿಸಿದ್ದನು. ಬೇಗಮಳು ಒಪ್ಪಂದಕ್ಕಾಗಿ ರಾಬರ್ಟ ಸ್ಕಿನ್ನರನನ್ನು ಲೇಕನ ಬಳಿಗೆ ಕಳಿಸಿದಳು. ಯಾಕಂದರೆ ಹಿಂದುಸ್ತಾನದ ಬೇರೆ ಬೇರೆ ಅರಸರ ಶಕ್ತಿಯು ಪೂರ್ಣವಾಗಿ ನಾಶವಾದದ್ದನ್ನು ಬೇಗಮಳು ತಿಳಿದಳು. ಅದರಿಂದ ಆಗಿನಕಾಲದಲ್ಲಿ ಬ್ರಿಟಿಶರೇ ಹೆಚ್ಚು ಸಮರ್ಥರಾಗಿದ್ದರು. ಮುಂದೆ ಬ್ರಿಟಿಶರು ಈ ದೇಶದ ಸಮ್ರಾಜರಾಗುವ ವಿಚಾರವು ಅವಳ ಮನಸ್ಸಿನಲ್ಲಿ ಬಂತು. ಈ ಕಾಲದಲ್ಲಿ ಮಹಾರಾಷ್ಟ್ರರ ಅಭ್ಯುದಯದ ಆಶೆಯು ಉಳಿದಿರಲಿಲ್ಲ. ಅದರಿಂದ ಕುಶಲಳಾದ ಬೇಗಮಳು ಬ್ರಿಟಿಶರೊಡನೆ ಸಂಧಿಯನ್ನು ಮಾಡಿಕೊಳ್ಳುವದು ಅವಶ್ಯವೆಂದು ಭಾವಿಸಿದಳು.

ಲೇಕನು ಬೇಗಮಳ ವಿಜ್ಞಾಪನೆಯನ್ನು ಆನಂದದಿಂದ ಮನ್ನಿಸಿದನು. ಬೇಗಮಳು ಸನ್ಮಾನಪ್ರದರ್ಶನಾರ್ಥವಾಗಿ ಮೇಣೆಯನ್ನೇರಿ ಭರತಪುರದಿಂದ ೧೩ ಮೈಲು ಪಶ್ಚಿಮಕ್ಕಿರುವ ಲೇಕನ ಬಿಡಾರಕ್ಕೆ ಪ್ರಯಾಣಮಾಡಿದಳು (೧೮೦೩ ನವಂಬರ). ಬೇಗಮಳು ಬಂದದ್ದನ್ನು ತಿಳಿದು ಲೇಕನು ಬಿಡಾರದ ಹೊರಗೆ ಬಂದನು. ಮದಿರೆಯ ಪ್ರಭಾವದಿಂದಲೂ, ಆನಂದದ ಭರದಿಂದಲೂ ಆತನು ಅತಿಥಿಯು ಸ್ತ್ರೀಯಾಗಿರುವದನ್ನು ಮರೆತು ಆಲಿಂಗನಮಾಡಿ ಮುಖಚುಂಬನಮಾಡಿದನು. ಈ ನೋಟವನ್ನು ನೋಡಿ ಬೇಗಮಳ ಸೈನಿಕರು ಬೆರಗಾಗಿ ಹೋದರು. ತಾಯಿಯ ಈ ತರದ ಅಪಮಾನವನ್ನು ಮಕ್ಕಳಂತಿರುವ ಅವಳ ಸೈನಿಕರು ಸಹಿಸುವದೆಂತು? ಮುಯ್ಯಕ್ಕಾಗಿ ಅವರ ಕಣ್ಣುಗಳಿಂದ ಕಿಡಿಗಳು ಹಾರುತ್ತಿರುವಂತೆ ತೋರಿತು; ಒರೆಯೊಳಗಿನ ಕತ್ತಿಗಳು ಹೊರಗೆ ಬರತೊಡಗಿದವು. ಬೇಗಮಳು ಲೇಕನ ನಡತೆಯಿಂದ ತನ್ನ ಸೈನಿಕರು ರೇಗಿರುವ

ದನ್ನು ನೋಡಿದಳು. ಇದರಿಂದ ಮುಂದೆ ಭಯಂಕರ ಅನರ್ಥವೊದಗಬಹುದೆಂಬದನ್ನು ಆಲೋಚಿಸಿ ಈ ಪ್ರಸಂಗದಲ್ಲಿ ಅವಳು ಕಿಂಕರ್ತವ್ಯತಾಮೂಢಳಾಗದೆ ಸ್ಫೂರ್ತಿಯಿಂದ ತನ್ನ ಸೈನಿಕರಿಗೆ ಈ ಮೇರೆಗೆ ಹೇಳಿದಳು—"ಬಂಧುಗಳೇ ನೋಡಿರಿ, ಕ್ರಿಸ್ತಿಧರ್ಮಯಾಜಕನು ಭ್ರಾಂತಳಾದ ತನ್ನ ಮಗಳನ್ನು ಹೇಗೆ ಸ್ವೀಕರಿಸುತ್ತಿರುವನು." ಅತಿ ಚತುರಮನುಷ್ಯನಿಗೂ ಈ ಸಮಯದಲ್ಲಿ ಇಂತಹ ಉತ್ತಮ ಕಲ್ಪನೆಯು ಬರಲಿಕ್ಕಿಲ್ಲೆಂದು ಹೇಳಬಹುದಾಗಿದೆ. ಬೇಗಮಳ ಬುದ್ಧಿಪ್ರಭಾವದಿಂದ ಅವಮಾನವು ಆಶೀರ್ವಾದವಾಗಿ ಪರಿಣಮಿಸಿತು. ಸೈನಿಕರ ಸಿಟ್ಟು ಶಾಂತವಾಯಿತು. ಸಾಹೇಬನ ಮಾನರಕ್ಷಣೆಯಾಯಿತು.

ಬೇಗಮಳ ಒಪ್ಪಂದದ ವಿಷಯವಾಗಿ ಲಾರ್ಡ ವೆಲ್ಲಸ್ಲಿ ಹಾಗೂ ಲೇಕ ಇವರ ನಡುವೆ ಆದ ಪತ್ರವ್ಯವಹಾರಗಳಲ್ಲೊಂದನ್ನು ಕೆಳಗೆ ಉಲ್ಲೇಖಿಸಿದ್ದೇವೆ.

The Marquess Wellesly to lieut-General Lake (official and secrect) Fort William July 28, 1803.

Your excellency will be apprized by the 26th paragraph of my instruction to Mr. Mercer, of the arrangement which I propose to conclude with respect to the jaggeer of Zeeboouissabegam, commonly called Lumroo's Begam. The disposition of the Begam to place herself under the protection of the British government is distinctly declared in two letters which I have lately received from her.

I have started in my instuctions to Mr. Mercer that the local situation of the Begam's Jaggeer renders it desirable that in any engagement con-



cluded with her on the part of the British government such conditions should be inserted as may facilitate the introduction of the British regulations into the jaggeer, and I request that your excellency's negociations with the Begam may be directed to the accomplishment of this object. It may not, perhaps, be expedient directly to propose to her this arrangement, until the British power shall have been established in adjacent territories of the Dooab. But in that case the engagements to be concluded with the Begam should be such as to form a basis for the future accomplishment of the proposed arrangement. Your excellency, however, will be guided in the determination of this point, by the information which you may acquire of the disposition of the Begam to acquiesce in the extent of my views with relation to her Jaggeer. it is my wish to commute her gaggeer for a suitable stipend, the extent of which must be regulated by the profits which she actually derives from her territorial possessions, and by the the importance of the services which the British government may derive from the exertion of her aid and influence.

As an immidiate proof of her disposition to connect her interests with those of British government, and as the condition of her being admitted to the benifits of its protection, she should be required to recall her battalions now serving in

the army of Dowlat Rao Scindiah, and to employ whatever influence she may possess over Zamindars and chieftains in the Dooab to induce them to place themselves under the authority of the British government, and to employ their resources in assisting the operations of the British armies.

With a view, however, to expedite the proposed arrangement with the Begam, I have deemed it expedient to transmit a duplicate of my letter to her Resident at Lucknow, directing him to deliver it for transmission to the Begam's vakeel stationed at the city, and if he should have reason to suppose that Vakeel to be in the confidence of the Begam, to communicate to him generally the disposition of the British government to afford its protection to the Begam, to require him to suggest to her the immediate despatch of orders of recall to her battalions serving with Dowlut Rao Scindiah, and to propose his proceeding to the camp of your excellency for the purpose of eventually becoming the channel of negotiation between your excellency and the Begam. (Wellesley despatches, iii, 242-4).

ಬೇಗಮಳೊಡನೆ ಬ್ರಿಟಿಶರ ಒಪ್ಪಂದವಾಯಿತು (೧೮೦೪). ಬೇಗಮಳು ಜೀವಿಸಿರುವ ವರೆಗೆ ಅವಳ ಅಧಿಕಾರವು ಸ್ಥಿರವಾಗಿ ಉಳಿಯುವದೆಂದೂ, ಮರಣದ ತರುವಾಯ ಜಹಾಗೀರು ಇಂಗ್ಲಿಷರ ರಾಜ್ಯಕ್ಕೆ ಸೇರಿಸಲ್ಪಡುವದೆಂದೂ ಈ ಒಪ್ಪಂದದಿಂದ ಗೊತ್ತಾಯಿತು. ಇದರಿಂದ ಬೇಗಮಳು ಆಮರಣ ಇಂಗ್ಲೀಷರ ಪಕ್ಷವನ್ನು



ಅವಲಂಬಿಸಿರಬೇಕೆಂದೂ ಬೇಗಮಳು ತನ್ನ ಸೈನ್ಯದಲ್ಲಿಯ ೫ ದಲಗಳನ್ನು ಬ್ರಿಟಿಶರ ಸಹಾಯಾರ್ಥವಾಗಿ, ಒಂದು ದಲವನ್ನು ತನಗೋಸ್ಕರವಾಗಿ ಇಡಬೇಕೆಂದೂ ಗೊತ್ತಾಯಿತು.

ಸನ್ ೧೮೨೫ನೆಯ ಡಿಶಂಬರದಲ್ಲಿ ಭರತಪುರದ ರಾಜನೊಡನೆ ಬ್ರಿಟಿಶರ ಯುದ್ಧವಾಯಿತು. ಈ ಯುದ್ಧದಲ್ಲಿ ಲಾರ್ಡ ಕಂಬರಮಿಯರನು ಇಂಗ್ಲೀಷರ ಸೇನಾಪತಿಯಾಗಿದ್ದನು. ಬೇಗಮಳು ಭರತಪುರದ ಯುದ್ಧದಲ್ಲಿ ಬ್ರಿಟಿಶರಿಗೆ ಚನ್ನಾಗಿ ಸಹಾಯ ಮಾಡಿದಳು. ಬೇಗಮಳ ಈ ಸಮಯೋಚಿತ ಸಹಾಯಕ್ಕಾಗಿ, ದರಬಾರದಲ್ಲಿ ಪ್ರಸಿದ್ಧ ರೀತಿಯಿಂದ ಅವಳ ಧನ್ಯವಾದವಾಯಿತು.

ಬ್ರಿಟಿಶರೊಡನೆ ಒಪ್ಪಂದವಾದ ಬಳಿಕ ಬೇಗಮಳು ಲೇಕನ ದರ್ಶನಕ್ಕಾಗಿ ದಿಲ್ಲಿಯಲ್ಲಿರುವ ಅವನ ನಿವಾಸಸ್ಥಳಕ್ಕೆ ಹೋಗುತ್ತಿದ್ದಳು. ಲೇಕನು ವಿಲಾಯತಿಗೆ ಹೋಗುವಾಗ, ಅವನ ಸನ್ಮಾನಾರ್ಥವಾಗಿ ಬೇಗಮಳು ದಿಲ್ಲಿಯಲ್ಲಿ ಒಂದು ದೊಡ್ಡ ಭೋಜನಸಮಾರಂಭವನ್ನು ಮಾಡಿಸಿದಳು. (೧೮೦೬).

ಪ್ರಬಲರಾದ ಬ್ರಿಟಿಶರ ಸ್ನೇಹದಿಂದ ಬೇಗಮಳ ರಾಜ್ಯದಲ್ಲಿ ಶಾಂತತೆಯುಂಟಾಯಿತು. ಅದರಿಂದ ತನ್ನ ಆಯುಷ್ಯದ ಕಡೆಯ ೩೦ ವರ್ಷಗಳಲ್ಲಿ ಸೈನ್ಯವನ್ನು ಹೆಚ್ಚಾಗಿ ಬಳೆಯಿಸುವ ಪ್ರಸಂಗ ಬರಲಿಲ್ಲ. ಅದರಿಂದ ಬೇಗಮಳ ಆಯವೃದ್ಧಿಯಾಯಿತು; ಮತ್ತು ಸೈನ್ಯದ ವೆಚ್ಚವು ಕಡಿಮೆಯಾಯಿತು. ಹೀಗೆ ಆಯವೃದ್ಧಿಯೂ ವ್ಯಯಲಾಘವವೂ ಉಂಟಾದ್ದರಿಂದ ಬೇಗಮಳಿಗೆ ಹೆಚ್ಚು ಹಣ ಸಂಗ್ರಹಿಸಲಿಕ್ಕೆ ಅನುವಾಯಿತು.

---

## ೯ನೆಯ ಅಧ್ಯಾಯ.

ಬೇಗಮಳ ಅವಸಾನ ಕಾಲವು ಸಮೀಪಿಸಿತು. ಈ ವರೆಗೂ ಅವಳು ತನ್ನ ಸಂಪತ್ತನ್ನು ದಾನಧರ್ಮಕ್ಕಾಗಿ ಉಪಯೋಗ ಮಾಡಿಕೊಂಡಿರಲಿಲ್ಲ. ಈಗ ಬೇಗಮಳು ತನ್ನ ಕೀರ್ತಿಯನ್ನು ಸ್ಥಿರವಾಗಿ

ಮಾಡುವದಕ್ಕಾಗಿ—ಹಣವನ್ನು ಸಾರ್ಥಕ ಮಾಡುವದಕ್ಕಾಗಿ ಮನಸ್ಸು ಮಾಡಿದಳು. ಯಾಕಂದರೆ ಪ್ರಸಿದ್ಧಳಾಗಿ ಬಾಳಿದ ತನ್ನ ನಾಮವು ತನ್ನೊಡನೆ ಇಲ್ಲದಂತಾಗುವದು ಸರಿಯಲ್ಲವೆಂದು ಅವಳು ಆಲೋಚಿಸಿದಳು. ಹಾಗೆ ತನ್ನ ಹೆಸರು ಸ್ಥಿರವಾಗಿ ಉಳಿಯಬೇಕಾದಲ್ಲಿ—ಕೀರ್ತಿಶಾಲಿನಿಯಾಗಬೇಕಾದಲ್ಲಿ, ಅನೇಕ ಮಹತ್ವದ ಕಾರ್ಯಗಳನ್ನು—ಲೋಕಹಿತದ ಕೆಲಸಗಳನ್ನು ಮಾಡುವದು ಅವಶ್ಯವಾಗಿತ್ತು. ಈವರೆಗೆ ರಾಜ್ಯದಲ್ಲಿ ಶಾಂತತೆಯು ಇರದ್ದರಿಂದ ಈ ವಿಷಯದ ಕಡೆಗೆ ಅವಳ ಲಕ್ಷವು ಹೋಗಿರಲಿಲ್ಲ. ಈಗ ಬ್ರಿಟಿಶರ ಸ್ನೇಹದಿಂದ ರಾಜ್ಯದಲ್ಲಿ ಶಾಂತತೆಯು ಪೂರ್ಣವಾಗಿ ನೆಲೆಗೊಂಡದ್ದರಿಂದ ಪರೋಪಕಾರದಲ್ಲಿ ಹೆಚ್ಚು ಮನಸ್ಸು ಹಾಕುವದಕ್ಕೆ ಬೇಗಮಳಿಗೆ ಅನುಕೂಲವಾಯಿತು.

ಬೇಗಮಳಿಗೆ ಧನದ ಕೊರತೆಯಿರಲಿಲ್ಲ. ಅದರಿಂದ ಅವಳು ಮನಸ್ಸಿಗೆ ಬಂದೊಡನೆ ಅನೇಕ ಸತ್ಕೃತ್ಯಗಳನ್ನು ಮಾಡಲಿಕ್ಕೆ ಸಮರ್ಥಳಾಗಿದ್ದಳು. ಬೇಗಮಳ ಪ್ರಯತ್ನದಿಂದಲೂ, ಧನಸಹಾಯದಿಂದಲೂ ಕ್ಯಾಥೊಲಿಕ್ ಜನರ ವಿಸ್ತಾರವಾಗತೊಡಗಿತು; ಅವರ ಪೋಷಣವೂ ಆಗಹತ್ತಿತು. ಬೇಗಮಳ ಸಹಾಯದಿಂದ ಆಗಿನ ಕಾಲದ ಧರ್ಮಯಾಜಕ (ಪಾದ್ರಿ) ನಾದ ಜುಲಿಯಸ್‌ಸಿಝುರನು ಉಚ್ಚಪದವಿಯನ್ನು ಹೊಂದಿದನು.

ಬೇಗಮಳು ಸರ್ಧಾನಾದಲ್ಲಿ ಒಂದು ಪ್ರಾರ್ಥನಾಲಯವನ್ನು ಕಟ್ಟಿಸಬೇಕೆಂದು ಆಲೋಚಿಸಿದಳು. ಈಗಲೂ ಸರ್ಧಾನಾದಲ್ಲಿ ಕ್ಯಾಥೆಡ್ರಲ್ ಚರ್ಚ್ ಆಫ್ ಸೆಂಟ್ ಮೇರಿ ( Cœthedral Church of St, Mary ) ಎಂಬ ಹೆಸರಿನ ಪ್ರಾರ್ಥನಾಮಂದಿರವು ಅದೆ. ಇದು ಬೇಗಮಳ ಅಸಾಧಾರಣ ಕೀರ್ತಿಯ ದೊಡ್ಡ ಸಾಕ್ಷಿಯಾಗಿದೆ. ಮೇಜರ ರೆಘೊಲಿನಿ ಎಂಬ ಇಟಾಲಿಯನ್ ಕಾಮದಾರನ ಪರಿಶ್ರಮದಿಂದ ೧೮೨೨ರಲ್ಲಿ ಈ ಮಂದಿರವು ಪೂರ್ಣ ಮಾಡಲ್ಪಟ್ಟಿತು. ಇದಕ್ಕಾಗಿ ಬೇಗಮಳು ೪ ಲಕ್ಷರೂಪಾಯಿಗಳನ್ನು ವೆಚ್ಚಮಾಡಿದಳೆಂದು ಜನರು ಹೇಳುತ್ತಿರುವರು.



ಪ್ರಾರ್ಥನಾಲಯದ ತರುವಾಯ ಬೇಗಮಳು ತನಗೋಸ್ಕರ ಸರ್ಧಾನಾದಲ್ಲಿ ಒಂದು ಅರಮನೆಯನ್ನು ಕಟ್ಟಿಸಿದಳು. ದಿಲ್ಲಿಯಲ್ಲಿಯೂ ಮಿರತದಲ್ಲಿಯೂ ಒಂದೊಂದು ಅರಮನೆಯನ್ನು ಕಟ್ಟಿಸಿದಳು. ಮಿರತದಲ್ಲಿರುವ ಸುಂದರ ಪ್ರಾರ್ಥನಾಮಂದಿರವು ಬೇಗಮಳಿಂದ ಕಟ್ಟಿಸಲ್ಪಟ್ಟದ್ದು. ದೇಶೀಯ ಪ್ರೊಟೆಸ್ಟಂಟರಿಗಾಗಿ ಬೇಗಮಳು ೧೦ ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ಮಿರತದಲ್ಲಿ ಚರ್ಚ್‌ಮಿಶನರಿ ( Missinory ) ಯನ್ನು ನಿರ್ಮಾಣಮಾಡಿದಳು. ಭರತಪುರದ ಹತ್ತರ ಅವಳದೊಂದು ಸುಂದರ ಉದ್ಯಾನವಿತ್ತು. ಮರಣದ ೭೮ ವರ್ಷಗಳ ಪೂರ್ವದಲ್ಲಿ ಸರ್ಧಾನಾದಿಂದ ೨-೩ ಹರದಾರಿಯ ಮೇಲಿರುವ ಕಿರವಯಾ ಎಂಬ ಸ್ಥಳದಲ್ಲಿ ಒಂದು ಸುಂದರ ಅರಮನೆಯನ್ನು ಕಟ್ಟಿಸಿದ್ದಳು. ಬೇಗಮಳು ಜೀವನದ ಕಡೆಯ ಭಾಗದಲ್ಲಿ ಬಹುಶಃ ಅಲ್ಲಿಯೇ ಇರುತ್ತಿದ್ದಳು. ಭರತಪುರದ ದುರ್ಗದಲ್ಲಿಯೂ ಅವಳದೊಂದು ಮನೋಹರವಾದ ಅಂತಸ್ತಿನ ಮನೆಯಿತ್ತು.

ಬೇಗಮಳ ಜೀವನದ ಸಂಧ್ಯಾಕಾಲವು ಸಮಿೂಸಿತು. ಅವಳು ಕೆಲವು ದಿವಸ ಜ್ವರದಿಂದ ಹಾಸಿಗೆ ಹಿಡಿದಳು. ಸನ್ ೧೮೩೬ ನೆಯ ಜನೆವರಿ ೨೭ನೇ ತಾರೀಖಿನ ದಿವಸ ಪ್ರಾತಃಕಾಲದಲ್ಲಿ ದೇವರ ನಾಮಸ್ಮರಣಮಾಡುತ್ತ ಪ್ರಾಣಬಿಟ್ಟಳು. ಅವಳ ಶವವನ್ನು ಅವಳೇ ಕಟ್ಟಿಸಿದ ಪ್ರಾರ್ಥನಾಮಂದಿರದಲ್ಲಿ ಸಮಾಧಿ ಮಾಡಿದರು.

ಬೇಗಮಳ ಮೃತ್ಯುವಿನ ವಿಷಯವಾಗಿ Merat observer ಎಂಬ ಹೆಸರಿನ ಆ ಕಾಲದ ಸಾಪ್ತಾಹಿಕ ಪತ್ರದಲ್ಲಿ ಪ್ರಕಟವಾದ ಲೇಖವನ್ನು ನಾವು ಕೆಳಗೆ ಕೊಟ್ಟದ್ದೇವೆ. ಇದು ಅವಳ ಪ್ರಜಾರಂಜನದ ದೊಡ್ಡ ಪ್ರಮಾಣವಾಗಿದೆ.

1 In our last weak's paper, it was our painful task to announce the death of Her Highness the Begam Sombre, on the 27th at her residence at Sirdhana.

No time was lost in despatching an express to the magistrate at Merat and agent to the Governor-General at Delhi. The former of these officers reached Sirdhana by noon, and immediately proceeded to the palace, where he was received by Mr. Dyce Sombre, Dr. Drever, and other members of the Family. Necessary arrangement were immediately made for the funeral and other ceremonies; and it being announced that col. Dyce had repaired to Sirdhana, Mr. Hamilton had an interview with that officer, who shortly after returned to Merat.

The crowds assembled outside the palace-walls, and on the roads, were immense and one scene of lamentation and sorrow was apparent; The grief was deep and silent; The clustered groups talked of nothing but the heavy loss they had sustained, and the intensity of their sorrow was pictured in their countenances, nor did they separate during the night. According to the custom of the country, the whole of the dependants observed a strict fast; There was no preparing of meals, no retiring to rest; All were watchful, and every house was a scene of mourning.

At nine, the whole of the arrangements being completed, the body was carried out borne by the native christians of the artillery battalion, under a canopy, supported by the principal officers of her late highness's troops, and the pall by Messrs. Dyce Sombre, Solaroli, Drever and Troup, prec-



eded by the whole of her highness's body-guards, followed by the Bishop, chanting portions of the service, aided by the choristers of the cathedral. After them, the magistrate, Mr. Hamilton, and then the chief officers of the house-hold, the whole brought up by a battalian of her late highness's infantry, and a troop of horse. The procession preceded by 4 elephants from which alms and cakes were distributed amongst the crowd, passed through a street formed of the troops at Sirdhana, to the door of the cathedral, the entrance to which was kept by guard of honour from the 30th N. I, under the command of capt. Campbell. The procession passed into the body of the cathedral in the centre of which the coffin was deposited on tressels. High mass was then performed in excellent style, and with great feeling, by the Bishop. The body was lowered into the vault. Thus terminated the career of one who, for upwards of half a century, has held a conspicuous place in the political proceedings of India. In the Begam Sombre the British authorities had an ardent and sincereally, ever ready, in the spirit of true chivalry, to aid and assist, to the utmost of her means, their fortunes and interests.

As soon as the family had retired into the palace, the magistrate of Merat proceeded with the officers of his establishment, to proclaim the annexation of the territories of her late highness to the British Government; Proclaimation was

made throughout the town and vicinity of Sirdhana, by the Government authority, and similar ones at the principal towns, in different parts of the jaghir, according to prevous arrangement; so that this valuable territory became almost instantaneously incorporated with zilla Merat, to which it remains annexed; The introduction of her police and fiscal arrangements having been especialy intrusted to Mr. Hamilton, by orders from the Government of India received so far back as August 1834.

The whole of the landed possessions of her late highness revert to the British and the personal property amounting to nearly half a crore, devolves by will upon Mr. Dyce Sombre, with the exception of small legacies and charitable bequests."

2 "She is as a public character, notoriously generous, when called upon to loosen her purse-strings, distributing freely to the indigent, and in no instance refusing her aid in the construction or benefit of any public institution."

"ಬೇಗಮಳು ಕಳೆದ ೨೭ನೆಯ ತಾರೀಖಿನ ದಿವಸ ತನ್ನ ಸರ್ಧಾನಾದ ಅರಮನೆಯಲ್ಲಿ ದೇಹತ್ಯಾಗಮಾಡಿದ ಸಂಗತಿಯನ್ನು ನಾವು ಹೋದವಾರ ಬಹಳ ದುಃಖದಿಂದ ಪ್ರಕಾಶಪಡಿಸಿದ್ದೇವೆ."

ಮಿರತದ ಮಾಜಿಸ್ಟ್ರೇಟನಿಗೂ, ದಿಲ್ಲಿಯ ಗವ್ಹರ್ನರ ಜನರಲ್ಲನ ಎಜಂಟನಿಗೂ ಬೇಗಮಳ ಮೃತ್ಯುವಿನ ಸುದ್ದಿಯು ತಿಳಿಸಲ್ಪಟ್ಟಿತು. ಅದೇ ದಿವಸ ಮಧ್ಯಾಹ್ನಕ್ಕೆ ಮಾಜಿಸ್ಟ್ರೇಟನು ಸರ್ಧಾನಾಕ್ಕೆ ಬಂದು,



ಬೇಗಮಳ ಅಪ್ತೇಷ್ಟರಿಗೆ ಭೆಟ್ಟಿಯಾದನು. ಎಲ್ಲರೂ ತೀವ್ರವೇ ಶವದ ವ್ಯವಸ್ಥೆಮಾಡುವ ಉದ್ಯೋಗಕ್ಕೆ ತೊಡಗಿದರು.

ಅರಮನೆಯ ಹೊರಭಾಗದಲ್ಲಿಯೂ, ಮಾರ್ಗದಲ್ಲಿಯೂ ಅಸಂಖ್ಯಜನರು ಕೂಡಿದ್ದರು. ನಾಲ್ಕೂಕಡೆಯಲ್ಲಿ ಅಂತಃಶೋಕವು ಕಾಣುತ್ತಿತ್ತು. ಬಂದ ಎಲ್ಲ ಜನರು ಬೇಗಮಳ ಉತ್ತಮ ಗುಣಗಳನ್ನು ನೆನೆಸಿ ಚಿಂತೆಗೊಳಗಾಗಿದ್ದರು. ಪ್ರತಿಯೊಬ್ಬರ ಮೋರೆಯ ಮೇಲೂ ಅಸಮಾಧಾನವು ಒಡೆದು ಕಾಣುತ್ತಿತ್ತು. ಯಾರ ಬಾಯಿಂದಲೂ ಮಾತಿಲ್ಲ. ಪ್ರತಿಯೊಬ್ಬನಿಗೆ ತಮ್ಮದೊಂದು ಬಹುಪ್ರಿಯ ವಸ್ತುವನ್ನು ಕಳೆದುಕೊಂಡಂತೆ ಆಗಿತ್ತು. ಬೆಳಗಾಗುವವರೆಗೆ ಅವರು ಮನೆಗೆ ಹೋಗಲಿಲ್ಲ. ರೀತಿಯಂತೆ ಬೇಗಮಳ ಶವದ ಹಿಂದೆ ಹೋದವರು ಅಂದು ಉಪವಾಸವಿದ್ದರು. ಯಾರ ಮನೆಯಲ್ಲಿಯೂ ಅಂದು ಅಡಿಗೆಯಿಲ್ಲ; ಸೊಗಸು ಇಲ್ಲ. ಎಲ್ಲರೂ ದುಃಖಿತರು, ಮನೆಮನೆಗೂ ಶೋಕದ ನೋಟವು ಕಾಣುತ್ತಿತ್ತು.

ಉತ್ತರಕ್ರಿಯೆಯ ಎಲ್ಲ ಸಿದ್ಧತೆಯಾಯಿತು. ಬೇಗಮಳ ದೇಶೀಯ ಕ್ರಿಸ್ತೀ ಸೈನಿಕರು ಶವವನ್ನು ಹೊತ್ತುಕೊಂಡು ನಡೆದರು. ಮುಂದುಗಡೆಯಲ್ಲಿ ಬೇಗಮಳ ಶರೀರರಕ್ಷಕರ ಗುಂಪು ನಡೆದಿತ್ತು. ಅದರ ಹಿಂದೆ ಬಿಶಪ್ಪನು ಮಂತ್ರೋಚ್ಚಾರ ಮಾಡುತ್ತ ಸಾಗಿದ್ದನು. ಅವನ ಹಿಂದೆ ಚರ್ಚಿನ ಗಾಯಕರು ಶೋಕಸಂಗೀತದಿಂದ ದಿಙ್ಮಂಡಲವನ್ನು ಪ್ರತಿಧ್ವನಿತಮಾಡುತ್ತಿದ್ದರು. ಅವರ ಹಿಂದೆ ಬೇಗಮಳ ಕಾಮದಾರ ಜನರು. ಎಲ್ಲಕ್ಕೂ ಹಿಂದೆ ಒಂದು ಕಾಲಾಳದಳವೂ ಒಂದು ಅಶ್ವಾರೋಹಿಗಳ ದಳವೂ ಇದ್ದವು. ಈ ಶೋಕಯಾತ್ರೆಯ ಮುಂಭಾಗದಲ್ಲಿ ನಾಲ್ಕು ಆನೆಗಳು ಇದ್ದವು. ಅವುಗಳ ಮೇಲೆ ಧರ್ಮಾದಾಯಕ್ಕಾಗಿ ಬೇಕಾಗುವ ರೂಪಾಯಿ, ದುಡ್ಡು ಮೊದಲಾದವುಗಳನ್ನು ಹೇರಿದ್ದರು. ಸ್ಮಶಾನಯಾತ್ರೆಯ ಮಾರ್ಗದ ಎರಡೂ ಕಡೆಯಲ್ಲಿ ಸಾಲಾಗಿ ಸೈನಿಕರು ನಿಂತಿದ್ದರು. ಬಹು ಸಮಾರಂಭದಿಂದ ಶವವು ಸ್ಮಶಾನಕ್ಕೆ ತರಲ್ಪಟ್ಟಿತು. ತರುವಾಯ

ಧರ್ಮದಲ್ಲಿ ಹೇಳಿದಂತೆ ಮಾಡತಕ್ಕ ಕೆಲಸಗಳೆಲ್ಲವೂ ಮುಗಿದವು. ಶವದ ಸಮಾಧಿಯಾಯಿತು. ಸುಮಾರು ಅರ್ಧಶತಮಾನಕ್ಕಿಂತಲೂ ಹೆಚ್ಚು ಕಾಲ ಭಾರತದ ರಾಷ್ಟ್ರೀಯ ರಾಜತಂತ್ರದಲ್ಲಿ ಉಚ್ಚಸ್ಥಾನವನ್ನು ಪಡೆದಿದ್ದ ಬೇಗಮಳ ಜೀವನನಾಟ್ಯದ ಅವಸಾನವಾಯಿತು. ಬೇಗಮಳು ಇಂಗ್ಲಿಶರ ನಂಬಿಗೆಯ ಸ್ನೇಹಿತಳಾಗಿದ್ದಳು. ಬ್ರಿಟಿಶರ ಉನ್ನತಿಗಾಗಿ—ಅವರಿಗೆ ಸಾಧ್ಯವಾದ ಮಟ್ಟಿಗೆ ಸಹಾಯ ಮಾಡುವದಕ್ಕಾಗಿ ಅವಳು ಯಾವಾಗಲೂ ಸಿದ್ಧಳಾಗಿದ್ದಳು.

ಅಂತ್ಯೇಷ್ಟಿಕ್ರಿಯೆಯು ಮುಗಿಯಿತು. ಎಲ್ಲರೂ ಅರಮನೆಗೆ ತಿರುಗಿ ಬಂದರು. ಮ್ಯಾಜಿಸ್ಟ್ರೇಟನು ಬೇಗಮಳ ರಾಜ್ಯವನ್ನು ಇಂಗ್ಲೀಷರ ರಾಜ್ಯಕ್ಕೆ ಸೇರಿಸಿಕೊಂಡದ್ದನ್ನು ಪ್ರಸಿದ್ಧಮಾಡಿದನು. ಎಲ್ಲ ಕಡೆಯಲ್ಲಿಯೂ ಆಜ್ಞಾಪತ್ರಿಕೆಗಳು ಕಳಿಸಲ್ಪಟ್ಟವು. ಈ ರೀತಿಯಾಗಿ ಬೇಗಮಳ ದೊಡ್ಡ ಉತ್ಪನ್ನದ ಜಹಾಗೀರು ಮಿರತ ಜಿಲ್ಲೆಗೆ ಸೇರಿಹೋಯಿತು. ಬೇಗಮಳ ಸಂಸ್ಥಾನದ ಮುಲ್ಕಿ ಮತ್ತು ದಿವಾಣಿಯ ಯಾವತ್ತು ಕೆಲಸಗಳು ಮಾಜಿಸ್ಟ್ರೇಟ ಹ್ಯಾಮಿಲ್ಟನ್ನನಿಗೆ ಒಪ್ಪಿಸಲ್ಪಟ್ಟವು.

ಬೇಗಮಳ ಯಾವತ್ತು ಜಹಾಗೀರು ಬ್ರಿಟಿಶ ಸರಕಾರಕ್ಕೆ ಸೇರಿಹೋಯಿತು. ಬೇಗಮಳ ಮೃತ್ಯುಪತ್ರದಂತೆ ಅರ್ಧಕೋಟಿ ನಗದು ಹಣವು ಅವಳ ಉತ್ತರಾಧಿಕಾರಿಯಾದ ಡಾಯಿಸ್ ಸೊಂಬರನಿಗೆ ಸಿಕ್ಕಿತು. ಬೇರೆ ವಿಷಯಗಳಿಗಾಗಿ ಬೇಗಮಳು ಅನೇಕ ದಾನಗಳನ್ನು ತನ್ನ ಮೃತ್ಯುಪತ್ರದಲ್ಲಿ ಕಾಣಿಸಿದ್ದಳು.

ಹೆಂಗಸಾಗಿ ರಾಜನೈತಿಕ ಗಗನದಲ್ಲಿ ಉಜ್ವಲ ನಕ್ಷತ್ರದಂತೆ ಹೊಳೆದು ಮುಸಲ್ಮಾನರು, ಮಹಾರಾಷ್ಟ್ರರು ಮತ್ತು ಇಂಗ್ಲಿಷರು ಇವರೊಡನೆ ರಾಜನೈತಿಕ ವಿಷಯದಲ್ಲಿ ಸ್ವತಂತ್ರ ರೀತಿಯಿಂದ ರಾಜ್ಯಕಾರಭಾರ ಮಾಡಿದ ಬೇಗಮಳು ಸಾಮಾನ್ಯಳಾಗಿರಲಿಲ್ಲ. ವಿಜಾತೀಯ ಸೈನಿಕರ ಒಳಸಂಚುಗಳಿಂದ ಪಾರಾಗಿ, ಹಿಂದುಸ್ತಾನದ ಕೆಟ್ಟಕಾಲದಲ್ಲಿಯೂ ಶಾಂತಿಯನು ಸ್ಥಾಪಿಸಿದ ಅವಳ ಚಾತುರ್ಯವು ವರ್ಣನೀಯವಾಗಿದೆ. ಬೇಗ್ನ



ಮಳು ಹಿಡಿದದ್ದನ್ನು ಬಿಡುವವಳಲ್ಲ; ಅವಳಿಗೆ ತನ್ನ ಶಕ್ತಿಯ ವಿಷಯವಾಗಿ ನಂಬಿಗೆಯಿತ್ತು. ಅವಳಿಗೆ ನ್ಯಾಯ, ಧರ್ಮ, ಪ್ರಜಾರಂಜನಗಳಲ್ಲಿ ಅನುರಾಗವಿತ್ತು. ಅದರಂತೆ ಅವಳು ಪ್ರಜೆಗಳ ಉನ್ನತಿಗೆ ಅವಶ್ಯವಾದ ಸಂಗತಿಗಳನ್ನರಿತುಕೊಂಡು, ಯಾವಾಗಲೂ ಪ್ರಜಾಹಿತದ ಕಾರ್ಯಗಳನ್ನೇ ಮಾಡಿದಳು. ಅವಳು ರಾಜಪ್ರಜೆಗಳ ಸ್ವಾರ್ಥವು ಅಭಿನ್ನವೆಂದೂ, ಪ್ರಜೆಗಳ ಉನ್ನತಿಯೇ ರಾಜನ ಉನ್ನತಿಯೆಂದೂ, ಪ್ರಜೆಗಳ ಸೌಖ್ಯವೇ ರಾಜನ ಸೌಖ್ಯವೆಂದೂ ಪೂರ್ಣವಾಗಿ ಅರಿತಿದ್ದಳು. ಪ್ರಜೆಗಳ ಸೌಖ್ಯಕ್ಕಾಗಿಯೇ ಅವಳು ಬ್ರಿಟಿಶರೊಡನೆ ಒಪ್ಪಂದಮಾಡಿಕೊಂಡಳು. ಮತ್ತು ಅದರಿಂದುಂಟಾದ ಶಾಂತತೆಯನ್ನು ಸ್ಥಿರಮಾಡುವದಕ್ಕೆ ಅದನ್ನು ಜೀವಮಾನವಿರುವವರೆಗೆ ನಡೆಸಿದಳು.

ಈ ಭಾರತೀಯ ರಮಣಿಯ ಸುಖದುಃಖಮಯ ಜೀವನನಾಟ್ಯದ ಸಂಗತಿಗಳು ಅದ್ಭುತವೂ, ವಿಸ್ಮಯಕಾರಕವೂ ಆಗಿರುವದರಲ್ಲಿ ಸಂದೇಹವಿಲ್ಲ. ತಕ್ಕ ಕ್ಷೇತ್ರದಲ್ಲಿ—ಇದಕ್ಕೂ ಅನುಕೂಲವಾದ ಪರಿಸ್ಥಿತಿಯಲ್ಲಿ ಅವಳು ಇದ್ದದ್ದಾದರೆ ಪೃಥ್ವಿಯ ಇತಿಹಾಸದಲ್ಲಿ ಈ ರಮಣಿಯು ಉಚ್ಚಸ್ಥಾನವನ್ನು ವಹಿಸುತ್ತಿದ್ದಳೆಂದು ಹೇಳಬಹುದಾಗಿದೆ. ಅದಕ್ಕಾಗಿಯೇ ಮೇಜರ ಅರ್ಚರನು ಈ ಮೇರೆಗೆ ಬರೆದಿದ್ದಾನೆ—" She has through a long life, maintained her station and security among a hast of contending dowers, and may bear the honour of a similarity of character with our Elizabeth. "

——

## ೧೦ನೆಯ ಅಧ್ಯಾಯ.

ಬೇಗಮಳು ಬಹಳ ಧನಸಂಚಯ ಮಾಡಿ ಹೋಗಿದ್ದಳು. ಇದರ ಬಹಳ ಭಾಗವನ್ನು—೫೦ ಲಕ್ಷರೂಪಾಯಿಗಳನ್ನು ಅವಳ ಸಪತ್ನೀ

ಪುತ್ರನ ಮೊಮ್ಮಗನಾದ ಡಾಯಿಸ್ ಸೊಂಬರನು ಹೊಂದಿದನೆಂದು ಮೇಲೆ ಹೇಳಿದ್ದೇವೆ. ಸಾಯುವ ಮೊದಲು ಬೇಗಮಳು ದೇವರ ಸೇವೆಗಾಗಿಯೂ, ಮಾನವರ ಉಪಯೋಗಕ್ಕಾಗಿಯೂ ಬಹಳ ಧನವನ್ನು ವೆಚ್ಚಮಾಡಿದ್ದಳು. ಬೇಕನ್ನನು ಬೇಗಮಳ ದಾನದ ವಿಷಯವಾಗಿ ಚೆನ್ನಾಗಿ ವರ್ಣನ ಮಾಡಿದ್ದಾನೆ. ಬೇಗಮಳದಾನಗಳನ್ನು ನಾವು ಕೆಳಗೆ ಹೇಳುವೆವು:

೧. ಸಾರ್ಧಾನಾದಲ್ಲಿದ್ದ ಪ್ರಾರ್ಥನಾಮಂದಿರದ ಸಂಸ್ಕಾರ (ರಿಪೇರಿ) ಕ್ಕೂ, ಬೇರೆ ಅವಶ್ಯಕವಾದ ವೆಚ್ಚಕ್ಕೂ...೧ ಲಕ್ಷ ರೂಪಾಯಿ.

೨. ಹಿಂದುಸ್ತಾನದಲ್ಲಿ ರೋಮನ್ ಕ್ಯಾಥೋಲಿಕ್ ಧರ್ಮವನ್ನು ಪ್ರಚಾರ ಮಾಡುವವರ ವಿದ್ಯಾಭ್ಯಾಸಕ್ಕೋಸ್ಕರ ಸ್ಥಾಪನವಾಗಬೇಕಾಗಿದ್ದ ಒಂದು ವಿದ್ಯಾಲಯ (ಕಾಲೇಜ) ಕ್ಕಾಗಿ...೧ ಲಕ್ಷ ರೂಪಾಯಿ.

೩. ಸ್ಥಾನೀಯ ದರಿದ್ರರ ಸಹಾಯಕ ಸಂಘವನ್ನು ಸ್ಥಾಪಿಸುವದಕ್ಕಾಗಿ...೫೦ ಸಾವಿರ ರೂಪಾಯಿ.

೪. ಮದ್ರಾಸ, ಮುಂಬಯಿ, ಕಲಕತ್ತೆಗಳಲ್ಲಿ ರೋಮನ್ ಕ್ಯಾಥೊಲಿಕ್ ಮತವನ್ನು ಪ್ರಚಾರಪಡಿಸುವ ಜನರಿಗಾಗಿ ...೧ ಲಕ್ಷ ರೂಪಾಯಿ.

೫. ಆಗ್ರಾದ ರೋಮನ್ ಕಾಥೊಲಿಕ್ ಧರ್ಮಪ್ರಚಾರಕರ ಸಲುವಾಗಿ...೩೦ ಸಾವಿರ ರೂಪಾಯಿ.

೬. ರೋಮನ್ ಕ್ಯಾಥೊಲಿಕರ ಸಲುವಾಗಿ ಬೇಗಮಳು ಮಿರತದಲ್ಲಿ ಕಟ್ಟಿಸಿದ ಪ್ರಾರ್ಥನಾಲಯುದ ಅವಶ್ಯಕ ವೆಚ್ಚಕ್ಕಾಗಿ ... ೧೨೦೦೦ ರೂಪಾಯಿ.

೭. ರೋಮದ ಪೋಪನು ತನ್ನ ಇಚ್ಛೆಯಂತೆ ಸತ್ಕರ್ಮಮಾಡುವದಕ್ಕಾಗಿ...೧॥ ಲಕ್ಷ ರೂಪಾಯಿ.



೮. ಕ್ಯಾಂಟರ್ಬರಿಯ ಬಿಶಪ್ಪನು ಸತ್ಕಾರ್ಯದಲ್ಲಿ ವ್ಯಯಮಾಡುವದಕ್ಕಾಗಿ...೫೦ ಸಾವಿರ ರೂಪಾಯಿ.

೯. ಕಲಕತ್ತೆಯ ದರಿದ್ರರ ಸಹಾಯಾರ್ಥವಾಗಿ, ಮತ್ತು ಸಾಲದಿಂದ ಸೆರೆಮನೆಯನ್ನು ಸೇರುತ್ತಿರುವ ಜನರ ಬಿಡುಗಡೆಗಾಗಿ... ೫೦ ಸಾವಿರ ರೂಪಾಯಿ.

೧೦. ಕಲಕತ್ತೆಯಲ್ಲಿಯ ದರಿದ್ರ ಪ್ರೊಟೆಸ್ಟಂಟ ಬಾಲಕರ ಶಿಕ್ಷಣಕ್ಕಾಗಿ ಕಲಕತ್ತೆಯ ಬಿಶಪ್ಪನಿಗೆ ...೧ ಲಕ್ಷ ರೂಪಾಯಿ.

ಇವುಗಳ ಹೊರತು ಬೇಗಮಳು ಸರ್ಧಾನಾದ ಬಿಶಪ್ಪನಾದ ಜೂಲಿಯಸ್ ಸಿರ್ಝುರನಿಗೆ ಎಷ್ಟೋ ಸಾವಿರ ರೂಪಾಯಿಗಳನ್ನು ದಾನಮಾಡಿದ್ದಳು. ಬೇಕನ್ನನು ಹೀಗೆ ಬರೆದಿದ್ದಾನೆ—"ಬೇಗಮಳು ರಾಜವೈದ್ಯನಾದ ಡ್ರೆಪ್ಹರನಿಗೆ ೨೦ ಸಾವಿರ ರೂಪಾಯಿ; ತನ್ನ ಉತ್ತರಾಧಿಕಾರಿಯ ಇಬ್ಬರು ಭಗಿನಿಯರ ಪತಿಗಳಿಗೆ ಕ್ರಮವಾಗಿ ೫೦ ಸಾವಿರ, ೮೦ ಸಾವಿರ ರೂಪಾಯಿ; ಮತ್ತು ಇತರ ಕಾಮದಾರರಿಗೆ ಬಹಳ ಹಣ ದಾನಮಾಡಿದ್ದಳು."

ಅಟ್ಕಿನಸನ್ ( Atkinson )ನು ಹೇಳುತ್ತಾನೆ–"ಬೇಗಮಳು ಹಿಂದೂ, ಮುಸಲ್ಮಾನರ ಹಿತಕ್ಕಾಗಿಯೂ ಬಹಳ ದ್ರವ್ಯವನ್ನು ದಾನಮಾಡಿದ್ದಾಳೆ."

ಧರ್ಮಕ್ಕಾಗಿ ಬೇಗಮಳು ಉದಾರಹಸ್ತದಿಂದ ಸಹಾಯಮಾಡಿದ ಉದಾಹರಣೆಗಳು ಬೇಕಾದಷ್ಟಿವೆ. ಅವಳು ಚರ್ಚ ಆಫ್ ಇಂಗ್ಲಂಡ (church of England ) ಕ್ಕೆ ಸಹಾಯಮಾಡಿದ ಸಂಗತಿಯು 'ಬೇಗಮ್ ಸಮರುವಿನ ಫಂಡು' ಎಂದು ಪ್ರಸಿದ್ಧವಾಗಿದೆ. ಅದರ ವ್ಯವಸ್ಥೆಯು ಕಲಕತ್ತೆಯ ಬಿಶಪ್ಪನಿಗೆ ಒಪ್ಪಿಸಲ್ಪಟ್ಟಿರುವದು.

ಬೇಗಮ ಸಮರುವಿನ ಬೊಕ್ಕಸದ ಸಂಬಂಧವಾಗಿ ಸನ್ ೧೮೩೮ ರ ಮಾರ್ಚ ೮ನೇತಾರೀಖಿನ ಫ್ರೆಂಡ್‌ಆಫ್ ಇಂಡಿಯಾ (Friend of India) ಪತ್ರದ ೯೦-೯೧ ಪುಟದ ಕ್ರಿಸ್ತ ಇಂಟೆಲಿಜೆನ್ಸರ (christ intelligencer) ದಿಂದ ಕೆಳಗಿನ ಸಂಗತಿಗಳನ್ನು ತೆಗೆದುಕೊಂಡಿದ್ದೇವೆ.

A-3328

V, 2. N20

" ಕಳೆದ ೩೧ನೇ ಜನವರಿ ೧೮೩೮ ರಲ್ಲಿ ಲಾರ್ಡಬಿಶಪ್ಪ ಮತ್ತು ಅರ್ಚಡಿಕನ್ ಇವರು ಬೇಗಮ್ ಸಮರುವಿನ ಬೊಕ್ಕಸದಿಂದ ಎರಡು ಸಾವಿರ ರೂಪಾಯಿಗಳನ್ನು ಹಸಿವೆಯಿಂದ ಬಳಲುತ್ತಿರುವ ಬಡವರಿಗೂ, ಸ್ವಲ್ಪ ಋಣದಿಂದ ಸೆರೆಮನೆಗೆ ಹೋಗುತ್ತಿರುವ ಜನರ ಬಿಡುಗಡೆಗಾಗಿಯೂ ವೆಚ್ಚಮಾಡಿದರು. ಇದರಿಂದ ೩೪ ಜನರು ಸೆರೆಮನೆಗೆ ಹೋಗುವದು ತಪ್ಪಿತು. ಈ ಫಂಡಿನಲ್ಲಿ ಕೇವಲ ಮಿಶನರಿ ಜನರಿಗಾಗಿ ತೆಗೆದಿಟ್ಟ ಹಣದಿಂದ ತಿಂಗಳಿಗೆ ೪೦೦ ರೂಪಾಯಿ ಉತ್ಪನ್ನವು ಬರುವದು. ಇದರಿಂದ ಧರ್ಮಪ್ರಸಾರ ಮಾಡುವ ಜನರ ಶಿಕ್ಷಣಕ್ಕಾಗಿ ಸ್ಥಾಪಿತವಾದ ಕಾಲೇಜದ ವೆಚ್ಚವು ಸಾಗುವದು. "

ಬೇಗಮಳ ಜಹಾಗೀರು ಮತ್ತು ಧನರಾಶಿಯು ಹೇಗೆ ನಾಶವಾಯಿತು? ಅವಳ ದುರ್ಭಾಗ್ಯನಾದ ಉತ್ತರಾಧಿಕಾರಿಯು ವಿಪುಲ ಸಂಪತ್ತಿಗೊಡೆಯನಾಗಿದ್ದರೂ, ಮಹತ್ವಾಕಾಂಕ್ಷೆಯಿಂದ ಒಬ್ಬ ಯುರೋಪಿಯನ್ ರಮಣಿಯನ್ನು ಮದುವೆಯಾಗಿ ಹೇಗೆ ಆಮರಣ ದುಃಖಿಯಾದನು? ಇದರ ವಿವರಣೆಯು ಬೇಗಮಳ ಜೀವನ ಚರಿತ್ರೆಗಿಂತಲೂ ಅದ್ಭುತವಾಗಿದೆ. ಅದನ್ನು ಇಲ್ಲಿ ಸಂಕ್ಷೇಪವಾಗಿ ಹೇಳುವೆವು.

ಸಮರುವಿನ ಮೊದಲ ಹೆಂಡತಿಯ ಪುತ್ರನಾದ ಜಾಫರ ಇಯಾಬನು ಜೂಲಿಯಾ ಎನ್ನಳೆಂಬ ಯುರೋಪಿಯನ್ ಅಬಲೆಯನ್ನು ಮದುವೆಯಾದನು. ಅವನಿಗೆ ಒಬ್ಬ ಮಗನೂ, ಒಬ್ಬ ಮಗಳೂ ಇದ್ದರು. ಸನ್ ೧೮೦೩ ರಲ್ಲಿ ತಂದೆಯು ಸಾಯುವದಕ್ಕಿಂತ ಮೊದಲೇ ಮಗನು ತೀರಿದನು. ಮಗಳು ೧೮೦೬ರಲ್ಲಿ ಬೇಗಮಳ ಬೊಕ್ಕಸದ ಅಧಿಕಾರಿಯಾದ ಕರ್ನಲ್‌ಡಾಯಿಸನನ್ನು ಮದುವೆ ಮಾಡಿಕೊಂಡಳು. ಇವರಿಗೆ ಹಲವು ಮಂದಿ ಮಕ್ಕಳಾದರು. ಅವರಲ್ಲಿ ಕೆಲವರು ಚಿಕ್ಕಂದಿನಲ್ಲಿಯೇ ತೀರಿಕೊಂಡರು. ಕರ್ನಲಡಾಯಿಸನ ಹೆಂಡತಿಯ ಮರಣದ ತರುವಾಯ (೧೩ನೇ ಜೂನ ೧೮೨೦)



ಅವಳ ಒಬ್ಬ ಮಗನನ್ನೂ ಇಬ್ಬರು ಹೆಣ್ಣು ಮಕ್ಕಳನ್ನೂ ಬೇಗಮಳು ತನ್ನ ಮಕ್ಕಳಂತೆ ಸಂರಕ್ಷಣೆ ಮಾಡಿದಳು. ಆ ಹೆಣ್ಣು ಮಕ್ಕಳನ್ನು ಬಹಳ ಬಳುವಳಿಗಳೊಡನೆ ಯುರೋಪಿಯನ್ನರಿಗೆ ಲಗ್ನಮಾಡಿಕೊಟ್ಟಳು. (೧೮೩೧ನೇ ಅಗಸ್ಟ ೩) ಕರ್ನಲ್‌ಡಾಯಿಸನ ಪುತ್ರನಾದ:ಡೆವಿಡ್ ಅಕ್ಟರ ಲೋನಿಯು: ಡಾಯಿನ್ ಸೊಂಬರನೆಂಬ ಹೆಸರನ್ನು ಧರಿಸಿದನು. ಇವನು ೧೮೦೮ ನೆಯ ಡಿಶಂಬರ ೮ನೇ ತಾರೀಖಿನ ದಿವಸ ಹುಟ್ಟಿದನು. ಬೇಗಮಳು ಇವನನ್ನು ಸಲಹಿದಳು, ಮತ್ತು ಕೊನೆಗೆ ಇವನನ್ನೇ ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿದಳು.

ಬೇಗಮಳು ಸತ್ತ ತರುವಾಯ ಕೆಲವು ದಿವಸಗಳ ಮೇಲೆ ಡಾಯಿನ್ ಸೊಂಬರನು ವಿಲಾಯತಿಗೆ ಹೋದನು. ಅಲ್ಲಿ (೧೮೦೪ ನೇ ಸಪ್ಟಂಬರ ೨೬) ವ್ಹಾಯಕೌಂಟ ಸೆಂಟವಿನ್ಸೆಂಡನ ಮಗಳಾದ ಮೇರಿಯನ್ನು ಮದುವೆಯಾದನು. ಹಿಂದು ದೇಶದ ಹೆಂಗಸರಂತೆ ಅಲ್ಲಿಯ ಹೆಂಗಸರೂ ಇರುವರೆಂದು ಅವನ ಭಾವನೆಯಿತ್ತು. ಆದರೆ ಅದಕ್ಕೆ ವಿಪರೀತಳಾದ ಆ ಹೆಂಡತಿಯ ಆಚರಣೆಗಳು ಅವನಿಗೆ ಸೇರಲಿಲ್ಲ. ಅವಳ ಸಾಧಾರಣ ಆಚಾರ ವ್ಯವಹಾರ, ಬೇರೆ ಜನರೊಡನೆ ಕಲೆಯುವದು ಇವು ಡಾಯಿಸನಿಗೆ ಖೇದವನ್ನುಂಟುಮಾಡಿದವು. ಅದರಿಂದ ಅವನು ಆಚಾರ ವಿಚಾರಗಳನ್ನು ಸುಧಾರಿಸುವದಕ್ಕೆ, ಹಿಂದು ಲಲನೆಯರಂತಿರುವದಕ್ಕೆ ಹೆಂಡತಿಗೆ ಹೇಳಿದನು. ಆದರೆ ಹೆಂಡತಿಗೆ ಇದು ಸರಿಬರಲಿಲ್ಲ, ಗಂಡನು ಕಾಡಮನುಷ್ಯನೆಂದು ತಿಳಿದಳು. ಮತ್ತು ಗಂಡನಿಗೆ ಉನ್ಮಾದವಾಯುವಿನಿಂದ ತಲೆಕೆಟ್ಟಿರುವದೆಂದು ಹೇಳಿ, ಅವನನ್ನು ಹುಚ್ಚರ ಆಸ್ಪತ್ರಿಗೆ ಕಳಿಸುವ ವ್ಯವಸ್ಥೆ ಮಾಡಿದಳು. ಇದನ್ನು ಡಾಯಿಸನು ಮೊದಲೇ ತಿಳಿದು ಗುಪ್ತರೀತಿಯಿಂದ ಫ್ರಾನ್ಸಕ್ಕೆ ಓಡಿಹೋದನು. ಅಲ್ಲಿ ತನ್ನ ಸಂಪತ್ತಿನಿಂದ ಬರತಕ್ಕ ಆಯದಿಂದ ಉಪಜೀವನ ಸಾಗಿಸತೊಡಗಿದನು. ಪಾರಿಸದಲ್ಲಿರುವಾಗ (೧೮೪೯) ಅವನೊಂದು ಪುಸ್ತಕ

ವನ್ನು ಬರೆದಿದ್ದಾನೆ. ಆ ಪುಸ್ತಕದ ಹೆಸರು—“A refutation of the charges of lunacy brought against him in the court of chancery.”

ಈ ಪುಸ್ತಕದಲ್ಲಿ ೫೪೯ ಪುಟಗಳುಂಟು ಇದು ಯಾವ ಮನುಷ್ಯನಿಗಾದರೂ ಓದಲಿಕ್ಕೆ ಆಗದಂಥದಿರುವದು. ಅಂದರೆ ಅರ್ಥರಹಿತವಾಗಿದೆ. ಇದನ್ನು ಓದಿದ ಜನರು ಡಾಯಿಸನನ್ನು ಹುಚ್ಚರಲ್ಲಿ ಎಣಿಸುವದರಲ್ಲಿ ಸಂದೇಹವಿಲ್ಲ.

೧೮೫೧ ರಲ್ಲಿ ಡಾಯಿಸನು ಪಾರಿಸದಲ್ಲಿ ತೀರಿದನು. ಸತ್ತು ಹದಿನಾರು ವರ್ಷಗಳಾದ ಮೇಲೆ ಅವನ ಶವವನ್ನು ಸರ್ಧಾನಾಕ್ಕೆ ತಂದು ಬೇಗಮಳ ಸಮಾಧಿಯ ಹತ್ತರ ಸಮಾಧಿಮಾಡಿದರು. ಡಾಯಿಸನಿಗೆ ಮಕ್ಕಳಿರಲಿಲ್ಲ. ಡಾಯಿಸನ ತರುವಾಯ ಅವನ ಹೆಂಡತಿಯು ಲಾರ್ಡ ಫಾರೆಸ್ಟರನನ್ನು ವಿವಾಹಮಾಡಿಕೊಂಡಳು.

ಬೇಗಮಳ ಮೃತ್ಯುವಿನ ತರುವಾಯ ಅವಳ ಜಹಾಗೀರು ಬ್ರಿಟಿಶರಾಜ್ಯಕ್ಕೆ ಸೇರಿಸಲ್ಪಟ್ಟಿತು. ಡಾಯಿಸನು ಸರಕಾರದೊಡನೆ ವ್ಯಾಜ್ಯಮಾಡಿ, ಅರಮನೆಯನ್ನೂ ಅದರ ಹತ್ತರಿರುವ ಭೂಮಿಯನ್ನೂ ತಿರುಗಿ ಸಂಪಾದಿಸಿದ್ದನು. ಇದು ಲೇಡಿ ಫಾರೆಸ್ಟರಳು ಬದುಕಿರುವವರೆಗೆ ಅವಳ ವಶದಲ್ಲಿತ್ತು. ಮುಂದೆ ಅವಳು ತೀರಿದನಂತರ ಆಗ್ರಾದ ಕ್ಯಾಥೊಲಿಕ್ ಮತಪ್ರಸಾರಕ ಸಂಘವು ಇದನ್ನು ೨೫೦೦೦ ರೂಪಾಯಿಗಳಿಗೆ ಲಿಲಾವಿನಲ್ಲಿ ತೆಗೆದುಕೊಂಡಿತು. ಈಗ ಆ ಅರಮನೆಯು ದೇಶೀಯ ಕ್ರಿಸ್ತೀ ಜನರ ಅನಾಥಾಶ್ರಮವಾಗಿದೆ.

ಹಾಯ! ಎಂಥ ವಿಚಿತ್ರವಾದ ದೈವವಿದು! ಓರ್ವ ಭಾರತೀಯ ರಮಣಿಯ ಧನರಾಶಿ ಮತ್ತು ವಿಷಯಸಂಪತ್ತು—ಅದು ಒಂದು ಕಾಲದಲ್ಲಿ ಶಸ್ತ್ರದ ಸಹಾಯದಿಂದಲೂ, ಕೌಶಲ್ಯದಿಂದಲೂ ಸಂಪಾದಿತವಾದದ್ದು; ಅದನ್ನು ಈ ದೇಶದಲ್ಲಿ ಕಾಲಿಡದ ಓರ್ವ ಆಂಗ್ಲ ರಮಣಿಯು ಹೊಂದಿದಳು. ಮತ್ತು ಸರ್ಧಾನಾದ ಅರಮನೆಯು—ಒಂದು ಕಾಲದಲ್ಲಿ ಉತ್ಸವ ಆನಂದಗಳಲ್ಲಿ ಮುಳುಗಿರುವ ಅದು



ಇಂದು ಉತ್ಸವಹೀನವಾಗಿದೆ. ಯುದ್ಧಸಭೆಗಳ ಸ್ಥಳವೂ, ರಾಜಕಾರ್ಯದ ಆಲೋಚನೆಯ ಮಂದಿರವೂ ಆದ ಅದು ಇಂದು ಜನಹೀನವೂ ನೀರವವೂ ಆಗಿದೆ. ಬಡಬಗ್ಗರ ಬಯಕೆಯನ್ನು ನೆರವೇರಿಸುವ, ಹಸಿವೆಯಿಂದ ಬಳಲಿದವರಿಗೆ ಅನ್ನವನ್ನು ನೀಡುವ ಅನಾಥರಿಗೆ ಇಂಬಾದ ಆ ಸ್ಥಳದಲ್ಲಿ ಇಂದು ಕೇವಲ ಕಾಗೆಗಳ ಒದರುವಿಕೆಯೂ, ಮಿರತದ ಉತ್ಸವಗಳಲ್ಲಿ ಸೈನಿಕರ ಹಾಸ್ಯಧ್ವನಿಯ ಪ್ರತಿಧ್ವನಿಯೂ ಕೇಳಬರುತ್ತಿವೆ. ಸರ್ಧಾನಾದ ಸುಖಸಮೃದ್ಧಿಯು ಬೇಗಮಳ ಕೊನೆಯ ಶ್ವಾಸದೊಡನೆಯೇ ಹೋಯಿತು. ಈಗ ಆ ಸರ್ಧಾನಾದ ಕಥೆಯನ್ನು ಮನಸ್ಸಿಗೆತರಲು ಅತಿಶಯ ವಿಷಾದವಾಗುವದು. ಹಿಂದುಸ್ತಾನದ ಶೋಚನೀಯ ಸ್ಥಿತಿಯು ಮನಸ್ಸಿನಲ್ಲಿ ಬರುವದು.

ಕಂದ:—ಹೇಮಮಯವಾದಭಾರತ! ।
ಕಾಮಿತಫಲದಾತೃವೆಂದು ಪರದೇಶಿಗರಿಂ ।
ನಾಮವಧರಿಸಿದೆ ಮೊದಲೊಳ್ ।
ಭೂಮಿಯೊಳೀಗತಿ ದರಿದ್ರನಾದೆಯದೆಂತೈ ॥

---

## ೧೧ನೆಯ ಅಧ್ಯಾಯ.

ಸನ್ ೧೮೩೯ ರಲ್ಲಿ ಡಾಯಿಸ್‌ಸೊಂಬರನು ರೋಮನಗರದಲ್ಲಿದ್ದನು. ಅವನು ಆಗ ಬೇಗಮಳ ೩ನೆಯ ವರ್ಷದ ಉತ್ಸವಕ್ಕಾಗಿ ಸಾನ್‌ಕರಲೊನ ಧರ್ಮಮಂದಿರದಲ್ಲಿ ಒಂದು ದೊಡ್ಡ ಶೋಕಸಭೆಯನ್ನು ಕೂಡಿಸಿದ್ದನು. ಈ ಸಭೆಗೆ ಬಹಳ ಜನರು ಬಂದಿದ್ದರು. ಆ ಕಾಲದ ರೋಮಪಟ್ಟಣದ ಇಂಗ್ಲಿಷಕಾಲೇಜದ ಅಧ್ಯಾಪಕನಾದ ಡಾಕ್ಟರ ವಾಯಿಜಮನ (Dr Wiseman.) ನು ಶೋಕಸೂಚಕ ಭಾಷಣ ಮಾಡಿದನು. ಅದರ ಸ್ವಲ್ಪ ಭಾಗವನ್ನು ಕೆಳಗೆ ಕೊಟ್ಟಿದ್ದೇವೆ.

The princess, whom' we commemorate at Gods alter, was powerful in her day. See ruled her dominions with more than woman's arm: She feared not the turmoils and dangers of war, she guided with skill the ardous counsels of peace; by many she was beloved, by others feared·

ಸರ್ಧಾನಾದ ಅರಮನೆಯಲ್ಲಿ ಪ್ರಸಿದ್ಧ ಯುರೋಪಿಯನ್ ಚಿತ್ರಕಾರರಿಂದ ಬೇಗಮಳ ಅನೇಕ ಆಪ್ತರ ಚಿತ್ರಗಳು ಬರೆಯಿಸಲ್ಪಟ್ಟಿದ್ದವು. ಅವುಗಳಲ್ಲಿ ಸರ ಡೆವಿಡ್ ಅಕ್ಟರಲೋನಿ, ಜನರಲ್ ಕಾರ್ಟರಾಯಿಟ್, ಕರ್ನಲ್ ಟ್ರಿಪ್, ಜಾನ್ ಟಾಮಸ್, ಡಾಕ್ಟರ ಡ್ರೇವ್ಹರ, ಡಾಯಸ್‌ಸೊಂಬರ ಮೊದಲಾದವರ ಚಿತ್ರಗಳು ಉಲ್ಲೇಖಯೋಗ್ಯವಾಗಿವೆ. ಭರತಪುರದ ಜಯದನಂತರ ಲಾರ್ಡ ಕಂಬರಮಿಯರನೂ ಬೇಗಮಳೂ ಒತ್ತಟ್ಟಿಗೆ ಕೂಡಿದ್ದರು. ಈ ಪ್ರಸಂಗವನ್ನನುಸರಿಸಿ ತೆಗೆದ ಚಿತ್ರವೂ ಉತ್ತಮವಾಗಿದೆ. ಅರಮನೆಯ ಮಧ್ಯಭಾಗದಲ್ಲಿ ಒಂದು ಸುಂದರ ಚಿತ್ರವಿತ್ತು. ಅದರಲ್ಲಿ ಬೇಗಮಳು ಬೆಲೆಯುಳ್ಳ ಉಚ್ಚಾಸನದಲ್ಲಿ ಕುಳಿತು ಧೂಮ್ರಪಾನಮಾಡುತ್ತಿರುವದನ್ನು ತೋರಿಸಿದೆ. ಪ್ರಾಸಾದವು ಲಿಲಾವಿನಿಂದ ವಿಕ್ರಯವಾಗುವದಕ್ಕಿಂತ ಸ್ವಲ್ಪ ಪೂರ್ವದಲ್ಲಿ ಲೇಡಿಫಾರೆಸ್ಟರಳ ಎಜಂಟನು ಈ ಉತ್ಕೃಷ್ಟ ಚಿತ್ರಗಳನ್ನು ಅಲ್ಲಿಂದ ಒಯ್ದನು. ಈಗ ಅವು ಅಲಹಾಬಾದದ ಗವ್ಹರ್ನಮೆಂಟ್ ಹೌಸಿನಲ್ಲಿವೆ.

ಸರ್ಧಾನಾದ ಬೇಗಮಳ ಪ್ರಾರ್ಥನಾಲಯದಲ್ಲಿ ನೋಡತಕ್ಕ ಮುಖ್ಯ ವಸ್ತುಗಳು ಎರಡುಂಟು:—ಜಯಪುರದಿಂದ ತಂದ ಬಹು ಮೂಲ್ಯವಾದ ಉನ್ನತಶಿಲಾಸಿಂಹಾಸನ, ಮತ್ತು ಬೇಗಮಳ ಸ್ಮೃತಿಸ್ತಂಭ.

ರೋಮಪಟ್ಟಣದಲ್ಲಿ ಮಾಡಿದ ಬೇಗಮಳ ಸಂಗಮರವರಿಶಿಲೆಯ ಸ್ಮೃತಿಸ್ತಂಭವು ಅಪೂರ್ವವಾಗಿದೆ. ಇದು ೧೮೪೨ ರಲ್ಲಿ ಸರ್ಧಾನಾದಲ್ಲಿ ಸ್ಥಾಪಿತವಾಯಿತು. ಕಂಬದ ಮೇಲ್ದುದಿಯಲ್ಲಿ ಬೇಗಮಳು



ದೇಶೀಯ ವಸನಭೂಷಿತಳಾಗಿ ಕುಳಿತಿದ್ದಾಳೆ. ಅವಳ ಬಲಗೈಯಲ್ಲಿ ಸರ್ಧಾನಾದ ಜಹಾಗೀರನ್ನು ಪಡೆದ ಚಿಹ್ನವು ಅಂದರೆ ದಿಲ್ಲೀಶ್ವರನಿಂದ ಪಡೆದಆಜ್ಞಾಪತ್ರವುಂಟು. ಬೇಗಮಳ ಬಲಗಡೆಯಲ್ಲಿ ಡಾಯಿಸ್‌ಸೊಂಬರನು ವಿಷಣ್ಣಮುಖದಿಂದ ಕಂಬದ ಮೇಲೆ ಕೈಗಳನ್ನಿಟ್ಟುಕೊಂಡು ನಿಂತಿದ್ದಾನೆ. ಬೇಗಮಳ ಎಡಗಡೆಯಲ್ಲಿ ಮಂತ್ರಿಯಾದ ರಾಯಸಿಂಹನಿರುವನು. ಹಿಂದುಗಡೆಯಲ್ಲಿ ಬಿಶಪ್ಪನೂ ಅಶ್ವಾರೋಹಿ ಸೈನಿಕರ ಸೇನಾಪತಿಯೂ ನಿಂತಿದ್ದಾರೆ. ಈ ಎಲ್ಲ ಮೂರ್ತಿಗಳು ಪೂರ್ಣಾವಯವವುಳ್ಳವಾಗಿವೆ.

ಇದರ ಕೆಳಗೆ ಕಂಬದಲ್ಲಿ ಬೇಗಮಳ ಜೀವನದಲ್ಲಿಯ ಮೂರು ಮುಖ್ಯ ಪ್ರಸಂಗಗಳು ಚಿತ್ರಿತವಾಗಿವೆ. ಎದುರಿನ ಭಾಗದಲ್ಲಿ ಸರ್ಧಾನಾದ ಪ್ರಾರ್ಥನಾಮಂದಿರದ ಸ್ಥಾಪನೆಯ ದೃಶ್ಯವಿದೆ. ಬಿಶಪ್ಪನು ಕುಳಿತಿದ್ದಾನೆ. ಅವನ ಹತ್ತರ ಇಬ್ಬರು ಧರ್ಮಯಾಜಕರು ಕುಳಿತಿದ್ದಾರೆ. ಬೇಗಮಳು ನಾಲ್ವರು ಯುರೋಪಿಯನ್ ಕಾಮದಾರರೊಡನೆ ಸುವರ್ಣಪಾತ್ರವನ್ನು ಅರ್ಪಣಮಾಡಲಿಕ್ಕೆ ಸಿದ್ಧಳಾಗಿದ್ದಾಳೆ.

ಬಲಭಾಗದಲ್ಲಿ ಬೇಗಮಳ ದರಬಾರವು ಅಂಕಿತವಾಗಿದೆ. ಎಡಭಾಗದಲ್ಲಿ ಬೇಗಮಳ ಆನೆಯ ಮೇಲಿನ ಮೆರವಣಿಗೆಯು ಚಿತ್ರಿತವಾಗಿದೆ.

ಇವಲ್ಲದೆಬೇಗಮಳ ಸ್ಮೃತಿಸ್ತಂಭದಲ್ಲಿ ೬ ರೂಪಕ ಮೂರ್ತಿಗಳಿವೆ.

೧. ಓರ್ವ ನಿರ್ಭೀಕ ರಮಣಿಯು ಅವಿಚಲಿತ ಹೃದಯದಿಂದ ಸಿಂಹದ ಮೇಲೆ ನಿಂತಿದ್ದಾಳೆ.

೨. ಒಬ್ಬ ಬುರಿಕೆಯ ಹೆಂಗಸು ಬಲಗೈಯಲ್ಲಿ ಹಾವನ್ನು ಹಿಡಿದು ಚಿಂತಾಮಗ್ನಳಾಗಿ ನಿಂತಿದ್ದಾಳೆ.

೩. ಒಬ್ಬ ಸ್ವರ್ಗೀಯ ದೂತನು ಉಸುಕಿನ ವೇಳೆ ತೋರಿಸುವ ಯಂತ್ರವನ್ನು ಹಿಡಿದುಕೊಂಡು ಬೇಗಮಳಿಗೆ ವೇಳೆ ತೋರಿಸುತ್ತಿದ್ದಾನೆ. ಬಲಗೈಯಿಂದ ದೀಪವನ್ನು ಆರಿಸುವ ನೆವದಿಂದ ಬೇಗಮಳ ಜೀವನದೀಪನಿರ್ವಾಣದ ಸೂಚನೆಮಾಡುತ್ತಿದ್ದಾನೆ.

೪. ಮಾತೃಸ್ನೇಹವು ಅಕಿಂತವಾಗಿದೆ. ಇದು ಬೇಗಮಳು ಪ್ರಜೆಗಳನ್ನು ಮಕ್ಕಳಂತೆ ನಡೆಯಿಸಿಕೊಂಡದ್ದನ್ನು ಸೂಚಿಸುತ್ತಿರುವದು.

೫. ಒಬ್ಬ ಲಲನೆಯು ಉಲ್ಲಸಿತವದನಳಾಗಿ ನಾನಾ ತರದ ಹಣ್ಣು ಸಸಿಗಳಿಂದ ಕೂಡಿದ ಹಸ್ತದಿಂದ ಬೇಗಮಳಿಗೆ ಪುಷ್ಪಗುಚ್ಛವನ್ನು ಉಪಹಾರಕೊಡುತ್ತಿದ್ದಾಳೆ. ಇದು ಬೇಗಮಳ ರಾಜ್ಯದಬೆಳೆಯ ಪ್ರಾಚುರ್ಯವನ್ನು ತೋರಿಸುವದು.

೬ ವಿಷಾದವು ಮೂರ್ತಿಮಂತಾಗಿ ಕಂಬದ ಕೆಳಭಾಗದಲ್ಲಿ ಕೂತಿದೆ.

ಬೇಗಮಳ ಸ್ಮೃತಿಸ್ತಂಭದ ಒಂದು ಕಡೆಯಲ್ಲಿ ಇಂಗ್ಲಿಷಿ†ನಲ್ಲಿ, ಬೇರೊಂದು ಕಡೆಯಲ್ಲಿ ಲ್ಯಾಟಿನದಲ್ಲಿ ಕೊರೆದ ಲಿಪಿಗಳಿವೆ.

ಬೇಗಮಸಮರುವು ಪ್ರಾರ್ಥನಾಮಂದಿರಕ್ಕಾಗಿ ಅನೇಕ ಮೂಲ್ಯವುಳ್ಳ ವಸ್ತುಗಳನ್ನು ದಾನಮಾಡಿದ್ದಾಳೆ. ಆ ವಸ್ತುಗಳು ಈವರೆಗೂ

† " Sacred to the memory of her highness Joanna zibalness, the Begam sombre,styled the distinguished of nobles and beloved daughter of the state, who quitted a transitory court for an eternal would, revered and lamented by thousands of her devoted subjects, at her place of Sirdhana, on the 27th of January 1835, aged ninety years. Her remains are deposited underneath, in this cathedral built by herself. To her pourful mind, her remarkable talent, and the wisdom, justice and moderation with which she governed for a period enceeding half a century, he to whome she was more than a mother is not the person to award the praise, but in grateful respect to her beloved memory is this monument crected by him who humbly trusts she will receive a crown of glory that fadeth not away."



ಕಾದಿಡಲ್ಪಟ್ಟಿವೆ. ಅವುಗಳಲ್ಲಿ ಸುವರ್ಣನಿರ್ಮಿತವಾದ ಹಾಗೂ ವಜ್ರಕೆತ್ತಿದ ಪಾನಪಾತ್ರ, ಸರ್ಧಾನಾದ ಬಿಶಪ್ಪನ ಕ್ರಾಸಯುಕ್ತ ದಂಡ (Crozier), ಬೆಳ್ಳಿಯ ಪವಿತ್ರಪಾನಪಾತ್ರ ಇವು ಮುಖ್ಯವಾಗಿವೆ. ಬೇಗಮಳು ಸಾಯುವದಕ್ಕಿಂತ ತುಸು ಮೊದಲು ರೋಮದ ಪೋಪನಾದ ಗ್ರೆಗರಿಯು (Gregory XVI) ವಾತ್ಸಲ್ಯಪ್ರದರ್ಶಕವಾದ ಪತ್ರವನ್ನೂ, ಬಹು ಸಾಧುಗಳ ದೇಹಾವಶೇಷವುಳ್ಳ ಎರಡು ಪಾತ್ರೆಗಳನ್ನೂ (Rebquaries), ಬೇರೆ ಅಮೌಲ್ಯವಸ್ತುಗಳನ್ನೂ ಕಳಿಸಿದ್ದನು. ಅವು ಈ ಮಂದಿರದಲ್ಲಿ ಶೋಭೆಯನ್ನು ಹೊಂದಿವೆ.

ಧರ್ಮಮಂದಿರದ ಸಮಿಪದಲ್ಲಿಯೇ ಸೆಂಟಜಾನ್ಸ ಕಾಲೇಜವಿದೆ. ಒಂದು ಸಮಯದಲ್ಲಿ ಬೇಗಮಳು ಇಲ್ಲಿ ವಾಸಮಾಡುತ್ತಿದ್ದಳು. ಮುಂದೆ ಧರ್ಮಯಾಜಕರ ಶಿಕ್ಷಣಕ್ಕಾಗಿ Capuchin father ಸಂಘಕ್ಕೆ ಇದನ್ನು ಅರ್ಪಣಮಾಡಿದಳು. ಈಗ ಇದು ಪರದೇಶಿಗಳಾದ ದೇಶೀಯ ಕ್ರಿಸ್ತೀ ಬಾಲಕ-ಬಾಲಿಕೆಯರ ಆಶ್ರಯಸ್ಥಾನವಾಗಿದೆ.

## ೧೨ನೆಯ ಅಧ್ಯಾಯ.

## ಉಪಸಂಹಾರ.

ಬೇಗಮಳ ಜೀವನಚರಿತ್ರೆಯು ಮುಗಿಯಿತು. ನಾವು ಈ ಅಧ್ಯಾಯದಲ್ಲಿ ಬೇಗಮಳ ಚರಿತ್ರೆಯ ಸಿಂಹಾವಲೋಕನ ಮಾಡುವೆವು.

ಬಾಲ್ಯಕಾಲದಲ್ಲಿ ತೀರ ದರಿದ್ರಳಾದ ಓರ್ವ ಅರಬಕುಮಾರಿಯು ಮಲಅಣ್ಣನ ತೊಂದರೆಯನ್ನು ಸಹಿಸಲಾರದೆ, ಉಪಜೀವನ ಸಾಗಿಸಿಕೊಳ್ಳುವದಕ್ಕೆ ದಿಲ್ಲಿಯಲ್ಲಿ ತಾಯಿಯೊಡನೆ ಬಂದಿರಬೇಕಾಯಿತು. ಆಗ ಅವಳಲ್ಲಿ ಧನವಿರಲಿಲ್ಲ. ಜನರ ಸಹಾಯವಿರಲಿಲ್ಲ. ಕೇವಲ ದೀನಭಾವದಿಂದ ಕಾಲಯಾಪನೆ ಮಾಡಬೇಕಾಯಿತು. ಮುಂದೆ ಅವಳಿಗೆ ದೈವವು ಅನುಕೂಲವಾಯಿತು. ಅದರಿಂದವಳು ಸರ್ಧಾನಾದ ಒಡೆಯಳಾದಳು. ಈ ಮೇರೆಗೆ ಹೀನಸ್ಥಿತಿಯಿಂದ ಉನ್ನತ

ಪದವಿಗೇರಿದ ಉದಾಹರಣೆಗಳು ಇತಿಹಾಸದಲ್ಲಿ ಹೇರಳವಾಗಿವೆ. ಆದರೆ ಬೇಗಮಳಂತೆ ವಿಪತ್ತನ್ನು ಅವಸ್ಥಾವಿಪರ್ಯಾಸವನ್ನು ಅನುಭವಿಸಿದವರ ಸಂಖ್ಯೆಯು ಮಾತ್ರ ಕಡಿಮೆಯಾಗಿದೆಯೆಂದು ಹೇಳಬಹುದು.

ಭಾರತದ ನಾಟ್ಯಶಾಲೆಯಲ್ಲಿ ಅಭಿನಯಮಾಡುತ್ತಿರುವ ಬೇಗಮಳ ಕಾಲವು ಭಯಂಕರ ಕ್ರಾಂತಿಕಾಲವು. ಆ ಸಮಯದಲ್ಲಿ ಬಲವುಳ್ಳವನೇ ಅರಸನು. ನಿರ್ಬಲರನ್ನು ಯಾರೂ ಕೇಳುತ್ತಿರಲಿಲ್ಲ. ಇಂತಹ ವೇಳೆಯಲ್ಲಿ ಓರ್ವ ದೇಶೀಯ ರಮಣಿಯು ಅನೇಕ ತೊಂದರೆಗಳಿಂದ ಪಾರಾಗಿ ಧನಜನಪೂರ್ಣವಾದ ಒಂದು ರಾಜ್ಯವನ್ನು ಸ್ಥಾಪನೆಮಾಡಿದ್ದು ಸಾಮಾನ್ಯ ವಿಷಯವಲ್ಲ. ಈ ಸಮಯದಲ್ಲಿ ಭಾರತಭೂಮಿಯು ಯುರೋಪಿಯನ್ ವೀರವೃಂದದ ಸ್ವಾರ್ಥಸಾಧನದ ಲೀಲಾಕ್ಷೇತ್ರವಾಗಿತ್ತು. ಒಂದು ಕಡೆಯಲ್ಲಿ ಸಿಂದೆಯು ಪ್ರಬಲನಾಗಿದ್ದನು. ಬೇರೊಂದೆಡೆಯಲ್ಲಿ ಸಂಪತ್ತಿನಿಂದ ಮೆರೆಯುತ್ತಿರುವ ಭಾರತದ ಆಧಿಪತ್ಯವಿಸ್ತಾರಕ್ಕಾಗಿ ಇಂಗ್ಲಿಷರು ವಿಪುಲವಿಕ್ರಮದಿಂದ ಉದ್ಯುಕ್ತರಾಗಿದ್ದರು. ಈ ಅವಧಿಯಲ್ಲಿ ನಾಲ್ಕೂ ಕಡೆಯಲ್ಲಿ ವಿದ್ರೋಹಾಗ್ನಿಯು ಪ್ರಜ್ವಲಿತವಾಗಿತ್ತು. ಇಂತಹ ವೇಳೆಯಲ್ಲಿ ಒಬ್ಬ ಅಬಲೆಯು ಸರ್ಧಾನಾದಂಥ ಸ್ಥಳದಲ್ಲಿ ವಿಪತ್ಸಾಗರವನ್ನು ದಾಟಿ ತನ್ನ ಪ್ರಭುತ್ವವನ್ನು ಕಾಯ್ದುಕೊಳ್ಳುವದರಲ್ಲಿ ಸಮರ್ಥಳಾದ ಸಂಗತಿಯು ಬೇಗಮಳ ಅನುಪಮವಾದ ನಿದರ್ಶಕವಾಗಿದೆ. ಇದು ಬೇಗಮಳ ಅನನ್ಯ ಸಾಧಾರಣ ವೀರತ್ವದ, ತೀಕ್ಷ್ಣಬುದ್ಧಿಯ, ಸುಪ್ರಜಾಪಾಲನೆಯ ಉತ್ತಮ ಉದಾಹರಣೆಯಾಗಿದೆ. ಇದಕ್ಕಾಗಿ ಐತಿಹಾಸಿಕ ಫ್ರಾಂಕಲಿನ್ನನು ಬೇಗಮಳನ್ನು ಸ್ತುತಿಸಿದ್ದಾನೆ.*

---

* ‘‘ endowed by nature with masculine intrepidity, assisted by a judgment and foresight clear and comprehensive, Begam Somroo, during the various revolutions was erabled to preserve her country unmolest ed and her anthority unimpaired ’’



ಬೇಗಮಳ ಬಹಳ ಕೆಲಸಗಳು ಸ್ತುತಿಗೆ ಯೋಗ್ಯವಾಗಿವೆ. ಪ್ರತಿಯೊಂದು ಕಾರ್ಯವನ್ನು ಅವಳು ಸದುದ್ದೇಶದಿಂದ ಮಾಡಿದಳೆಂದು ಹೇಳಬಹುದು. ಅವಳ ಆಶ್ರಯದಲ್ಲಿದ್ದ ಬಹಳ ಜನರು ಬೇಗಮಳಂತಹ ದಯಾಶೀಲರು ವಿರಳರೆಂದು ಹೇಳುತ್ತಿರುವರು. ಪಾತ್ರಾಪಾತ್ರ ವಿಚಾರಮಾಡದೆ ಅವಳ ಕರುಣಾಜಲವು ಸಂತತಧಾರೆಯಿಂದ ಸುರಿಯುತ್ತಿತ್ತು. ಅವಳು ಯಾವಾಗಲೂ ದುಃಖಿತರ ಮತ್ತು ಬಡವರ ಸಹಾಯಕ್ಕಾಗಿ ಬಹು ಧನವನ್ನು ವೆಚ್ಚಮಾಡಿದ್ದಾಳೆ. ಇದರಿಂದ ಅವಳು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯಳಾಗಿದ್ದಾಳೆ.

ಬೇಗಮಳು ಪ್ರತಿಯೊಂದು ಕೆಲಸವನ್ನು ಕೌಶಲ್ಯದಿಂದ ಮಾಡುತ್ತಿದ್ದಳು. ಪುರುಷೋಚಿತ ಸಾಹಸವೂ ದೃಢತ್ವವೂ ಅವಳಲ್ಲಿದ್ದವು. ಬಹುದಿವಸ ಬೇಗಮಳ ಹತ್ತಿರಿರುವ ದೇಶೀಯ ಮತ್ತು ಯುರೋಪಿಯನ್ ಜನರಿಂದ ಸ್ಲೀಮನ್ನನು ಈ ಮೇರೆಗೆ ಅಭಿಪ್ರಾಯಪಟ್ಟಿದ್ದಾ*ನೆ—“ ಬೇಗಮಳು ಹೆಂಗಸಾಗಿದ್ದರೂ, ರಾಜ್ಯಕಾರಭಾರದಲ್ಲಿ ಜನರ ಮನಸ್ಸನ್ನಾಕರ್ಷಿಸಿಕೊಳ್ಳುವದರಲ್ಲಿ ಶ್ರೇಷ್ಠಳಾಗಿದ್ದಳು. ”

ಪ್ರಜೆಗಳು ಬೇಗಮಳೊಡನೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಬೇಗಮಳ ಆಳಿಕೆಯಲ್ಲಿ ಪ್ರಜೆಗಳಿಗೆ ಯಾವತರದ ಉಪದ್ರವವೂ ಇರಲಿಲ್ಲ. ಅದರಿಂದ ಪ್ರಜೆಗಳ ಧನ, ಪ್ರಾಣ, ಮರ್ಯಾದೆಗಳಿಗೆ ಅಂಜಿಕೆಯಿರಲಿಲ್ಲ. ಅದರಿಂದ ಜನರು ಸುಖದಿಂದ ಕಾಲಕಳೆಯುತ್ತಿದ್ದರು. ಬೇಗಮಳ ಸಂಸ್ಥಾನದಲ್ಲಿ ಒಕ್ಕಲತನವು ಚೆನ್ನಾಗಿತ್ತು. ಕೃಷಿಯು ಉನ್ನತಿಯು ದೇಶದ ಕಲ್ಯಾಣಕ್ಕೆ ಅವಶ್ಯವಾ

---

1. “Though a woman and of small stature, her rosab (dignity, or power of commanding pers onal respect ) was grater than that of almost any person they had ever seen.”

ದದ್ದೆಂದು ಬೇಗುವಳು ತಿಳಿದುಕೊಂಡಿದ್ದಳು. ಅದರಿಂದ ಅದರ ಸುಧಾರಣೆಗೆ ಆದಷ್ಟು ಸಹಾಯಮಾಡಿದಳು; ಬೆಳೆಯು ಚೆನ್ನಾಗಿ ಬಾರದ ವರುಷ ಬೇಗಮಳು ಒಕ್ಕಲಿಗರಿಗೆ ಧನಸಹಾಯ ಮಾಡುತ್ತಿದ್ದಳು.

ಸನ್ ೧೮೨೮ರಲ್ಲಿ ಮೇಜರ ಅರ್ಚರನು ಸರ್ಧಾನಾಕ್ಕೆ ಹೋಗಿದ್ದನು. ಅವನು ಬೇಗಮಳ ಸಂಸ್ಥಾನದಲ್ಲಿ ಕೃಷಿಯು ಉತ್ತಮವಿತ್ತೆಂದು ಬರೆದಿದ್ದಾನೆ.†

ಸರ್ಧಾನಾದಲ್ಲಿ ನಾಲ್ಕೆಂಟು ದಿವಸವಿದ್ದು ಬೇಗಮಳ ಆತಿಥ್ಯವನ್ನು ಸ್ವೀಕರಿಸಿದ ಕೆಲವು ಜನಲೇಖಕರೂ ಪ್ರವಾಸಿಗಳೂ ಒಬ್ಬಿಬ್ಬರ ಮಾತುಗಳನ್ನು ನಂಬಿ ಬೇಗಮಳ ನಿಷ್ಠುರಳಿದ್ದಳೆಂದು ಹೇಳಿದ್ದಾರೆ. ಅವರು ಕೆಳಗಿನ ಸಂಗತಿಯನ್ನು ತೆಗೆದುಕೊಂಡು ಬೇಗಮಳು ಕ್ರೂರಳಿದ್ದಳೆಂದು ಹೇಳುತ್ತಿರುವರು.

ಸನ್ ೧೭೭೦ರಲ್ಲಿ ಬೇಗಮಳು ಮಧುರೆಯಲ್ಲಿ ಸಾಮ್ರಾಜನ ಪಾಳೆಯದಲ್ಲಿರುವಾಗ, ಬೇಗಮಳ ಇಬ್ಬರು ದಾಸಿಯರು ಅವಳ ಆಗ್ರಾದಲ್ಲಿರುವ ಮನೆಗೆ ಬೆಂಕಿಹಚ್ಚಿ ತಮ್ಮ ಪ್ರಿಯರೊಡನೆ ಓಡಿ ಹೋಗಿದ್ದರು. ಈ ಮನೆಯಲ್ಲಿ ಬಹುಧನವು ಇತ್ತು. ಮತ್ತು ಅನೇಕ ಜನರೂ ವಾಸಿಸುತ್ತಿದ್ದರು. ಸುದೈವದಿಂದ ಬೆಂಕಿಯು ತುಸು ಹೊತ್ತಿನಲ್ಲಿ ನೊಂದಿಸಲ್ಪಟ್ಟದ್ದರಿಂದ ಆ ಜನರು ಬದುಕಿದರು. ಆ ದಾಸಿಯರಿಬ್ಬರನ್ನು ಆಗ್ರಾದ ಪೇಟೆಯಲ್ಲಿ ಹಿಡಿದು ಬೇಗಮಳ ಹತ್ತರ

---

2. "She has turned her attention to the agricultural improvement of her country. * * * Her fields look greener and more flourishing, and the population of her villages appears happier and more prosperous than those of the company's provinces. Her care is unremitting and her protection sure."



ತಂದರು. ವಿಚಾರಾಂತ್ಯದಲ್ಲಿ ಅವರಿಬ್ಬರೂ ದೋಷಿಗಳೆಂದು ಗೊತ್ತಾಯಿತು. ಬೇಗಮಳು ಅವರಿಬ್ಬರನ್ನು ಬೆತ್ತದಿಂದ ಹೊಡೆದು, ಅವರನ್ನು ಜೀವಂತ ಹುಗಿಯುವಂತೆ ಅಜ್ಞೆಮಾಡಿದಳು. ಇಷ್ಟರಿಂದಲೇ ಬೇಗಮಳ ತೃಪ್ತಿಯಾಗಲಿಲ್ಲೆಂದೂ, ಅವರನ್ನು ತನ್ನ ಶಯನಮಂದಿರದಲ್ಲಿ ಸಮಾಧಿಮಾಡಿಸಿ ಅದರ ಮೇಲೆ ತಾನು ಮಲಗಿದಳೆಂದೂ ಕೆಲವರು ಹೇಳುತ್ತಿರುವರು!

ಮೇಲಿನ ಸಂಗತಿಯು ಸತ್ಯಾಸತ್ಯತೆಯ ಬಗ್ಗೆ ವಿಚಾರಮಾಡಲಿಕ್ಕೆ ಮಾರ್ಗವಿಲ್ಲ. ಆದರೆ ಬೇಗಮಳು ದುಷ್ಟರ ಶಾಸನಕ್ಕಾಗಿ ಕೆಲಸಮಯದಲ್ಲಿ ಕಠಿಣಶಿಕ್ಷೆಯನ್ನು ವಿಧಿಸುತ್ತಿದ್ದಳೆಂಬದು ನಿಜವು. ಈಗಿನ ಸುಧಾರಣಾಕಾಲದ ದಂಡನೀತಿಯೊಡನೆ ಇದನ್ನು—ಜೀವಿತಾವಸ್ಥೆಯಲ್ಲಿ ಹುಗಿಸುವದನ್ನು ಹೋಲಿಸಿ ನೋಡಿದರೆ ಇದು ಅತ್ಯಂತ ಭಯಾನಕವೂ ಕ್ರೂರವೂ ಆಗಿರುವದೆಂದು ಹೇಳಬಹುದು. ನಾವಾದರೋ ಈ ತರದ ಕ್ರೂರ ಶಿಕ್ಷೆಯನ್ನು ಕೇಳಿ ಗದಗದನೆ ನಡಗುವೆವು. ಆದರೆ ಈ ಕಾಲದಲ್ಲಿ ಇದಕ್ಕಿಂತಲೂ ಕ್ರೂರವಾದ ಶಿಕ್ಷೆಗಳ ಕಥೆಯನ್ನು ಇತಿಹಾಸದಲ್ಲಿ ನೋಡಬಹುದಾಗಿದೆ. ಅದರಿಂದ ಶಿಕ್ಷೆವಿಧಿಸಲ್ಪಟ್ಟ ಆ ಸಮಯದ ವಿಚಾರವನ್ನು ಮನಸ್ಸಿನಲ್ಲಿ ತಂದರೆ ಬೇಗಮಳಿಗೆ ದೂಷಣೆಕೊಡಲಿಕ್ಕೆ ಬರುವಂತಿಲ್ಲ. ದೇಶ-ಕಾಲ-ಪಾತ್ರಗಳು ಬದಲಾದಂತೆ ದಂಡನೀತಿಯೂ ಬದಲಾಗಿದೆ.

ವರ್ತಮಾನಕಾಲದ ದಂಡನೀತಿಯೊಡನೆ ಆ ಕಾಲದ ಶಿಕ್ಷೆಯ ವಿಚಾರಮಾಡಿದರೆ ಕಾಲಗಣನಾದೋಷವು (Anachronims) ಆಗುವದು. ಇದು ಐತಿಹಾಸಿಕನಿಗೆ ಸಮ್ಮತವಲ್ಲ. ಇದಕ್ಕಾಗಿಯೇ ಪಂಡಿತಪ್ರವರನಾದ ಜಾರ್ಜನು ತನ್ನ Historical evidence ಗ್ರಂಥದಲ್ಲಿ ಹೀಗೆ ಬರೆದಿದ್ದಾನೆ:—

"Interpreting the past by the ideas of the present is, however, sure to pervert our

judgment as to motives and character. We have to guard against it first on our own account; century by century knowledge accumulates, and the standard of morality changes."

ಇಲ್ಲಿ ಹೇಳತಕ್ಕ ಮತ್ತೊಂದು ಸಂಗತಿಯೇನಂದರೆಃ — ಆಗಿನ ಕಾಲದಲ್ಲಿ ಬೇಗಮಳು ಅಪರಾಧಿಗಳಿಗೆ ಕ್ಷಮೆಮಾಡುವಂತಿರಲಿಲ್ಲ. ಯಾಕಂದರೆ ದೊಡ್ಡ ತಪ್ಪುಗಳನ್ನೆಲ್ಲ ಬೇಗಮಳು ಕ್ಷಮಿಸುತ್ತ ಹೋಗಿದ್ದರೆ, ಈ ಕ್ಷಮೆಯ ಮಹತ್ವವು ಅವಳ ಉದ್ಧಟ ಸೈನಿಕರಿಗೆ ತಿಳಿಯುತ್ತಿರಲಿಲ್ಲ; ಅವರು ಇದು ಬೇಗಮಳ ದುರ್ಬಲತೆಯ ಕಾರ್ಯವೆಂದು ಭಾವಿಸುತ್ತಿದ್ದರು; ಅದರಿಂದ ಆ ಸೈನಿಕರು ಮತ್ತಿಷ್ಟು ಉದ್ಧತರಾಗುತ್ತಿದ್ದರು. ಹೀಗಾಗಿದ್ದರೆ ಬೇಗಮಳು ರಾಜ್ಯವನ್ನು ಸಂರಕ್ಷಿಸುವದೇ ಕಠಿಣವಾಗುತ್ತಿತ್ತು.

ದುಷ್ಟರನ್ನು ದಂಡಿಸುವದೂ, ಶಿಷ್ಟರನ್ನು ಪಾಲಿಸುವದೂ ರಾಜಧರ್ಮವಾಗಿದೆ. ಇದಕ್ಕಾಗಿ ಅತ್ಯಂತ ಕ್ರಾಂತಿಕಾಲದಲ್ಲಿ ದುಷ್ಟರಿಗೆ ಕಠೋರ ಶಿಕ್ಷೆಯನ್ನು ವಿಧಿಸುವದು ಅವಶ್ಯವಾದದ್ದು; ಯಾಕಂದರೆ ಶಿಕ್ಷೆಯ ಕಠೋರತ್ವವನ್ನು ನೋಡಿ ದುಷ್ಟರಿಗೆ ಅನ್ಯಾಯ ಮಾಡಲಿಕ್ಕೆ ಅಂಜಿಕೆಬರುವದು. ಎಷ್ಟೋ ಇಂಗ್ಲಿಷ ಚರಿತ್ರಲೇಖಕರು ಇದನ್ನು ಅನುಮೋದಿಸಿದ್ದಾರೆ. ಅವರು "Punishment must have a deterent effect." ಎಂದು ಹೇಳುವರು.

ಬೇಗಮಳು ತನ್ನ ದಾಸಿಯರಿಬ್ಬರಿಗೆ ದೊಡ್ಡ ಶಿಕ್ಷೆಯ ವಿಧಿಸಿ, ದುಷ್ಟರಿಗೆ ಕಠೋರ ಶಿಕ್ಷೆಯನ್ನು ವಿಧಿಸಲಿಕ್ಕೆ ತಾನು ಎಂದೂ ಹಿಂದೆ ಮುಂದೆ ನೋಡುವವಳಲ್ಲೆಂಬದನ್ನು ತೋರಿಸಿಕೊಟ್ಟಳು. ಅವಳು ಅಬಲೆಯಾಗಿದ್ದರೂ ತನ್ನ ರಾಜ್ಯದ ಶಾಂತತೆಗಾಗಿ ಈ



ತರದ ಕಠೋರತ್ವವನ್ನವಲಂಬಿಸುವದು ಅವಶ್ಯವಾಗಿತ್ತು. ಇದೆಲ್ಲವನ್ನು ವಿಚಾರಮಾಡಿ ಸ್ಲೀಮನ್ನನೆಂಬ ದೂರದರ್ಶಿಯಾದ ಐತಿಹಾಸಿಕನು ಬೇಗಮಳ ಕೃತ್ಯವನ್ನು ಅನುಮೋದಿಸಿದ್ದಾನೆ.‡

ಬೇಗಮಳ ಅಪಮಾನದಿಂದ ಟಾಮಸನು ಕೆಲಸ ಬಿಟ್ಟು ಹೋದನೆಂದು ನಾವು ಮೊದಲು ಹೇಳಿದ್ದೇವೆ. ಲೆವ್ಹಾಸುಲ್ತನ ಮೃತ್ಯುವಿನ ತರುವಾಯ ಸೈನಿಕರು ಬೇಗಮಳನ್ನು ಸರ್ಧಾನಾಕ್ಕೆ ತಂದರು. ಆಗ ಅವಳು ಸೆರೆಯಲ್ಲಿದ್ದಳು; ಸೈನಿಕರು ಅವಳಿಗೆ ಆಹಾರ ಹಾಕುತ್ತಿರಲಿಲ್ಲ; ಅದರಿಂದ ಅವಳು ಉಪವಾಸ ನಿರಾಹಾರಗಳಿಂದ ಕೆಲವು ದಿವಸವಿರಬೇಕಾಗಿತ್ತು; ಆಗ ಅವಳಿಗೆ ಪ್ರತಿಕ್ಷಣ ಸಾಯುವ ಅಂಜಿಕೆಯಿತ್ತು. ಈ ಪ್ರಸಂಗದಲ್ಲಿ ಟಾಮಸನು ಪೂರ್ವದ ಅಪಮಾನವನ್ನು ಮರೆತು ಬೇಗಮಳ ಉದ್ಧಾರಕ್ಕೆ ಸಿದ್ಧನಾದನು. ಮತ್ತು ಅವನ ಪರಿಶ್ರಮದಿಂದ ಬೇಗಮಳು ಪುನಃ ಮೊದಲಿನ ಪದವಿಯನ್ನು ಹೊಂದಿದಳು.

ಬೇಗಮಳ ಮೇಲೆ ಸಿಟ್ಟಾಗಿ ಹೋದ ಟಾಮಸನು ಈ ಸಮಯದಲ್ಲಿ ಬೇಗಮಳಿಗೆ ಸಹಾಯ ಮಾಡಿದನೇಕೆ? ಟಾಮಸನು ಬೇಗಮಳ ಪ್ರಣಯಿಯಾಗಿದ್ದನೆಂದೂ, ಲೆವ್ಹಾಸುಲ್ತನು ಅವನ ಈ ಪ್ರಣಯಕ್ಕೆ ಅಡ್ಡಬಂದುದರಿಂದ ಟಾಮಸನು ಅವಮಾನಿತನಾಗಿ ಹೋದನೆಂದೂ, ಈ ಸಮಯದಲ್ಲಿ ಅಪೂರ್ವ ಪ್ರಯಣದ ಮೂಲಕ ಮತ್ತೆ ಬೇಗಮಳಿಗೆ ಸಹಾಯಕನಾದನೆಂದೂ ಕೆಲವರು ಹೇಳುತ್ತಿರುವರು. ಆದರೆ ಇದು ಸತ್ಯವೆಂದು ಹೇಳಲಿಕ್ಕೆ ಬರುವಂತಿಲ್ಲ.

---

‡ "I am satisfied that the Begam believed them quilty and that the pnnishment, horrible as it was, was merited. It certainty had the desired effect. My object has been to ascertain the truth, and to state it. and not to eulogise or defend the old Begam."

ಯಾಕಂದರೆ ಬೇಗಮಳು ಪುನಃ ಸಿಂಹಾಸನವೇರಿದಾಗ ಲೆವ್ಹಾಸು ಲ್ತನಿರಲಿಲ್ಲ; ಆಗ ಟಾಮಸನ ಇಚ್ಛೆಯಿದ್ದರೆ ಬೇಗಮಳ ಧನ-ಪ್ರಾಣ-ಮಾನಗಳೆಲ್ಲವೂ ಅವನ ಕೈವಶವಾಗುತ್ತಿದ್ದವು. ಹೆಚ್ಚೇನು; ಅವನೇ ಸರ್ಧಾನಾದ ಅರಸನಾಗಲಿಕ್ಕೆ ಬರುವಂತಿತ್ತು. ಆ ಸಮಯದಲ್ಲಿ ಅವನಿಗೆ ಅಡ್ಡಬರುವವರಾರೂ ಇರಲಿಲ್ಲ.

ಆದರೆ ಟಾಮಸನು ಇದನ್ನು ಮನಸ್ಸಿನಲ್ಲಿ ತರಲಿಲ್ಲ. ಬೇಗಮಳನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ಪುನಃ ತನ್ನ ಕೆಲಸಕ್ಕೆ ಹೊರಟುಹೋದನು. ಟಾಮಸನು ಕೇವಲ ಬೇಗಮಳ ರೂಪಕ್ಕಾಗಿ ಮೋಹಿತನಾಗಿದ್ದರೆ, ಈಗಲೂ ಬೇಗಮಳು ಪರಮಸುಂದರಿಯಾಗಿದ್ದಳು. ಇದರಿಂದ ಟಾಮಸನು ಬೇಗಮಳ ಪ್ರಣಯಪ್ರಾರ್ಥಿಯಾಗಿರದೆ, ಅವಳ ಗುಣಗಳನ್ನು ಪ್ರೀತಿಸುತ್ತಿದ್ದನೆಂದು ಹೇಳಬಹುದು. ಇದಕ್ಕಾಗಿ ನಾವು ಟಾಮಸನನ್ನು ಸ್ತುತಿಸದೆ ಇರಲಾರೆವು. ಮತ್ತು ವೀರಟಾಮಸನ ಮನಸ್ಸನ್ನು ಆಕರ್ಷಿಸಿಕೊಂಡ ಬೇಗಮಳ ಗುಣಗಳಾದರೂ ಸ್ತುತಿಗೆ ಯೋಗ್ಯವಾಗಿರುವದರಲ್ಲಿ ಸಂದೇಹವಿಲ್ಲ.

ಬೇಗಮಳು ಟಾಮಸನ ಈ ಉಪಕಾರವನ್ನು ಮರೆಯಲಿಲ್ಲ. ಸನ್ ೧೮೦೫ರಲ್ಲಿ ಟಾಮಸನು ಬಹರಮಪುರದಲ್ಲಿ ಮರಣಹೊಂದಿದನು. ಅವನ ದುಃಖಿತರಾದ ಕುಟುಂಬದ ಜನರ ಭಾರವನ್ನು ಬೇಗಮಳು ವಹಿಸಿದಳು. ಟಾಮಸನ ಮಗನಾದ ಜಾನಟಾಮಸನನ್ನು ತನ್ನಲ್ಲಿ ನವಕರಿಗಾಗಿ ಇಟ್ಟುಕೊಂಡಳು. ಮತ್ತು ತನ್ನೊಬ್ಬ ಸೈನಿಕನ ಮಗಳೊಡನೆ ಅವನ ವಿವಾಹವನ್ನು ಮಾಡಿದಳು.

ಕಡೆಯಲ್ಲಿ, ಬೇಗಮಳ ಉನ್ನತ ಚರಿತ್ರೆಯ, ಪರೋಪಕಾರ ಪ್ರವೃತ್ತಿಯ ಉತ್ತಮ ದೃಷ್ಟಾಂತ ಸ್ವರೂಪವಾಗಿರುವ, ಆಗಿನ ಕಾಲದ ಗವ್ಹರ್ನರ ಜನರಲ್ ಲಾರ್ಡಬೆಂಟಿಂಕನ ಒಂದು ಪತ್ರ



ವನ್ನು ಕೊಡುವೆವು. ಲಾರ್ಡಬೆಂಟಿಂಕನು ಅಧಿಕಾರ ಬಿಟ್ಟು ವಿಲಾಯತಿಗೆ ಹೋಗುವಾಗ ಬೇಗಮಳಿಗೆ ಈ ಮೇರೆಗೆ ಬರೆದಿದ್ದಾನೆ:—

ಭಾರತದ ಗವ್ಹರ್ನರ ಜನರಲ್ಲನಿಂದ ಈ ತರದ ಪ್ರಶಂಸಾಪತ್ರವನ್ನು ಪಡೆದ ಬೇಗಮಳು ಎಲ್ಲರಿಂದಲೂ ಹೊಗಳಿಸಿಕೊಳ್ಳಲಿಕ್ಕೆ ಯೋಗ್ಯಳಾಗಿರುವದರಲ್ಲಿ ಸಂದೇಹವಿಲ್ಲ.

ಈಗಲೂ ಆ ಸರ್ಧಾನಾ ಪಟ್ಟಣವಿದೆ—ಈಗಲೂ ಆ ಬೇಗಮಳ ಅರಮನೆಯದೆ–ಈಗಲೂ ಅವಳಿಂದ ಪ್ರತಿಷ್ಠಿತವಾದ ಪ್ರಾರ್ಥನಾಮಂದಿರವು ಅವಳ ನಾಮವನ್ನು ಘೋಷಿಸುತ್ತಿರುವದು. ಆದರೆ ಈ ಸರ್ಧಾನಾದಲ್ಲಿ ಅಮಿತತೇಜದಿಂದ ರಾಜ್ಯಕಾರಭಾರ ಮಾಡಿದ, ದುಃಖಿತರ ದುಃಖಗಳನ್ನು ಕಡಿಮೆ ಮಾಡಿದ, ಅನಾಥರಿಗೆ ಆಶ್ರಯಕೊಟ್ಟ ಆ ಬೇಗಮಳಿಲ್ಲ. ಈಗ ಆ ಸರ್ಧಾನಾದ ಜಹಾಗೀರು ಭಿನ್ನಭಿನ್ನವಾಗಿದೆ. ಆದರೆ ಬೇಗಮಳ ಖೀರ್ತಿಯು ಮಾತ್ರ ಸ್ಥಿರವಾಗಿದೆ.

" ಕೀರ್ತಿರ್ಯಸ್ಯ ಸ ಜೀವತಿ. "

ಬೇಗಮಳ ಖೀರ್ತಿಯು ಅವಳನ್ನು ಅಮರಳನ್ನಾಗಿ ಮಾಡಿದೆ. ನಿಷ್ಪಕ್ಷಪಾತಿ ಐತಿಹಾಸಿಕರು ಸಂಕೋಚವಿಲ್ಲದೆ ಹೇಳಿದ್ದೇನಂದರೆ:—

To

Her Highness
The Begam Sombre.

My esteemed friend,

I cannot leave India without expressing the sincere esteem I entertain for Your Highness's character. The benevolence of

disposition and extensive charity which have endeared you to thousands, have excited in my mind sentiments of the warmest admiration; and I trust that you may yet be preserved for many years, the solace of the orphan and widow, and the sure resource of your numerous dependants. Tomorrow morning I embark for England, and my prayers and best wishes attend you, and all others who like you, exert themselves for the benefit of the people of India.

CALCUTTA.
17th March 1835.

I remain
with much consideration
your sincere friend
**M. W. Bentinck.**



ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂ

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರು ಪುಸ್ತಕವನ್ನಿಟ್ಟುಕೊಳ್ಳ

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|
| | |

ಪುಸ್ತಕಸೂಚಿ

ವ. ಸಂ: V, 2 N20

ಕ್ರ. ಸಂ: 3328 .

ಲೇಖಕ: ಕುಲಕರ್ಣಿ (ಎಸ್ ಎ)
( )

ನಾಮ: ಬೇಗ ಮನೆ ಮರು.

ವ. ಸಂ: V, 2 N20

ಕ್ರ. ಸಂ: 3328 .

ಕ. ಸಾ. ಪ.
ಗ್ರಂಥ ಭಂಡಾರ